SRI R D. KITTUR.—I introduce :

"The Agricultural Produce Marketing (Regulation) (Amendment) Bill, 1976."

MADAM SPEAKER.—The Bill is introduced. * *

Motion of thanks to the Governor's Address Debate Conintued

ಶ್ರೀ ಎಸ್. ವಿ. ನಾಯಕ, (ಕುಮಟಾ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ನಿರ್ಣಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದಕ್ಕೆ ನಾನು ಮೊಟ್ಟಮೊದಲನೆಯದಾಗಿ ತಮಗೆ ಕೃತಜ್ಞತೆಯನ್ನು ಅರ್ಪಿಸಿ ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ. ದೇಶದ ಪ್ರಗತಿಯಾಗಬೇಕಾದರೆ ಸ್ವಾತಂತ್ರ್ಯ ಬೇಕು ಎಂಬ ಮಾತನ್ನು ಬಹುಶಃ ಎಲ್ಲರೂ ನಂಬುತ್ತಾರೆಂದು ನಾನು ನಂಬಿದ್ದೇನೆ. ಈ ಮಾತನ್ನು ವಿರೋಧಪಕ್ಷದವರೂ ಸಹ ಅಲ್ಲಗಳೆಯುವುದಿಲ್ಲ. ಆದರೆ ಸ್ವಾತಂತ್ರ್ಯ ಎಂಬುದು ಸ್ವೇಚ್ಛಾಚಾರವಾದಾಗ ಮಾತ್ರ ಸರ್ಕಾರ ಕಟ್ಟುನಿಟ್ಟಿನ ಧೋರಣೆಯನ್ನು ತಾಳಬೇಕಾಗುತ್ತದೆ. ಇದೇಕಾರಣದಿಂದ ದೇಶದಲ್ಲಿ ತುರ್ತುಪರಿಸ್ಥಿತಿಯನ್ನು ಸಾರಿ, ಈಗ 20 ಅಂಶಗಳ ಕಾರ್ಯಕ್ರಮವನ್ನು ಅನುಷ್ಠಾನದಲ್ಲಿ ತರುವುದರ ಮೂಲಕ ದೇಶದ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನ ಪಟ್ಟಿರುವುದು ಪ್ರಗತಿಪಥದಲ್ಲಿ ಒಂದು ಮೈಲುಗಲ್ಲಾಗಿದೆ ಎಂದು ನಾನಾದರೂ ಭಾವಿಸಿದ್ದೇನೆ. ಸಂವಿಧಾನದ ಮೂಲಕ ಆಯ್ಕೆ ಆದಂಥ ಸದಸ್ಯರನ್ನು ಘೇರಾವೊ ಮಾಡುವುದು, ಈ ದೇಶದ ಸರ್ವಶ್ರೇಷ್ಠ ನ್ಯಾಯಾಧೀಶರೊಬ್ಬರನ್ನು ಕಗ್ಗೊಲೆ ಮಾಡುವುದಕ್ಕೆ ಪ್ರಯತ್ನ ಮಾಡುವುದು, ಕೇಂದ್ರ ಸರ್ಕಾರದ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳೊಬ್ಬರ ಮೇಲೆ ಕೈಮಾಡುವುದು ಇಂತಹ ದುರುದ್ದೇಶ ಪೂರಿತವಾದಂಥ ವಾತಾವರಣ ದೇಶದಲ್ಲಿ ನಿರ್ಮಾಣವಾದಾಗ, ಅದನ್ನು ನಿಯಂತ್ರಣಕ್ಕೆ ತರುವ ಸಲುವಾಗಿ ಈ ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದಿದ್ದಾರೆಂದು ಮತ್ತು ಆ ರೀತಿ ಜಾರಿಗೆ ತಂದಿರುವುದು ಸಾಧುವಾದುದೆಂದು ನಾನು ಭಾವಿಸಿದ್ದೇನೆ. ಈ ಹಿಂದೆ ಕೆಲವು ವಿರೋಧ ಪಕ್ಷಗಳು ಸುಸಂಘಟಿತರಾಗಿ ಒಬ್ಬರಿಗೊಬ್ಬರು ಕೈಕುಲುಕಿಸಿಕೊಂಡು ಸಂಯುಕ್ತರಂಗದ ಸರ್ಕಾರಗಳನ್ನು ರಚನೆ ಮಾಡಿ ನಂತರ ತಾವೇ ನಂಬಿದ ತತ್ವಗಳನ್ನು ಗಾಳಿಗೆ ತೂರಿಬಿಟ್ಟರು, ಅದರೆ ಈಗ ಅಧಿಕಾರದಲ್ಲಿರುವ ಸರ್ಕಾರಗಳನ್ನು ಅವರೇ ವಿರೋಧ ಮಾಡುತ್ತಿರುವುದು ನಾಚಿಕೆಗೇಡಿನ ವಿಷಯವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರದಲ್ಲಿ ದಿನಕರ ದೇಸಾಯಿ ಅವರು ಹಿಂದೊಮ್ಮೆ ಈ ರೀತಿ ಅಭಿಪ್ರಾಯ ಪಟ್ಟಿದ್ದರು.—

''ಅಸ್ತಿತ್ವದಲ್ಲಿ ಬಂತು ಸಂಯುಕ್ತ ರಂಗ,
ಜಯ ಭೇರಿ ಹೊಡೆದು ಬಾರಿಸಿದರು ಮೃದಂಗ,
ಕಾಂಗ್ರೆಸ್ ಗತಿ ಏನಾಗುತ್ತೆ ಕಾಮರಾಜ,
ಸರಿಯಾಗಿ ಒಡೆಯುವೆವು ಹೋರಿಗಳ ಬೀಜ''

ಅವರು ಆಗ ಹೋರಿ ಬೀಜ ಹೊಡೆದರೋ ಏನೋ ಗೊತ್ತಿಲ್ಲ, ಆದರೆ ಈಗ ನಮ್ಮ ಪಕ್ಷದವರು ಹಸು ಮತ್ತು ಕರುವಿನ ಚಿಹ್ನೆಯನ್ನು ಇಟ್ಟುಕೊಂಡು ಸಮಗ್ರವಾದಂಥ ಸರ್ಕಾರವನ್ನು ನಡೆಸುತ್ತಿದ್ದೇವೆ. ಈ ವಿಚಾರವನ್ನು ನನ್ನ ಮಾನ್ಯ ಮಿತ್ರರಾದಂಥ ಕೋಣಂದೂರು ಲಿಂಗಪ್ಪನವರು ಸಹ ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ಇದೇ ಸಮಯದಲ್ಲಿ ನಮ್ಮ ಕರ್ನಾಟಕ ರಾಜ್ಯದ ಬಗ್ಗೆ ಕವಿಯೊಬ್ಬರು ಈ ರೀತಿ ಹೇಳಿದ್ದಾರೆ.—

'ದೇವ ಭಾಷೆಯ ಕೆಚ್ಚು, ವೇದಾಂತ ಮಾರ್ಗಗಳು,
ಮಾತಶತದ ಜನ್ಮಗಳು, ಸತ್ಯದಲಿ, ಧರ್ಮದಲಿ,
ಭೋಗದಲಿ, ಭಾಗ್ಯದಲಿ, ನಮ್ಮ ನಾಡಂತೆಬೇರೊಂದು ನಾಡುಂಟೆ ?'

* * Bills appended as Annexures to this Volume.

ಈ ಕವಿಯ ವಾಣಿ ಕರ್ನಾಟಕದ ಕಾರಣೀಪುರುಷ ಮುಖ್ಯಮಂತ್ರಿ ದೇವರಾಜ ಅರಸರಿಂದ ಸಾರ್ಥಕವಾಯಿತು.

ಪ್ರಗತಿಪಥದಲ್ಲಿ ಸಾಗುತ್ತಿರುವ ನಮ್ಮ ಸರ್ಕಾರದ ಈಗಿನ ಧೋರಣೆಗಳ ಬಗ್ಗೆ ಹೇಳಬೇಕೆಂದರೆ, ಈ ವರ್ಷದ ಡಿಸೆಂಬರ್ ಅಂತ್ಯದೊಳಗೆ ಭೂಸುಧಾರಣಾ ಕಾರ್ಯಕ್ರಮ ಮುಕ್ತಾಯಗೊಳ್ಳುತ್ತದೆ, ಇನ್ನೂ ಎರಡು ಲಕ್ಷ ನಿವೇಶನಗಳನ್ನು ಹಂಚುವ ಕಾರ್ಯಕ್ರಮವಿದೆ, ನೀರಾವರಿ ಸೌಕರ್ಯ ಹೆಚ್ಚಿಸುವ ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆ, ಜೀತ ಪದ್ಧತಿಯನ್ನು ನಿರ್ಮೂಲನ ಮಾಡಲಾಗಿದೆ, ಗ್ರಾಮಾಂತರ ಪ್ರದೇಶಗಳಲ್ಲಿರುವ ದುರ್ಬಲ ವರ್ಗದವರ ಋಣಭಾರವನ್ನು ಹೋಗಲಾಡಿಸಿದೆ, ಕೃಷಿ ಕಾರ್ಮಿಕರ ಕನಿಷ್ಠ ವೇತನವನ್ನು ಹೆಚ್ಚು ಮಾಡಲಾಗಿದೆ, ಇದಕ್ಕೆಲ್ಲಾ ಕಾರಣಪುರುಷರಾದವರು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ಮಂತ್ರಿಮಂಡಲದವರು ಎಂದು ನಾನು ಅತ್ಯಂತ ಅಭಿಮಾನದಿಂದ ಹೇಳುತ್ತಿದ್ದೇನೆ. ಸರ್ಕಾರದವರು ಇಷ್ಟೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವಾಗ, ನಾನೂ ಸಹ ನನಗೆ ತಿಳಿದಮಟ್ಟಿಗೆ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಭೂಸುಧಾರಣೆಯ ಕಾರ್ಯಕ್ರಮವನ್ನು ಈ ವರ್ಷದ ಡಿಸೆಂಬರ್ ತಿಂಗಳೊಳಗಾಗಿ ಮುಕ್ತಾಯಗೊಳಿಸಬೇಕೆಂದಿರುವಾಗ, ಅದನ್ನು ಜಾರಿಗೆ ತರುವಾಗ ಬರತಕ್ಕಂಥ ಅಡೆತಡೆಗಳ ಕಡೆಗೆ ಲಕ್ಷ್ಯ ಕೊಟ್ಟು ಅವನ್ನು ನಿವಾರಣೆ ಮಾಡಬೇಕಾಗುತ್ತದೆ. ನಮ್ಮ ಮಲೆನಾಡು ಜಿಲ್ಲೆಗಳ ಪೈಕಿ ಉತ್ತರಕನ್ನಡ ಜಿಲ್ಲೆಯಲ್ಲಿ ಈ ಭೂಸುಧಾರಣಾ ಕಾನೂನನ್ನು ಅನುಷ್ಠಾನದಲ್ಲಿ ತರುವ ವಿಚಾರದಲ್ಲಿ ದಿಗ್ವಿಜಯ ಸ್ಥಾಪಿಸಲಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಶ್ರೀ ಕೋಣಂದೂರು ಲಿಂಗಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿಯೂ ಸಹ ಆ ಕೆಲಸ ಮುಗಿಯುತ್ತಾ ಬಂದಿದೆ.

ಶ್ರೀ ಎನ್. ವಿ. ನಾಯಕ.—ಇರಬಹುದು, ನಮ್ಮ ಜಿಲ್ಲೆಯ ಕುಮಟ, ಅಂಕೋಲ ಭೂ ಪಂಚಾಯಿತಿಯವರು ಈಗಾಗಲೇ ಕ್ರಮವಾಗಿ ಮೂರೂವರೆ ಸಾವಿರ ಮತ್ತು ನಾಲ್ಕು ಸಾವಿರ ಅರ್ಜಿಗಳನ್ನು ಇತ್ಯರ್ಥ ಮಾಡಿದ್ದಾರೆ. ಈ ವರ್ಷದ ಡಿಸೆಂಬರ್ ಅಂತ್ಯದೊಳಗಾಗಿ ಎಲ್ಲ ಅರ್ಜಿಗಳನ್ನೂ ಸಂಪೂರ್ಣವಾಗಿ ಇತ್ಯರ್ಥಮಾಡಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಇದಕ್ಕೆ ಸರ್ಕಾರದವರು ಸಹ ತಮ್ಮ ಸಹಕಾರವನ್ನು ಕೊಡಬೇಕಾಗುತ್ತದೆ. ಏಕೆಂದರೆ ಮಲೆನಾಡು ಜಿಲ್ಲೆಗಳಲ್ಲಿ ಕಷ್ಟಕಾರ್ಪಣ್ಯಗಳು ಜಾಸ್ತಿ ಇರುತ್ತವೆ. ಅದನ್ನು ಸರ್ಕಾರ ಗಮನಿಸಬೇಕಾಗುತ್ತದೆ. ಅಲ್ಲಿ ಭೂಮಾಲೀಕತ್ವವನ್ನು ನಿರ್ಧಾರ ಮಾಡುವುದು ಸ್ವಲ್ಪ ಕಷ್ಟದ ಕೆಲಸ, ಕೆಲವು ಕಡೆಗಳಲ್ಲಿ ಹಳ್ಳಗಳಿರುತ್ತವೆ, ಗುಡ್ಡಗಳಿರುತ್ತವೆ, ಇವುಗಳನ್ನು ಬಿಟ್ಟು ಕೇವಲ 3-4 ಗುಂಟೆಗಳಿಗೆ ಭೂ ಮಾಲೀಕರಾಗುವವರೂ ಸಹ ಇರುತ್ತಾರೆ. ಅದರಲ್ಲಿಯೂ ಮುಖ್ಯವಾಗಿ ನಮ್ಮ ಭಟ್ಕಲ್, ಅಂಕೋಲ, ಕುಮಟಾ, ಹೊನ್ನಾವರ ಇಲ್ಲೆಲ್ಲಾ ಇದೇ ಪರಿಸ್ಥಿತಿ ಇದೆ. ಯಾವಯಾವ ಭೂಪಂಚಾಯಿತಿಗಳಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಅರ್ಜಿಗಳಿರುತ್ತವೋ ಅಂತಹ ಕಡೆಗಳಿಗೆ ಸರ್ಕಾರದವರು ಹೆಚ್ಚಿನ ಸಿಬ್ಬಂದಿ ವರ್ಗವನ್ನು ಜಾಗ್ರತೆ ಕೆಲಸವಾಗಲು ಕೊಡಬೇಕು. ಈ ಬಗ್ಗೆ ಸರ್ಕಾರದವರು ಸ್ಪಷ್ಟವಾದಂಥ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಈ ವರ್ಷದ ಅಂತ್ಯದೊಳಗೆ ಈ ಕೆಲಸವಾಗಬೇಕೆಂಬ ಗುರಿಯನ್ನು ಸರ್ಕಾರ ಇಟ್ಟುಕೊಂಡಿರುವಾಗ, ಪಂಚಾಯಿತಿಯವರು ಪ್ರತಿ ತಿಂಗಳೂ ಸಂಬಂಧಪಟ್ಟವರಿಗೆ ಒಂದೂವರೆ ಸಾವಿರ ನೋಟೀಸ್‌ಗಳನ್ನು ಕಳುಹಿಸಿ ಕೊಡಬೇಕಾಗುತ್ತದೆ. ಈ ನೋಟೀಸ್‌ಗಳನ್ನು ವಿಲೇವಾರಿ ಮಾಡುವವರು ಉಗ್ರಾಣಿಗಳಾಗಿದ್ದಾರೆ. ಬೇರೆ ಜಿಲ್ಲೆಗಳಲ್ಲಿ ಇವರು ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ; ಆದರೆ ನಮ್ಮ ಜಿಲ್ಲೆಯಲ್ಲಿ ಇವರು 80 ರಿಂದ ನೂರರವರೆಗೆ ಇದ್ದಾರೆ. ಇವರಿಗೆ ತಿಂಗಳಿಗೆ ಕೇವಲ 60 ರೂಪಾಯಿಗಳನ್ನು ಸಂಬಳ ರೂಪದಲ್ಲಿ ಕೊಡಲಾಗುತ್ತಿದೆ. ಅಂದರೆ ದಿನಕ್ಕೆ ಎರಡು ರೂಪಾಯಿ ಆಯಿತು; ಇದರಿಂದ ಅವರು ಯಾವ ರೀತಿ ಜೀವನ ಮಾಡಲು ಸಾಧ್ಯ ? ಈ ನೋಟೀಸ್‌ಗಳನ್ನು ವಿಲೆವಾರಿ ಮಾಡುವುದರ ಜೊತೆಗೆ ಅವರುಗಳು ಕಂದಾಯದ ಬಾಕಿ ವಸೂಲು ಮಾಡುವುದರ ಬಗ್ಗೆ, ಗೇಣಿ ವಸೂಲಿ ಮಾಡುವುದರ ಬಗ್ಗೆ ಅವರು ಸಹಾಯ ಮಾಡುತ್ತಿದ್ದಾರೆ. ಇಷ್ಟೊಂದು ಕೆಲಸಗಳನ್ನು ಇವರು ಮಾಡುತ್ತಿದ್ದರೂ ಸಹ ಅವರ ಸಂಬಳವನ್ನು ಮಾತ್ರ ಹೆಚ್ಚು ಮಾಡಿಲ್ಲ, ಬೇರೆಯವರಿಗೆ ಕನಿಷ್ಠ ವೇತನವನ್ನು ನಿಗದಿ ಮಾಡುವಾಗ ಇವರ

ಕಡೆಗೂ ಲಕ್ಷ್ಯ ಕೊಡಬೇಕೆಂದು ಮಾನ್ಯ ಕಂದಾಯ ಮಂತ್ರಿಯವರಲ್ಲಿ ಮತ್ತು ಮಾನ್ಯ ಅರ್ಥಿಕ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಆ ರೀತಿ ಮಾಡಿದ್ದೇ ಆದರೆ ಅವರು ತಮ್ಮ ಕೆಲಸವನ್ನು ಇನ್ನೂ ಚೆನ್ನಾಗಿ ಮಾಡುವುದಕ್ಕೆ ಅವಕಾಶವಾಗುತ್ತದೆಂದು ನಾನು ಭಾವಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಶೇಕಡಾ 80 ಭಾಗದಷ್ಟು ಅರಣ್ಯವಿದೆ. ಈಗ ಆ ಭಾಗದಲ್ಲಿ ಕಾಳಿ ನದಿ ಯೋಜನೆ ತೀವ್ರಗತಿಯಲ್ಲಿ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಆ ಜಿಲ್ಲೆಯ ಸುಶಿಕ್ಷಿತ ನಿರುದ್ಯೋಗಿಗಳ ಕೂಗು ಅರಣ್ಯರೋದನವಾಗದಂತೆ ನೋಡಿಕೊಳ್ಳಬೇಕೆಂದು ಸರ್ಕಾರಕ್ಕೆ ಹೇಳುತ್ತೇನೆ. ಈ ಬಗ್ಗೆ ಸರ್ಕಾರದವರು ನಮ್ಮ ಜಿಲ್ಲೆಯನ್ನು ಮಲತಾಯಿ ಧೋರಣೆಯಿಂದ ನೋಡದೆ ಆ ಜಿಲ್ಲೆಯವರಿಗೆ ಸೂಕ್ತ ಉದ್ಯೋಗಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯ ಯುವಕರು ಬುದ್ಧಿವಂತಿಕೆಯಲ್ಲಿ ಕಡಿಮೆ ಏನೂ ಇಲ್ಲ, ಆದಕಾರಣ ಆ ಯುವ ಶಕ್ತಿಯನ್ನು ಸರಿಯಾಗಿ ಸರ್ಕಾರದವರು ಉಪಯೋಗಿಸಿಕೊಂಡಿದ್ದೇ ಆದರೆ ಅದರ ಮೂಲಕ ಈ ರಾಜ್ಯದ ಹಾಗೂ ರಾಷ್ಟ್ರದ ಅಭ್ಯುದಯವಾಗುತ್ತದೆಂದು ಹೇಳುತ್ತೇನೆ.

ಮೂರನೆಯದಾಗಿ ನಮ್ಮ ಅರಣ್ಯ ಇಲಾಖೆಯಲ್ಲಿರುವ ಧೋರಣೆಯನ್ನು ಸರ್ಕಾರದ ಧೋರಣೆಯನ್ನು ಅಲ್ಲಗಳೆಯುತ್ತಿದ್ದೇನೆಂದು ಭಾವಿಸಬಾರದು. ನಮ್ಮ ಸ್ಥಳೀಯ ಸಮಸ್ಯೆಗಳನ್ನು ನೋಡಬೇಕು. ಏತಕ್ಕೆಂದರೆ ಅರಣ್ಯಕ್ಕೆ ಸೇರಿದ ಜಮೀನುಗಳನ್ನು ಬೇರೆಯವರು ಅಕ್ರಮಣ ಮಾಡಿಕೊಂಡು ಸರ್ಕಾರಕ್ಕೆ ಮತ್ತು ಸರ್ಕಾರದ ನೀತಿಗೆ ವ್ಯತಿರಿಕ್ತವಾಗಿ ಮಾಡುವುದು ಸರಿಯಲ್ಲ. ನಾನು ಮಾತ್ರ ಸರ್ಕಾರದ ನೀತಿಯನ್ನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಕರಾವಳಿಯ ಪ್ರದೇಶದಲ್ಲಿ ಅದರ ಪಕ್ಕದ ದಂಡೆಗಳ ಉದ್ದಕ್ಕೂ ನಾವು ಎಷ್ಟು ದೂರ ಹೊರಟರೂ ಅಲ್ಲಿನ ಪ್ರದೇಶ ಇಳಿಜಾರು ಮತ್ತು ಗಾಳಿ ಬಿಸಿಲು ಇರುತ್ತದೆ. ಅಲ್ಲಿನ ಭೂಗುಣ ಮತ್ತು ಹವಾಮಾನದ ವಾತಾವರಣದಿಂದ ಪ್ರತಿ ವರ್ಷ ಉತ್ಪತ್ತಿಯಾದ ಮ್ಯಾಂಗೋ ಪಲ್ಪನ್ನು ಪಾಶ್ಚಿಮಾತ್ಯ ದೇಶಗಳಿಗೆ ರವಾನೆ ಮಾಡುತ್ತಿದ್ದಾರೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ರೀತಿ ಮಾಡುತ್ತಿರುವುದನ್ನು ನಿಲ್ಲಿಸಬೇಕು. ಅದು ಹಾಗೆ ಆಗಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಆ ಮೇಲೆ ನಮ್ಮ ಅರಣ್ಯದ ಜಮೀನನ್ನು ಅಕ್ರಮಣ ಮಾಡಿಕೊಂಡು ಅದರಿಂದ ಫಸಲು ಏನು ಬೆಳೆಯುತ್ತಾರೆ ಅದನ್ನು ಯಾರು ಯಾರು ಅಕ್ರಮಣ ಮಾಡಿದ್ದಾರೆ ಅವರು ಆ ಬೆಳೆಯನ್ನೆಲ್ಲಾ ತೆಗೆದುಕೊಳ್ಳುತ್ತಿದ್ದಾರೆ. ಆ ಇಳಿಜಾರು ಪ್ರದೇಶದಲ್ಲಿ ತೆಂಗು ಮಾವು ಬೆಳೆಯುತ್ತಾರೆ. ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಳ್ಳದೆ ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಅಂತಹ ಸಂದರ್ಭದಲ್ಲಿ ಹಣ್ಣು ಹಂಪಲು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಇದರ ಬಗ್ಗೆ ಆಸಕ್ತಿ ವಹಿಸಬೇಕೆಂದು. ಹಾರ್ಟಿಕಲ್ಚರ್ ಮಂತ್ರಿಗಳನ್ನು ಕೇಳುತ್ತೇನೆ. ಈ ರೀತಿ ಮಾಡಲು ಸಾಧ್ಯವಿಲ್ಲದೆ ಹೋದರೆ ಗುತ್ತಿಗೆ ಮೇಲೆ ಕೊಟ್ಟು ನಮ್ಮ ದೇಶದ ಸಂಪನ್ಮೂಲಗಳನ್ನು ಹೆಚ್ಚಿಸಬೇಕೆಂದು ಇದಕ್ಕೆ ಸರ್ಕಾರ ಸಹಕಾರ ಕೊಡುತ್ತದೆಂದು ನಾನು ಭಾವಿಸುತ್ತೇನೆ. ಇಷ್ಟು ಹೇಳಿ ಕರ್ನಾಟಕದ ರಾಜ್ಯ ಇತಿಹಾಸದಲ್ಲಿ ಮೊದಲನೆ ಪ್ರಾತಿನಿಧ್ಯವನ್ನು ನಮ್ಮ ಹೊನ್ನಾವರಕ್ಕೆ ಒಂದು ಘನವಾದ ಸ್ಥಾನವನ್ನು ಅಂದರೆ ಮೀನುಗಾರಿಕೆ ಅಭಿವೃದ್ಧಿಗೆ 45 ಲಕ್ಷರೂಪಾಯಿಗಳನ್ನು ದೊರಕಿಸಿಕೊಟ್ಟಿದೆ. ಅದಕ್ಕೆ ನಮ್ಮ ಸರ್ಕಾರವನ್ನು ಅಭಿನಂದಿಸುತೇನೆ, ಕೊನೆಯದಾಗಿ ನನಗೆ ಶ್ರೀಮಾನ್ ಗೋಪಾಲಕೃಷ್ಣ ಅಡಿಗರವರು ಹೇಳಿದಂತಹ ಒಂದು ನುಡಿ ಜ್ಞಾಪಕ್ಕೆ ಬರುತ್ತದೆ. ಅದು ಏನೆಂದರೆ ಇರುವವನು ಎಲ್ಲವನ್ನು ಅವನೇ ಅನುಭವಿಸದೆ ಇಲ್ಲದೆ ಇರತಕ್ಕಂಥ ಜನರಿಗೆ ದೊರಕಿಸಿಕೊಟ್ಟು ಸಮ ದುಂಖಃ ಸಮ ಸಂತೃಪ್ತಿಯನ್ನು ಸಮವಾಗಿ ಹಂಚಿಕೊಳ್ಳಬೆಕೆಂದು ಅವರು ಹೇಳಿದ ನುಡಿ ಜ್ಞಾಪಕಕ್ಕೆ ಬರುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳನ್ನು ಮತ್ತು ನಮ್ಮ ಮಂತ್ರಿಮಂಡಲವನ್ನು ಅಭಿನಂದಿಸಿ ಸರ್ಕಾರದ ಕೆಲಸಕಾರ್ಯಕ್ಕೆ ನಮ್ಮ ವಿರೋದಪಕ್ಷ ಸಹಕಾರ ಕೊಡುತ್ತದೆಂದು ಭಾವಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಮಂಡಿಸಿರತಕ್ಕ ವಂದನಾ ನಿರ್ಣಯವನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ವಿರೋಧಪಕ್ಷದವರು ಹೇಳತಕ್ಕಂಥ ತಿಳುವಳಿಕೆಗಳು ಎಲ್ಲಾ ಬರೀ ಅರಣ್ಯ ರೋದನವಾಗಿ ಪರಿಣಮಿಸುತ್ತದೆಂದು ನನಗನಿಸುತ್ತದೆ. ಕಾರಣವಾದರೂ ಇಷ್ಟೆ. ಏನೂ ನಾವು ಹೊರಗಡೆ ಮಾತನಾಡುವಂತಿಲ್ಲ, ಇದ್ದ

ದ್ದನ್ನು ಇದ್ದಂತೆ ಹೇಳುವಂತಿಲ್ಲ. ಈ ಸರ್ಕಾರ ಏನು ಅಧಿಕಾರ ನಡೆಸುತ್ತಿದೆ ಅದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅದನ್ನು ತಿದ್ದಿಕೊಳ್ಳಲಿ ಎಂದು ಪ್ರಜಾಪ್ರಭುತ್ವದ ದೃಷ್ಟಿಯಿಂದ ಮತ್ತು ದೇಶದ ಹಿತದೃಷ್ಟಿಯಿಂದ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಟ್ಟರೆ ಅದನ್ನು ಮಂತ್ರಿಗಳು ಕೂಡ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದು ಕೇವಲ ಅರಣ್ಯರೋದನವಾಗುತ್ತದೆ ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ದಿವಸ ಶಾಸನ ಸಭೆ ಸೇರಿದ ದಿವಸ ನಮ್ಮ ಕಾರ್ಯಕ್ರಮ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ದೇಶದ ಹಿತದೃಷ್ಟಿಯಿಂದ ಮತ್ತು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಕೆಲಸಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಾವು ಶಾಸನ ಸಭೆಯನ್ನು ಬಾಯ್‌ಕಾಟ್ ಮಾಡುತ್ತೇವೆಂದು ಅಧಿವೇಶನ ಸೇರುವುದಕ್ಕೆ ಮುಂಚೆ ನಮ್ಮ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರು ಒಂದು ಮೆಮೊರಂಡಮ್ ಕೊಟ್ಟರು ಅದು ಏನಾಯಿತು ಎಂದು ಗೊತ್ತಾಗಲಿಲ್ಲ. ಈ ಸಂದರ್ಭದಲ್ಲಿ ಇನ್ನೂ ಒಂದು ಸಾರಿ ಅದನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

Dated : 2nd February 1976

"SHRI UMA SHANKAR DIKSHIT"
Governor of Karnataka,
Raj Bhavan, Bangalore.

Respected Sir,

We the Members of the Karnataka Legislature belonging to the non-CPI Opposition have decided to boycott your Address to the Joint Session of Karnataka Legislature because of our resentment towards the policies adopted by the Central and State Governments.

Even after a lapse of six months since the state of Emergency was proclaimed in June 1975 there is no sign of abatement in the dictatorial methods of Government which have done incalculable harm to the fundamental rights and liberties of the Indian people.

Apart from other curbs imposed in the name of maintaining law and order there is no attempt at all to relieve the agonies of the Indian multitude who are ground down under.—

i. total censoiship of the press;

ii. indiscriminate arrests of political workers in the State;

iii. arrests of leaders of Opposition of both the Assembly & Council in Karnataka State;

iv. detention of Opposition leaders & workers in Karnataka;

v. Unwarranted continuance of the Emergency.

In fact there is absolutely no congenial political atmosphere for the Opposition to serve the people in representative capacities. In order to express our resentment at the turn of events we

abstain from your address. While doing so we assure you that we do not mean any disrespect to you in person or to the Office you are holding.

MEMBERS OF THE OPPOSITION.

sd. H. T. KRISHNAPPA, MLA,
Ag Leader of the Opposition in the Assembly.

sd. S. R. BOMMAI, MLC,
Ag Leader of the Opposition in the Council & Others.

ಅಧ್ಯಕ್ಷರೇ, ಈ ವಂದನಾ ನಿರ್ಣಯವನ್ನು ಮಂಡಿಸುವ ಸಮಯದಲ್ಲಿ ಮಾನ್ಯ ಪುಟ್ಟಸ್ವಾಮಿಯವರು ಮೂರು ಗಂಟೆಗಳ ಕಾಲ ಈ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಮಾಡಿದಂತಹ ಸಾಧನೆಗಳ ಒಂದು ದೊಡ್ಡ ಪಟ್ಟಿಯನ್ನು ಇಟ್ಟು ವಿವರಿಸುತ್ತಾ ದೇಶದ ಹಿತದೃಷ್ಟಿಯಿಂದ ಬಹಳ ಉಪಯುಕ್ತಸಾಧನೆಗಳನ್ನು ಮಾಡಿದ್ದಾರೆ ಎಂದು ಬಹಳ ಶ್ರಮಪಟ್ಟು ಹೇಳಿದರು. ನಾನು ಕೂಲಂಕುಷವಾಗಿ ಅವರ ಭಾಷಣವನ್ನು ಕೇಳಿ ತಿಳಿದುಕೊಂಡಿದ್ದೇನೆ. ಮಾನ್ಯ ಪುಟ್ಟಸ್ವಾಮಿಯವರು ನಮ್ಮ ಸರ್ಕಾರ ಬಹಳ ಒಳ್ಳೆಯ ಕೆಲಸಕಾರ್ಯಗಳನ್ನು ವ್ಯವಸಾಯಗಾರರಿಗೆ ಮಾಡಿದ್ದಾರೆ ಅದರಿಂದ ನಮ್ಮ ದೇಶ ಆಹಾರದಲ್ಲಿ ಬಹಳ ಸ್ವಾವಲಂಬನೆಯನ್ನು ಸಾಧಿಸಿದೆ ಎಂದು ಹೇಳಿದರು. ಆಹಾರದ ಸಮಸ್ಯೆಯನ್ನು ಬಹಳಮಟ್ಟಿಗೆ ಪರಿಹಾರ ಮಾಡಿದ್ದಾರೆ. ಎಂದು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅಂಕಿಅಂಶಗಳನ್ನು ಕೊಟ್ಟು ಹೇಳಿದ್ದಾರೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಕೇಂದ್ರಕ್ಕಿಂತಲೂ ನಮ್ಮ ರಾಜ್ಯಸರ್ಕಾರ ಈ ಒಂದು ದಿಶೆಯಲ್ಲಿ ಮುಂದೆ ಇದೆಯೆಂದು ಸಹ ಹೇಳಿದರು. ಇದು ಬಹುಶಃ ಹೆಮ್ಮೆಯ ಸಾಧನೆಯೆಂದು ಹೇಳಿದರೂ ತಪ್ಪಾಗಲಿಕ್ಕಿಲ್ಲವೆಂದು ಹೇಳಿದರು. ಇನ್ನು ಕೃಷ್ಣಾ ಮೆಲ್ದಂಡೆಯಿಂದ ದೇಶದ ಕಷ್ಟವನ್ನೆಲ್ಲಾ ಪರಿಹಾರ ಮಾಡುತ್ತದೆಂದು ಹೇಳಿದರು. ನಾನು ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರ 1972ರ ಚುನಾವಣೆಯ ಕಾಲದಲ್ಲಿ ಏನು ಭರವಸೆಗಳನ್ನು ಕೊಟ್ಟು ಅಧಿಕಾರಕೆ ಬಂದರು ಅದನ್ನು ಇವರು ಪೂರೈಸಿದ್ದಾರೆಯೇ? ಇವರ ಸರ್ಕಾರ ಬಂದ ಮೇಲೆ ಅನೇಕ ವಿಧವಾದ ಟ್ಯಾಕ್ಸ್‌ಗಳನ್ನು ಹಾಕಿದ್ದಾರೆ. ಜೊತೆಗೆ ಅದನ್ನು ಕಲೆಕ್ಟ್ ಕೂಡಾ ಮಾಡಿದ್ದಾರೆ ಜೊತೆಗೆ ಕೆಲವು ಉಪಯುಕ್ತ ಕೆಲಸಗಳನ್ನು ಮಾಡಿದ್ದಾರೆ ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಅದರಿಂದ ಸಾಮಾನ್ಯ ಜನರಿಗೆ ಏಷ್ಟು ಉಪಯುಕ್ತವಾಗಿದೆ ಎನ್ನುವುದು ಪ್ರಶ್ನೆ?

2-00 P.M.

ಈಗಾಗಲೇ ಅನೇಕ ಹರಿಜನರಿಗೆ, ಗಿರಿಜನರಿಗೆ ಸೈಟುಗಳನ್ನು ಕೊಟ್ಟಿದ್ದಾರೆ, ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ, ಇನ್ನೂ ಹೆಚ್ಚಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆಮಾಡಿದ್ದಾರೆ. ಹೀಗೆ ಅನೇಕ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಈ ಬಾಬಿಗೆ ಒದಗಿಸಲಾಗಿರುವ ಹಣ ಸರಿಯಾಗಿ ಸದ್ವಿನಿಯೋಗವಾಗಿದ್ದರೆ ಈ ದೇಶದಲ್ಲಿ ನಿಜವಾಗಿಯೂ ಇನ್ನೂ ಹೆಚ್ಚಿಗೆ ಉತ್ಪತ್ತಿಪಡೆಯುವುದಕ್ಕೆ ಸಾಧ್ಯವಾಗುತ್ತಿತ್ತು. 1972ನೇ ಇಸವಿಯಲ್ಲಿ ಈ ದೇಶದಲ್ಲಿ ಜನ ಯಾವ ಮಟ್ಟದಲ್ಲಿದ್ದರೋ, ಜನತೆ ಯಾವ ಒಂದು ಶಕ್ತಿ ಸಾಮರ್ಥ್ಯಗಳಿಂದ ದುಡಿಯುತ್ತಿದ್ದರೋ, ಎಷ್ಟು ಉತ್ಪತ್ತಿಯನ್ನು ಮಾಡುತ್ತಿದ್ದರೋ ಆ ಒಂದು ಮಟ್ಟಕ್ಕೆ ಪುನಃ ಈ ದೇಶವನ್ನು ತೆಗೆದುಕೊಂಡು ಹೋಗಿಬಿಟ್ಟರೆ, ನಿಜವಾಯೂ ಈ ಸರ್ಕಾರಕ್ಕೆ ನಾನು ಜನತೆಯ ಪರವಾಗಿ ಮನ್ನಣೆಗಳನ್ನು ಅರ್ಪಿಸುತ್ತೇನೆ. ಏಕೆಂದರೆ ನಾನು ಸ್ವತಃವಾಗಿ ಒಂದು ಮಾತನ್ನು ಹೇಳುತ್ತೇನೆ. 1970ನೇ ಇಸವಿಗೆ ಮುಂಚೆ ನಮ್ಮ ಮನೆಯ ಸಂಸಾರಕ್ಕೆ ಕೇವಲ 200 ರೂಪಾಯಿಗಳು ಸಾಕಾಗುತ್ತಿತ್ತು.

ನನ್ನ ಮನೆಯಲ್ಲಿ ನನ್ನ ಎರಡು ಮಕ್ಕಳು. ನನ್ನ ಹೆಂಡತಿ ಎಲ್ಲರೂ ಸುಖವಾಗಿ ಜೀವನಮಾಡುತ್ತಿದ್ದೆವು. ಆದರೆ ಈಗ ನನಗೆ ಸಾಕಷ್ಟು ಅನುಕೂಲವಿವೆ, ಬೆಳೆ ಬೆಳೆಯುತ್ತೇವೆ. ಆದರೂ ಇವತ್ತು ತಿಂಗಳಿಗೆ 600–700 ರೂಪಾಯಿಗಳಷ್ಟು ಇದ್ದರೂ ಜೀವನ ಮಾಡುವುದಕ್ಕಾಗುವುದಿಲ್ಲ. ಸಾಮಾನ್ಯ ಗೃಹಿಣಿಯೊಬ್ಬಳನ್ನು ನಾನು ವಿಚಾರಮಾಡಿದಾಗ್ಗೆ, ಆಕೆ ಯಾವ ರೀತಿ ಜೀವನಮಾಡುತ್ತಿದ್ದಾಳೆಂಬ ಬಗ್ಗೆ ಕೆಲವಾರು ವಿಚಾರಗಳನ್ನು ಹೇಳಿದಳು. ಆಕೆ ಹೇಳಿದ ಮಾತುಗಳನ್ನು ಇಲ್ಲಿ ನಾನು ಹೇಳುವುದಕ್ಕೆ ಬಯಸುವುದಿಲ್ಲ. ಆಕೆ ಹೇಳಿದ ಭಾಷೆಯನ್ನು ಈ ಸಭೆಯಲ್ಲಿ ಹೇಳುವುದಕ್ಕೆ ಸೂಕ್ತ ಸಮಯವೂ ಅಲ್ಲ, 1970ನೇ ಇಸವಿಯಲಿ ಚುನಾವಣೆಯಾದ ವೇಳೆ 27 ಜನ ನಮ್ಮ ಮೈಸೂರಿನಿಂದ ಲೋಕಸಭಾ ಸದಸ್ಯರಾಗಿ ಚುನಾಯಿಸಿದ್ದಾಗ್ಗೆ, ಕೇವಲ ಸಾಧಾರಣವಾಗಿ ಸಂಸಾರಮಾಡುವವರಿಗೆ ಸುಮಾರು 200-300 ರೂಪಾಯಿಗಳಲ್ಲಿ ಏನೂ ಯೋಚನೆ ಇಲ್ಲದೆ ಬಹು ಚೆನ್ನಾಗಿ ಜೀವನ ನಡೆಯುತ್ತಿತ್ತು. ಇವತ್ತಿನದಿವಸ 600–700 ರೂಪಾಯಿಗಳಷ್ಟು ಖರ್ಚುಮಾಡಿದರೂ ಜೀವನ ಸಾಗಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅನೇಕ ಜನರು ಅದರಲ್ಲಿಯೂ ಹತಭಾಗ್ಯ ಗೃಹಿಣಿಯರು ಒಂದು ಹೊತ್ತು ಊಟಮಾಡಿ ಮಕ್ಕಳ ಹಸಿವನ್ನು ನೀಗದೆ ಉಪವಾಸದಿಂದ ರಾತ್ರಿಕಳೆದು ಮಲಗುತ್ತಿದ್ದಾರೆ. ಇಂತಹವರು ದೇಶದಲ್ಲಿ ಲಕ್ಷಾಂತರ ಜನರು ಇದ್ದಾರೆ. ನಾನು ಈ ವಿಚಾರವನ್ನು ಕೇಂದ್ರಸರ್ಕಾರದ ಅಂಕಿಅಂಶಗಳ ಪ್ರಕಾರ ಹೇಳುತ್ತಿದ್ದೇನೆ. ಇಂದು ಬಡತನದ ರೇಖೆ ತುಂಬಾ ಕೆಳಮಟ್ಟದಲ್ಲಿ ಹೋಗಿದೆ. ಸೇಕಡ 40ಕೋಟಿ ಜನಗಳು ಆ ರೀತಿ ಇದ್ದಾರೆ. ಆದರಿಂದ ನಿಮ್ಮಲ್ಲಿ ಎಷ್ಟು ಉತ್ಪತ್ತಿಯಾಗಿದೆ, ಎಷ್ಟು ಜನಗಳಿಗೆ ಅದರಿಂದ ಅನುಕೂಲವಾಗಿದೆ ಎಷ್ಟು ಜನರಿಗೆ ಪರಿಹಾರವನ್ನು ಒದಗಿಸಿಕೊಟ್ಟಿದ್ದೀರಿ ಎಂಬುದಾಗಿ ಹೇಳುವುದಕ್ಕೆ ಸಾಕಷ್ಟು ಸಮರ್ಥತೆ ಇದೆಯೇ ಎಂಬುದಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಶ್ನೆಮಾಡುತ್ತೇನೆ. ಏಕೆಂದರೆ ಬಡತನದ ಸಂಖ್ಯೆ ದಿನೇದಿನೇ ಹೆಚ್ಚುತ್ತಲೇ ಇದೆಯೆಂದು ನಾನು ಹೇಳುತ್ತಿದ್ದೇನೆ. ಬೆಂಗಳೂರು ಅಂತಹ ದೊಡ್ಡದೊಡ್ಡ ನಗರಗಳಲ್ಲಿ ಬೇರೆಯವರು ತಿಂದು ಬಿಸಾಡಿ ಕಕ್ಕ ಎಂಜಲೆಲೆಯ ಅನ್ನವನ್ನು ತಿನ್ನುತ್ತಾ ಇರತಕ್ಕ ಜನಗಳನ್ನು ಇವತ್ತು ನಾವು ಕಣ್ಣಾರೆ ನೋಡುತ್ತಿದ್ದೇವೆ. ಇಂತಹ ಪರಿಸ್ಥಿತಿ ಅವರಿಗೇಕೆ ಬಂತು? ಈಗಲೂ ಅನೇಕ ಬಸ್ ಸ್ಟ್ಯಾಂಡ್‌ಗಳಲ್ಲಿ ಭಿಕ್ಷುಕರ ಹಾವಳಿ ಇನ್ನೂ ಹೆಚ್ಚಾಗಿಯೇ ಇದೆ. ಅಂತಹ ಒಂದು ಪರಿಸ್ಥಿತಿಯನ್ನು ಈಗಲೂ ನಾವು ನೋಡುತ್ತಿದ್ದೇವೆ. ನಾನಾ ರೀತಿಯಲ್ಲಿ ತೆರಿಗೆಗಳನ್ನು ಹಾಕಿ ಅದರಿಂದ ಬರತಕ್ಕ ಉತ್ಪನ್ನ ನಿಜವಾಗಿ ಸರಿಯಾದ ರೀತಿಯಲ್ಲಿ ಸದ್ವಿನಿಯೋಗವಾಗದಿದ್ದರೆ ಅದರಿಂದೇನು ಪ್ರಯೋಜನ? ಹಿಂದಿನ ತೆರಿಗೆಗಳಿಗಿಂತ ನಾಲ್ಕುಪಟ್ಟು ಈಗ ಜನತೆಯ ಮೇಲೆ ಹೇರುವುದಾದರೆ ಹೇಗೆ? ಆದರಿಂದಲೇ ಜನಗಳಿಗೆ ಬಹಳವಾಗಿ ಬಡತನ, ಕಷ್ಟ ಉಂಟಾಗಿದೆ. ಇವರೇನೋ ಟ್ಯಾಕ್ಸ್ ಹಾಕಿದ್ದಾರೆ, ಅದನ್ನು ಕಲೆಕ್ಟ್ ಸಹ ಮಾಡುತ್ತಾರೆ. ಆದರೆ ಎಲ್ಲೋ ಇವರ ಯೋಜನೆಗಳಲ್ಲಿ ತಪ್ಪು ಇರಬೇಕು, ಇಲ್ಲವೇ ವಸೂಲಾಗಿರತಕ್ಕ ಹಣ ಸರಿಯಾಗಿ ಸದ್ವಿನಿಯೋಗವಾಗದೇ ಇರಬೇಕೆಂದು ನಾನು ಭಾವಿಸುತ್ತೇನೆ. ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಇನ್ನೂ ಸಾಕಷ್ಟು ಕ್ರಮಗಳನ್ನು ಇವರು ತೆಗೆದುಕೊಳ್ಳಬೇಕಾಗಿದೆ. 1965ನೇ ಇಸವಿಯಲ್ಲಿ ಸರ್ಕಾರದ ನೌಕರರ ಸಂಬಳ, ಭತ್ಯ ಇತ್ಯಾದಿ 55 ಕೋಟಿ ರೂಪಾಯಿಗಳಿದ್ದುದು ಇವತ್ತು 125—130 ಕೋಟಿ ರೂಪಾಯಿಗಳು ಆಗಿದೆ. ಕೇವಲ 10 ವರ್ಷಗಳಲ್ಲಿ ಸರ್ಕಾರವನ್ನು ನಿರ್ವಹಿಸತಕ್ಕ ಅಧಿಕಾರಿಗಳ ಹಾಗೂ ನೌಕರಗಳ ಖರ್ಚು 55 ಕೋಟಿ ರೂಪಾಯಿಗಳಿಂದ 130 ಕೋಟಿ ರೂಪಾಯಿಗಳಿಗೇರಿದೆ. ಆದರೆ ಜನ ಹೊಟ್ಟೆ ಬಟ್ಟೆ ಕಟ್ಟಿ ಕೊಡತಕ್ಕ ತೆರಿಗೆಯಿಂದ ಅಧಿಕಾರಿಗಳ ಹಾಗೂ ನೌಕರರ ಅಪಾಯಿಂಟ್‌ಮೆಂಟ್‌ಗಳಿಗೆ ಹೆಚ್ಚು ಖರ್ಚಾಗಿದೆಯೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಯಾವ ದೃಷ್ಟಿಯಿಂದಲೇ ಆಗಲೀ ಅಪಾಯಿಂಟ್‌ಮೆಂಟ್ ಆಪರ್‌ಚುನಿಟಿಗಳನ್ನು ಹೆಚ್ಚಿಗೆ ಕ್ರಿಯೇಟ್ ಮಾಡುವುದು ಸರಿಯಲ್ಲ. ಈ ದೇಶದಲ್ಲಿ ಮೊಟ್ಟಮೊದಲನೆಯದಾಗಿ ಕೈಗಾರಿಕೆಗಳನ್ನು ಜಾಸ್ತಿ ಮಾಡಬೇಕು. ವ್ಯವಸಾಯವನ್ನು ಲಾಭದಾಯಕವಾಗಿ ಮಾಡಬೇಕು. ನಿರುದ್ಯೋಗಿಗಳು ಕೈಗಾರಿಕೆಗಳಲ್ಲಿ ಹಾಗೂ ವ್ಯವಸಾಯ ಕ್ಷೇತ್ರದಲ್ಲಿ ನೆಲೆಸುವ ಹಾಗೆ ಮಾಡಬೇಕು. ಬರೀ ಸರ್ಕಾರೀ ನೌಕರರ ಕಡೇಗೆ ಅಪಾಯಿಂಟ್‌ಮೆಂಟ್ ಆಪರ್‌ಚುನೈಟಿಗಳನ್ನು ಕ್ರಿಯೇಟ್ ಮಾಡಿ ನಿರುದ್ಯೋಗ ಬಗೆಹರಿಸುತ್ತೇವೆಂದು ಹೇಳುವುದು ಅಷ್ಟು ಸಮಂಜಸವಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಹೇಳುವುದಾದರೆ, ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಮಾತನಾಡುತ್ತಾ ವ್ಯವಸಾಯ ಕ್ಷೇತ್ರದಲ್ಲಿ ಈಗ ಹೆಚ್ಚಿಗೆ ನೆಮ್ಮದಿ ಇದೆ, ಹೆಚ್ಚು ಆಹಾರೋತ್ಪಾದನೆ

ಯಾಗಿದೆ ಎಂಬುದಾಗಿ ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳ ಬೇಕಾಗಿದೆ. ಈ ದೇಶದಲ್ಲಿ ವ್ಯವಸಾಯ ಮಾಡುವುದು ಒಂದು ಶಾಪವೆನ್ನುವ ಮಟ್ಟಕ್ಕೆ ವಾತಾವರಣ ನಿರ್ಮಾಣ ವಾಗುತ್ತಿದೆಯೆಂಬುದಾಗಿ ಹೇಳಿದರೆ ಅದೇನೂ ತಪ್ಪಾಗಲಾರದು. ಏಕೆಂದರೆ ತಾವು ಅಧಿಕಾರಕ್ಕೆ ಬಂದಮೇಲೆ ವಾಟರ್ ರೇಟ್ ಡಬ್ಬಲ್ ಮಾಡಿದ್ದೀರಿ, ಬೆಟರ್‌ಮೆಂಟ್ ಲೆವಿ 1500 ರೂಪಾಯಿಗಳವರೆಗೆ ಮಾಡಿದ್ದೀರಿ. ವಿದ್ಯುಚ್ಛಕ್ತಿ ದರವನ್ನು ಹೇಳದೆ ಕೇಳದೆ ಜಾಸ್ತಿ ಮಾಡಿದಿರಿ, ಹೀಗೆ ಯಾವುದ್ಯಾವುದಕ್ಕೆ ಸಾಧ್ಯವೋ ಅದಕ್ಕೆಲ್ಲಾ ಜಾಸ್ತಿ ತೆರಿಗೆಯನ್ನು ಹಾಕಿದ್ದೀರಿ. ರೈತರು ಬೆಳೆಯುವ ಪದಾರ್ಥಗಳ ಮೇಲೆ ಮನಸೋಇಚ್ಛೆ ತೆರಿಗೆಗಳನ್ನು ಜಾಸ್ತಿಮಾಡಿದ್ದೀರಿ, ಇನ್ನೊಂದು ವಿಷಯವನ್ನು ಮಾನ್ಯ ಆಹಾರ ಸಚಿವರು ಮೇಲ್ಮನೆಯಲ್ಲಿ ಆಹಾರಧಾನ್ಯಗಳ ಬೆಲೆಗಳನ್ನು ಇಳಿಸುವುದಕ್ಕೆ ಬಹಳವಾಗಿ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆಹಾರ ಧ್ಯಾನಗಳ ರೇಟನ್ನು ಇಳಿಸಲಿ, ಬಹಳ ಒಳ್ಳೆಯದು. ಆದರೆ ರೈತ ತಾನು ಬೆಳೆಯಲು ಉಪಯೋಗಿಸುವ ಹಾಗೂ ಕೊಂಡುಕೊಳ್ಳುವ ಪದಾರ್ಥಗಳ ರೇಟ್ ಬಹಳ ಜಾಸ್ತಿಯೇ ಇದೆ. ಇನ್ನೂ ಜಾಸ್ತಿ ಮಾಡುತ್ತಿದ್ದಾರೆ. ಇತ್ತೀಚೆಗಂತೂ ಬಟ್ಟೆ ಸಿಮೆಂಟ್, ಕಬ್ಬಿಣ್ಣ ಹಾಗೂ ಗೊಬ್ಬರದ ಬೆಲೆಗಳನ್ನು ಮನಸ್ಸಿಗೆ ಬಂದಹಾಗೆ ಜಾಸ್ತಿ ಮಾಡುತ್ತಿದ್ದಾರೆ. 500, ಸಾವಿರ, ಎರಡು ಸಾವಿರ ರೂಪಾಯಿ ಹೀಗೆ ಏರಿಸಿದ್ದಾರೆ. ಅಮೋನಿಯಂ ಸಲ್ಫೇಟ್ 550 ರೂಪಾಯಿಗಳಿಂದ 1200 ರೂಪಾಯಿಗಳವರೆಗೆ ಏರಿಸಿದ್ದಾರೆ. ಇನ್ನು ಕಾಂಪ್ಲೆಕ್ಸ್ ಮ್ಯಾನ್ಯೂರನ್ನು 700 ರೂಪಾಯಿಗಳಿಂದ 2600 ರೂಪಾಯಿಗಳವರೆ ಏರಿಸಿದ್ದಾರೆ. ಅಂದ ಮೇಲೆ ಮೊದಲನ ಬೆಲೆಗಿಂತ ಮೂರು–ನಾಲ್ಕು ಪಟ್ಟು ಆಯಿತು. ರೈತ ತಾನು ಕೊಂಡು ಕೊಳ್ಳುವ ಪದಾರ್ಥಗಳಿಗೆ ಈ ರೀತಿಯಾಗಿ ಮೂರು ನಾಲ್ಕು ಪಟ್ಟುಗಳಷ್ಟು ಜಾಸ್ತಿ ಮಾಡಿದರೆ ಹೇಗೆ ? ಸರ್ಕಾರದವರ ಗಮನ ಅತ್ತ ಕಡೆಗೆ ಏಕೆ ಹರಿಯಲಿಲ್ಲ? ರೈತ ಉಪಯೋಗಿಸುವಂತಹ ಉಪಕರಣಗಳನ್ನು ತಯಾರು ಮಾಡುವಂತಹ ಫ್ಯಾಕ್ಟರಿಗಳ ಕಡೆಗೂ ಇವರ ಗಮನ ಏಕೆ ಹರಿಯಲಿಲ್ಲ ? ವರಲಕ್ಷ್ಮಿ ಕಾಟನ್ ಒಂದು ಕ್ವಿಂಟಾಲಿಗೆ 900 ರೂಪಾಯಿಗಳಿದ್ದುದು ಇವತ್ತಿನ ದಿವಸ ಬಹಳ ಹೆಚ್ಚಾಗಿದೆ. 8 ರೂಪಾಯಿ ಬಟ್ಟೆ ಬೆಲೆ ಇದ್ದುದು ಇವತ್ತು 9 ರೂಪಾಯಿಗಳಾಗಿದೆ. ಏಕೆ ಈ ಬೆಲೆಗಳನ್ನು ಇಳಿಸಲಿಲ್ಲ. ರೈತ ಕೊಂಡುಕೊಳ್ಳುವ ಸೋಪು ಬಟ್ಟೆಗಳ ಬೆಲೆಯನ್ನೂ ಸಹ ಏಕೆ ಇಳಿಸಲಿಲ್ಲ ? ಸೋಪಿಗೆ ಉಪಯೋಗಿಸ ತಕ್ಕ ಎಣ್ಣೆ ಬೆಲೆ ಒಂದು ಕೆ. ಜಿ. ಗೆ $11\frac{1}{2}$ ರೂಪಾಯಿಗಳಿದ್ದುದು ಇವತ್ತು 14 ರೂಪಾಯಿಗಳಾಗಿದೆ. ಫ್ಯಾಕ್ಟರಿಗಳಲ್ಲಿಯೂ ತಯಾರು ಮಾಡತಕ್ಕ ರೇಟ್ ಏಕೆ ಕಡಿಮೆ ಮಾಡಲಿಲ್ಲ ? ಸೋಪಿನ ಬೆಲೆ ಕೇವಲ 1—80 ಇದ್ದುದು $4\frac{1}{2}$ ರೂಪಾಯಿಗಳಾಗಿದೆ. ಇಷ್ಟು ಬೆಲೆ ಹೆಚ್ಚಾಗಿದ್ದರೂ ಮಂತ್ರಿಗಳು ಆಹಾರ ಪದಾರ್ಥಗಳ ಬೆಲೆಗಳನ್ನು ಇಳಿಸುತ್ತೇವೆಂದು ಹೇಳುತ್ತಲೆ ಇದ್ದಾರೆ. ಒಂದು ರೂಪಾಯಿಗೆ 2 ಕೆ. ಜಿ. ಅಕ್ಕಿ ಮಾಡಿ. ಯಾರು ಬೇಡವೆಂದು ಹೇಳುತ್ತಾರೆ ? ಆದರೆ ರೈತ ಕೊಂಡುಕೊಳ್ಳುವ ಕಬ್ಬಿಣದ ಉಪಕರಣಗಳು, ಗೊಬ್ಬರ ಮುಂತಾದುವನ್ನು ಅದರಂತೆ ಕಂಪಾರೇಟಿವ್ ಆಗಿ ಬೆಲೆ ಇಳಿಸಿ. ಅದೇ ರೀತಿಯಾಗಿ ಗೊಬ್ಬರದ ರೇಟ್, ಬಟ್ಟೆ ರೇಟ್, ಕಬ್ಬಿಣದ ರೇಟ್ ಬೆಲೆ ಏಕೆ ಇಳಿಸಬಾರದು ? ಸುಮಾರು 8 ವರ್ಷಗಳ ಹಿಂದೆ ನಾನು ವ್ಯವಸಾಯ ಷುರುಮಾಡಿದಾಗ ಒಂದು ನೇಗಿಲು ಕುಳ 25 ಪೈಸೆ ಇದ್ದುದು ಇವತ್ತು 2—50 ಆಗಿದೆ. ಒಂದು ವೇಳೆ ಅಷ್ಟು ಹಣ ಕೊಟ್ಟರೂ ಪದಾರ್ಥಗಳು ಕಾಲಕ್ಕೆ ಸರಿಯಾಗಿ ಆಗುತಾ ಇಲ್ಲ. ಈ ದೇಶದಲ್ಲಿ ಸಂಪತ್ ವೃದ್ಧಿ ಮಾಡಬೇಕು ಎಂಬುದಾಗಿ ಹೇಳುವಾಗ ರೈತ ಬೆಳೆಯತಕ್ಕ ಪದಾರ್ಥಗಳಿಗೂ ಮತ್ತು ಕೊಂಡುಕೊಳ್ಳತಕ್ಕ ರೇಟಿಗೂ ಒಂದು ಸಮಂಜಸ ಇರಬೇಕು. ಹೀಗೆ ರೈತನು ಬೆಳೆದ ಆಹಾರ ಪದಾರ್ಥಗಳ ಬೆಲೆಗಳನ್ನು ಇಳಿಸಿ ಫ್ಯಾಕ್ಟರಿಗಳಲ್ಲಿ ಕೊಂಡುಕೊಳ್ಳುವಾಗ ಅಲ್ಲಿಯೂ ಆ ಪದಾರ್ಥಗಳ ಬೆಲೆಯನ್ನು ಇಳಿಸುವಂತಹ ಧೈರ್ಯ, ಚೈತನ್ಯ ಈ ಸರ್ಕಾರಕ್ಕೆ ಇಲ್ಲದೇ ಹೋದರೆ, ನಿಜವಾಗಿಯೂ ಈ ದೇಶದ ರೈತರು ತುಂಬಾ ಅನಾಹುತಕ್ಕೆ ಒಳಗಾಗುತ್ತಾರೆ. ದೇಶದ ರೈತರು ನಿಜವಾಗಿಯೂ ಈ ಸರ್ಕಾರಕ್ಕೆ ಶಾಪ ಹಾಕುತ್ತಾರೆ. ಇದೇ ಧೋರಣೆಯಿಂದ ಇವರು ಮುನ್ನಡೆದರೆ ಮತ್ತೆ ಪುನಃ ಇವರು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಹೊರದೇಶಗಳಿಗೆ ಹೋಗಬೇಕಾಗುತ್ತದೆ. ಇದರಿಂದಲೇ ರೈತರು ಇತ್ತೀಚೆಗೆ ನಿರ್ಲಕ್ಷ್ಯ ತೋರಿಸುತ್ತಿದ್ದಾರೆ. ವರಲಕ್ಷ್ಮಿ ಕಾಟನ್‌ನ್ನು ವ್ಯವಸಾಯ ವಿಶ್ವವಿದ್ಯಾನಿಲಯದವರು ಕಂಡು ಹಿಡಿದರು. ಅದರಿಂದ ಬಹಳ ಸೊಗಸಾದ ಬಟ್ಟೆ ಬರುತ್ತದೆ. ಈಜಿಪ್ಟ್ ಕಾಟನ್‌ಗಿಂತ ಅದು ಕಡಿಮೆಯೇನಲ್ಲ ಇದರಿಂದ ಒಬ್ಬೊಬ್ಬರು ಹೆಚ್ಚಿಗೆ ದುಡ್ಡು ಮಾಡಬಹುದು. ಒಂದು ಎಕರೆಯಲ್ಲಿ 6 ಸಾವಿರ 7 ಸಾವಿರ ರೂಪಾಯಿಗಳಷ್ಟು ಬೆಳೆ ಬೆಳೆಯಬಹುದು. ಅದಕ್ಕೆ ಮೂರು ಸಾವಿರ ರೂಪಾಯಿಗಳಷ್ಟು ಖರ್ಚಾಗುತ್ತದೆ. ಈಜಿಪ್ಟ್ ಕಾಟನ್‌

ಬೆಳೆಯನ್ನೂ ಸಹ ಕಡಿಮೆ ಮಾಡಿದ್ದಾರೆ. ಅವರ ನಮ್ಮ ರೈತರು ಈ ಬೆಳೆಯನ್ನು ಬೆಳೆದು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಅಲ್ಲಿಂದ ಬೇಕಾದಷ್ಟು ಆ ಬೆಳೆಯನ್ನು ಇಂಪೋರ್ಟ್ ಮಾಡುತ್ತಿದ್ದಾರೆ. ನಮ್ಮ ದೇಶದ ರೈತರ ತಲೆಯ ಮೇಲೆ ಹೊಡೆಯುವಷ್ಟರ ಮಟ್ಟಿಗೆ ಅದು ಈಗ ಇರುವುದರಿಂದ ನಮ್ಮ ರೈತರು ಅದನ್ನು ಹೇಳಿಕೊಳ್ಳುವುದಕ್ಕೂ ಸಹ ನಾಚಿಕೆಯಾಗುತ್ತದೆ.

ಸ್ವಾಮಿ, ಈಗ 15 ದಿವಸಗಳ ಹಿಂದೆ ಪತ್ರಿಕೆಯಲ್ಲಿ ನೋಡಿದೆ. ನಮ್ಮ ದೇಶದಲ್ಲಿ ರೈತ ಬೆಳೆದಿರತಕ್ಕಂಥ ಹತ್ತಿಯನ್ನು ಕೊಂಡುಕೊಳ್ಳದೇ ಅವನಿಗೆ ನಷ್ಟವನ್ನುಂಟು ಮಾಡಿ ಹೊರದೇಶಗಳಿಂದ ಹತ್ತಿಯನ್ನು ಕೊಂಡುಕೊಳ್ಳುತ್ತಿದ್ದಾರಂತೆ. ಇವರನ್ನು ಯಾರೂ ಹೇಳುವವರೂ ಕೇಳುವವರೂ ಇಲ್ಲವೇ ಎಂದು ಪ್ರಶ್ನೆ ಮಾಡುತ್ತೇನೆ ? ನಮ್ಮ ದೇಶದಲ್ಲಿಯೇ ಬೆಳೆದಿರತಕ್ಕಂಥ ರೈತನಿಗೆ ಸಹಾಯವನ್ನು, ಅನುಕೂಲವನ್ನೂ ಮಾಡಿ ಕೊಡದೆ ತೊಂದರೆಯನ್ನು ಮಾಡುತ್ತಿದ್ದೀರಿ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ರೈತರು ಬೆಳೆಯುತಕ್ಕಂಥ ಪದಾರ್ಥಗಳಿಗೆ ಇಷ್ಟಿಷ್ಟು ಬೆಲೆಯನ್ನು ಕೊಡಬೇಕೆಂದು ಒಂದು ಇಂಡೆಕ್ಸ್ ಅಥವಾ ಮತ್ತೆ ಏನೋ ಒಂದು ವ್ಯವಸ್ಥೆ ಮಾಡಿ ಅವನಿಗೆ ಯೋಗ್ಯವಾದ ಬೆಲೆಯನ್ನು ಕೊಡಿಸಿ ಕೊಡಬೇಕು. ಇಲ್ಲವಿದ್ದರೆ ಅವನು ಖಂಡಿತವಾಗಿಯೂ ಉದ್ಧಾರವಾಗುವುದಿಲ್ಲ.

ಇನ್ನು ರೈತರಿಗೆ ಸಾಲ ಸೌಲಭ್ಯಗಳನ್ನು ದೊರಕಿಸಿ ಕೊಡುವ ಬಗ್ಗೆ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ ಯಾವ ಬ್ಯಾಂಕಿನಲ್ಲೂ ಕೂಡ ರೈತರಿಗೆ ಸಾಲ ಸಿಗುತ್ತಿಲ್ಲ. ಸಿಕ್ಕರೂ ಕೂಡ ಒಂದು ನೂರು ರೂಪಾಯಿಗೆ 12 ರೂಪಾಯಿ ಶೇರ್ ಫೀ ಎಂದು ತೆಗೆದುಕೊಳ್ಳುತ್ತಾರೆ. ಆ ಮೇಲೆ ಆ ಸಾಲಕ್ಕೆ 18 ರೂಪಾಯಿ ಬಡ್ಡಿ ಹಾಕುತ್ತಾರೆ. ಒಟ್ಟು 30 ಪರ್ಸೆಂಟ್ ಆಯಿತು. ಒಂದು ವೇಳೆ ಮಳೆ ಬೆಳೆ ಹೋಗಿ ಅವನು ಸಾಲವನ್ನು ಕಟ್ಟಲಿಕ್ಕೆ ಆಗದಿದ್ದರೆ 10 ಪರ್ಸೆಂಟ್ ಪೀನಲ್ ಇಂಟ್ರೆಸ್ಟನ್ನು ಹಾಕುತ್ತಾರೆ. ಹೀಗಾಗಿ ಕೊನೆಗೆ ಅವನು 40—50 ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ. ಇದರ ಜೊತೆಗೆ ಕಲೆಕ್ಷನ್ ಚಾರ್ಜ್ ಎಂದು 5 ರೂಪಾಯಿಗಳನ್ನು ಹಾಕುತ್ತಾರೆ. ಇವತ್ತಿನ ದಿವಸ ರೈತ ಹೊಟ್ಟೆ ಬಟ್ಟೆ ಕಟ್ಟಿ ಇಷ್ಟು ಹಣವನ್ನು ಕಟ್ಟಬೇಕಾಗಿದೆ. ಹಿಂದೆ ರೈತ ಕಷ್ಟ ಬಂದಾಗ ಕೈ ಗಡವೆಂದು ದುಡ್ಡಿರುವವರ ಹತ್ತಿರ ಸಾಲ ಮಾಡುತ್ತಿದ್ದ. ಆದರೆ ಈಗ ನೀವು ಅದನ್ನೂ ಸಹ ತಪ್ಪಿಸಿ ಪುಣ್ಯ ಕಟ್ಟಿಕೊಂಡಿದ್ದೀರಿ. ಇವೊತ್ತಿನ ದಿವಸ ರೈತ ಏನಾದರೂ ಸಾಲ ತೆಗೆದುಕೊಳ್ಳಬೇಕೆಂದರೆ ಅವನು ನಮ್ಮ ಹತ್ತಿರ ಜಾಮೀನಿಗೆ ರುಜು ಹಾಕಿ ಎಂದು ಓಡಿ ಬರುತ್ತಾನೆ. ನಾವು ಎಷ್ಟು ಜನಕ್ಕೆಂದು ರುಜು ಹಾಕುವುದು ? ಹೀಗಾಗಿ ರೈತ ಒಂದು ಕಲುಷಿತ ವಾತಾವರಣದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾನೆಂದು ಹೇಳಿದರೆ ತಪ್ಪಾಗಲಾರದು. ಇವತ್ತು ನಮ್ಮ ದೇಶಕ್ಕೆ ಆಹಾರ ಪದಾರ್ಥಗಳನ್ನು ಬೆಳೆದುಕೊಡತಕ್ಕಂಥವನು ರೈತ, ಟ್ಯಾಕ್ಸ್ ಕೊಡುವವನೂ ರೈತ, ಅವನಿಗೆ ಏನಾದರೂ ತೊಂದರೆ ಬಂದು ಅಥವಾ ಕ್ಷಾಮ ಡಾಮರಗಳು ಉಂಟಾಗಿ ಬೆಳೆ ಹೋಗಿ ಅವನು ಲೆವಿಯನ್ನು ಕಟ್ಟುವುದಕ್ಕೆ ಆಗದಿದ್ದರೆ ಸಾಲ ಮರು ಪಾವತಿ ಮಾಡುವುದನ್ನು ಮುಂದಕ್ಕೆ ಹಾಕುತ್ತೀರಿ. ಆ ಮೇಲೆ ಒಂದೇ ಸಾರ್ತಿ ಆ ಬಡ ರೈತನ ಮನೆಯನ್ನು ಜಪ್ತಿ ಮಾಡಿಕೊಂಡು ಬನ್ನಿ ಎಂದು ಹೇಳುತ್ತೀರಿ. ಆ ಮೇಲೆ ನೀವು 20 ಅಂಶಗಳ ಕಾರ್ಯಕ್ರಮಗಳನ್ನು ಹಾಕಿಕೊಂಡು ಎಲ್ಲಾ ಕಡೆಯೂ ಪ್ರಚಾರ ಮಾಡಿಕೊಂಡು ಬರುತ್ತೀರಿ. ಇದರಿಂದ ಬಡವ ಬಲ್ಲಿದರಿಗೆ ಏನಾದರೂ ಸಹಾಯ ಮಾಡಿದಂತಾಯಿತೇ ಎಂದು ನಾನು ಕೇಳುತ್ತೇನೆ ? 20 ಅಂಶಗಳ ಕಾರ್ಯಕ್ರಮದಲ್ಲಿ ಮಳೆ ಬೆಳೆ ಹೋಗಿ ತೊಂದರೆ ಸಿಕ್ಕುಹಾಕಿಕೊಂಡಿರತಕ್ಕಂಥ ರೈತರಿಗೆ ರಕ್ಷಣೆ ಕೊಡುವ ಬಗ್ಗೆ ಪರಿಹಾರ ಕೊಡುವ ಬಗ್ಗೆ ಏತಕ್ಕೆ ನೀವು ಸೇರಿಸಿಲ್ಲವೆಂದು ನಾನು ಈ ಸಂದರ್ಭದಲ್ಲಿ ಕೇಳ ಬಯಸುತ್ತೇನೆ. ನಾವು 20 ಅಂಶಗಳ ಕಾರ್ಯಕ್ರಮವನ್ನು ಒಪ್ಪುತ್ತೇವೆ. ಆದರೆ ರೈತರಿಗೆ ಸಂಬಂಧಪಟ್ಟಹಾಗೆ ಈ ಒಂದು ಕಾರ್ಯಕ್ರಮವನ್ನು ಏತಕ್ಕೆ ಸೇರಿಸಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ಕೇಳುವುದಕ್ಕೆ ಇಷ್ಟ ಪಡುತ್ತೇನೆ.

ಅಧ್ಯಕ್ಷರೇ, ಎರಡನೆಯದಾಗಿ ಮಾನ್ಯ ರಾಚಯ್ಯನವರು ಎಲ್ಲೋ ಒಂದು ಕಡೆ ಭಾಷಣ ಮಾಡಲು ಹೋಗಿದ್ದಾಗ ಅಲ್ಲಿಯ ಜನಗಳಿಗೆ ಹೆಂಡದ ಬದಲು ಬೀರು, ಸೇಂದಿ ಕುಡಿಯಿರಿ ಎಂದು ಹೇಳಿದರು, ಎಂದು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಓದಿದ್ದೇನೆ. ನೀವು ಆ ಬಡ ರೈತರಿಗೆ ಏನೇನೋ ಕಾರ್ಯಕ್ರಮಗಳನ್ನೂ ಹಾಕಿ ಕೊಟ್ಟು ಅನುಕೂಲ ಮಾಡಿಕೊಟ್ಟರೂ ಕೂಡ

ಅವನು ಬೆಳಿಗ್ಗಿನಿಂದ ಸಾಯಂಕಾಲದವರೆಗೂ ದುಡಿದು, ಕೊನೆಗೆ ಮನೆಗೆ ಹೋಗುವಾಗ ಚೆನ್ನಾಗಿ ಕುಡಿದು ರಸ್ತೆಯಲ್ಲಿ ಹೋಗುವವರ ಮೇಲೆ ಕೈ ಮಾಡಿ ಅವರಿಂದ ಒದೆಗಳನ್ನು ತಿಂದು ಆ ಮೇಲೆ ಮನೆಗೆ ಹೋಗುತ್ತಾನೆ. ಅಲ್ಲಿ ಮನೆಯಲ್ಲಿ ಹೆಂಡ್ತಿ ಅಡಿಗೆ ಏನಾದರೂ ಮಾಡಿ ಇಟ್ಟಿರದಿದ್ದರೆ ಅವಳನ್ನೂ ಹಿಡಿದುಕೊಂಡು ಚೆನ್ನಾಗಿ ಹೊಡೆಯುತ್ತಾನೆ. ಆ ಬಡಪಾಯಿ ಹೆಣ್ಣು ಮಕ್ಕಳನ್ನು ಚಿತ್ರ ಹಿಂಸೆ ಮಾಡುತ್ತಾರೆ. ಇವತ್ತು ಮಹಿಳಾ ವರ್ಷವೆಂದು ಬೇಕಾದಷ್ಟು ಕಾರ್ಯಕ್ರಮವನ್ನು ನಾವು ವರ್ಷವೆಲ್ಲಾ ಆಚರಿಸಿದೆವು. ನೀವು ಶ್ರೀಮತಿ ಇಂದಿರಾ ಗಾಂಧಿಯವರ ಫೋಟೋ ಹಾಕಿ ಬೇಕಾದಷ್ಟು ಪ್ರಚಾರ ಮಾಡಿದಿರಿ. ಆದರೆ ನೀವು ನಿಜವಾಗಿಯೂ ಮಹಿಳೆಯರ ಬಗ್ಗೆ ಕನಿಕರ ಇಟ್ಟು ಕೊಂಡಿದ್ದರೆ, ಮಹಿಳೆಯರಿಗೆ ಸರಿಯಾದ ರೀತಿಯಲ್ಲಿ ಮನ್ನಣೆ ಕೊಡಬೇಕೆಂದಿದ್ದರೆ ಈ ಕೂಡಲೇ ಕುಡಿಯುವುದರ ಬಗ್ಗೆ ಪ್ರಾಹಿಬಿಷನ್ ಇಂಟ್ರಡ್ಯೂಜ್ ಮಾಡಬೇಕಾಗಿತ್ತು. ಆದುದರಿಂದ ನಿಮ್ಮ 20 ಅಂಶಗಳ ಕಾರ್ಯಕ್ರಮದಲ್ಲೂ ಈ ಒಂದು ಕಾರ್ಯಕ್ರಮವನ್ನು ಸೇರಿಸಿಕೊಳ್ಳಬೇಕೆಂದು ಹೇಳುತ್ತೇನೆ ಸ್ವಾಮಿ.

ಇನ್ನು ಮೂರನೆಯದಾಗಿ, ರೈತ ತಾನು ಬೆಳೆದಂಥ ಬೆಳೆಗೆ ಸರಿಯಾದ ರೇಟ್ ಸಿಕ್ಕುವ ವ್ಯವಸ್ಥೆ ಸರ್ಕಾರದವರಿಂದ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಸ್ವಾಮಿ, ನಾನು ಒಂದು ಸಾರಿ ಬಾಳೆ ಗಿಡ ಹಾಕಿ ಬಹಳ ಕಷ್ಟ ಪಟ್ಟು ಬೆಳೆಸಿದ್ದೆ. ಅದಕ್ಕೆ ಗೊಬ್ಬರ ಹಾಕಿ ನೀರು ಹಾಕಿ ಕಷ್ಟ ಪಟ್ಟು ಬೆಳೆದರೆ ಮಾರ್ಕೆಟ್‌ನಲ್ಲಿ ನಮಗೆ ಸಿಗತಕ್ಕಂಥದ್ದು ಒಂದು ಬಾಳೆ ಹಣ್ಣಿಗೆ 5—6 ಪೈಸೆಯಷ್ಟು ಮಾತ್ರ. ಅದೇ ಅಂಗಡಿಯವರು ಸುಮ್ಮನೇ ಬಾಳೆ ಗೊನೆಯನ್ನು ಮುಟ್ಟಿ ಒಂದು ಬಾಳೆ ಹಣ್ಣನ್ನು ಕಿತ್ತು ಕೊಟ್ಟರೆ ಅವನು 20—25 ಪೈಸೆಗಿಂತ ಕಡಿಮೆ ಮಾರುತ್ತಿಲ್ಲ. ಇವನು ರೈತ ವರ್ಷವೆಲ್ಲಾ ಕಷ್ಟ ಪಟ್ಟು ನೀರು ಹಾಕಿ, ಗೊಬ್ಬರ ಹಾಕಿ ಶ್ರಮ ಪಟ್ಟರೆ ಅವನಿಗೆ ದೊರೆಯುತಕ್ಕಂಥದ್ದು ಕೇವಲ 5—6 ಪೈಸೆಗಳು ಮಾತ್ರ. ಹೀಗೆ ಭತ್ತವೂ ಕೂಡ ಸ್ವಾಮಿ. ಇವತ್ತಿನ ದಿವಸ ಒಂದು ಮೂಟೆ ಭತ್ತ 70—80 ರೂಪಾಯಿಗಳಿಗೆ ಕೊಂಡು ಕೊಳ್ಳುತ್ತಾರೆ. ಆದರೆ ಅಂಗಡಿಯಲ್ಲಿ ಒಂದು ಕೇಜಿಗೆ 2 ರೂಪಾಯಿ 2—15 ರಂತೆ ಮಾರುತ್ತಾರೆ. ಹೀಗಾಗಿ ಸ್ವಾಮಿ ಇವತ್ತಿನ ದಿವಸ ಬೆಳೆವಂಥ ರೈತನಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಅವನು ಕಷ್ಟಕ್ಕೆ ಒಳಗಾಗಿದ್ದಾನೆ. ಇದರಿಂದ ಇವತ್ತಿನ ದಿವಸ ಬೆಳೆಯುವವನಿಗಿಂತ ಮಾರುವವನಿಗೆ ಹೆಚ್ಚಿಗೆ ಲಾಭ ಸಿಗುತ್ತಿದೆ.

ಇವೊತ್ತಿನ ದಿವಸ ತುರ್ತು ಪರಿಸ್ಥಿತಿ ಜಾರಿಗೆ ಬಂದ ಮೇಲೆ ಯಾವ ರೀತಿ ನಡೆಯುತ್ತಿವೆ ಎಂದು ನೋಡುವುದಾದರೆ ಕೆಲವು ರಾಜಕೀಯ ಪಕ್ಷದವರನ್ನು ಎಷ್ಟು ನಿಕೃಷ್ಟವಾಗಿ ಕಂಡಿದ್ದಾರೆ ಎಂದರೆ ಅದನ್ನು ಹೇಳುವುದಕ್ಕಾಗುವುದಿಲ್ಲ. ಲಕ್ಷಾಂತರ ಜನರು ಇಂದಿರಾ ಗಾಂಧಿ ಕೀ ಜೈ ಎಂದರೆ ಯಾವ ಅಪಾಯ ಇಲ್ಲ, ಆದರಲ್ಲಿ ಏನಾದರೂ ಕೇವಲ ನಾಲ್ಕೈದು ಜನ ಇಂದಿರಾ ಗಾಂಧಿಗೇ ಧಿಕ್ಕಾರ ಎಂದರೆ ಸಾಕು ಅವರಿಗೆ ಬಳೆ ಹಾಕಿಕೊಂಡು ಹೋಗುತ್ತಾರೆ. ಇದು ನ್ಯಾಯವೇ ಎಂದು ಕೇಳುತ್ತೇನೆ. ನಾವು ಹಿಂದೆ ನಡೆದಂತಹ ಪುರಾಣ ಕಥೆಗಳನ್ನೆಲ್ಲಾ ಓದಿದ್ದೇವೆ, ಯಾರಿಗೂ ಈ ಅಧಿಕಾರ ಶಾಶ್ವತವಾಗಿರುವುದಿಲ್ಲ. ಇವೊತ್ತಿನ ದಿವಸ ಕೆಲವರು ಏನಾದರೂ ಸರಿಯಾಗಿ ತಿಳಿದು ಅಥವಾ ತಿಳಿಯದೆ ಇಂದಿರಾಗೆ ಧಿಕ್ಕಾರ ಎಂದರೆ ಸಾಕು ಅವರಿಗೆ ಬಳೆ ಹಾಕಿಕೊಂಡು ಮೆರವಣಿಗೆ ಮಾಡುವುದು ನ್ಯಾಯವಲ್ಲ ಇವೊತ್ತು ತಾವು ಅಧಿಕಾರ ಸ್ಥಾನದಲ್ಲಿ ಇರಬಹುದು ನಾಳೆ ಬೇರೆಯವರು ಬರಬಹುದು ಆದರೆ ನಾನು ಹೇಳುವುದು ತಮಗೆ ಏನೆಂದರೆ ತಾವು ಏನು ಪಾಪ ಅಥವಾ ಪುಣ್ಯದ ಕೆಲಸ ಮಾಡಿರುತ್ತೀರಾ ಅದೇ ನಿಮ್ಮನ್ನು ಕಾಪಾಡುವುದು ಎಂದು ಹೇಳುತ್ತೇನೆ. ನಾಳೆ ತಮ್ಮ ಅಧಿಕಾರ ಮುಗಿಯಿತು ಎಂದರೆ ಮಾನ್ಯ ಚನ್ನಬಸಪ್ಪನವರು ತಮ್ಮ ಬಳಿಗೆ ಬರುವುದಿಲ್ಲ, ಯಾರು ಬರುವುದಿಲ್ಲ. ನೀವು ಅಧಿಕಾರ ಮುಗಿಯಿತು ಎಂದರೆ ನಿಮ್ಮ ಜೊತೆಯಲ್ಲಿ ಬರುವುದು ನೀವು ಮಾಡಿದಂಥ ಪಾಪ ಪುಣ್ಯ ಇವೆರಡೇ ಎಂದು ಹೇಳುತ್ತೇನೆ. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಒಬ್ಬಾತನಿಗೆ ಮೂರು ಜನ ಮಕ್ಕಳು ಇದ್ದರು ಆತನ ಹೆಂಡತಿಗೆ ಆಪರೇಷನ್ ಆಗಿತ್ತು, ಒಂದು ಸಾರಿ ಆತ ಒಂದು ಸಂದರ್ಭದಲ್ಲಿ ಇಂದಿರಾಗೆ ಧಿಕ್ಕಾರ ಎಂದು ಹೇಳಿದ ಅಷ್ಟಕ್ಕೆ ಆತನನ್ನು ಪೋಲೀಸಿನವರು ಬಳೆ ಹಾಕಿಕೊಂಡು ಕರೆದುಕೊಂಡು ಹೋದರು, ಆದರೆ ಆತನ ಹೆಂಡತಿ ಮಕ್ಕಳನ್ನು ನೋಡಿಕೊಳ್ಳುವವರು ಯಾರು ? ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ಈಗ ತಮ್ಮ ಕೈಯಲ್ಲಿ ಅಧಿಕಾರ ಇದೆ, ಸೈನ್ಯ ಇದೆ, ದುಡ್ಡು ಇದೆ, ಆದರೆ ಈ ರೀತಿಯಲ್ಲಿ ಆಗತಕ್ಕ ಕೆಲಸಗಳಿಗೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಹನುಮೇಗೌಡರು ಬಹಳ ಬುದ್ಧಿವಂತರು ಇದ್ದಾರೆ, ಅವರ ಕೈಯ್ಯಲ್ಲಿ ಇಂದಿರಾಗೆ ಧಿಕ್ಕಾರ ಎಂದು ಹೇಳಿಸಿ ತಾವು ಸುಮ್ಮನೆ ಕುಳಿತು ಕೊಂಡು ಬಿಟ್ಟಿರಿ ಎಂದು ಕಾಣುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈಗ ನಾನು ಹೇಳುವುದು ಪೂರ್ತಿ ಮಿತಿಮೀರಿದ ಕಾಲದಲ್ಲಿ ಅವರನ್ನು ಕರೆದುಕೊಂಡು ಹೋದರೆ ನಾನು ಬೇಡ ಎಂದು ಹೇಳುವುದಿಲ್ಲ, ಈಗ ನಿರಪರಾಧಿಗಳೆಲ್ಲಾ ತೊಂದರೆಗೀಡಾಗಿದ್ದಾರೆ. ಅವರನ್ನು ಬಳೆ ಹಾಕಿಕೊಂಡು ಊರಿನೊಳಗೆ ಕರೆದು ಕೊಂಡು ಹೋಗುವುದು ಸರಿಯಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ ರೈತರ ವಿಷಯ ಹೇಳುವುದಾದರೆ ಇವೊತ್ತಿನ ದಿವಸ ರೈತರು ಬೆಳೆದರೆ ನಾವುಗಳು, ಆದುದರಿಂದ ರೈತರ ಹಿತದೃಷ್ಟಿಯಿಂದ, ದೇಶದ ಜನರ ಹಿತದೃಷ್ಟಿಯಿಂದ ರೈತಾಪಿ ಜನಗಳಿಗೆ ನ್ಯಾಯ ದೊರಕಿಸಿ ಎಲ್ಲರೂ ಸುಭಿಕ್ಷತೆಯಿಂದ ಕೂಡಿರುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೆ, ನಮ್ಮ ನೂತನ ರಾಜ್ಯಪಾಲರು 1976ನೆಯ ಇಸವಿಯ ಪ್ರಾರಂಭದಲ್ಲಿ ತಮ್ಮ ಸರ್ಕಾರ ಮಾಡಿರತಕ್ಕ ವರದಿಯನ್ನು ನಮ್ಮ ಸಭೆಯ ಮುಂದೆ ಇಟ್ಟು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಆ ಬಗ್ಗೆ ನಾನು ಸಹ ಮಾನ್ಯ ಪಟ್ಟಸ್ವಾಮಿಯವರೊಂದಿಗೆ ವಂದನೆಯನ್ನರ್ಪಿಸುತ್ತೇನೆ ಎಂದು ಹೇಳುತ್ತೇನೆ. ಈಗ ನಾನು ನೋಡಿದಂತೆ ನಮ್ಮ ಸ್ನೇಹಿತರು ಅನೇಕರು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು, ಅದರಲ್ಲೂ ಶ್ರೀಮಾನ್ ಹನುಮೇಗೌಡರು ಬಹಳ ಚೆನ್ನಾಗಿ ಮಾತನಾಡುತ್ತಾ ಹಿಂದೆ ಆಡಳಿತ ಮಾಡಿರತಕ್ಕ ಪಕ್ಷ ಇದ್ದಿದ್ದರೆ ಬಹುಶಃ ಅವರು ಟ್ಯಾಕ್ಸ್ ವೈಗರೆ ಯಾವುದೇ ಇಲ್ಲದೇ ನಡೆಸುತ್ತಿದ್ದರು ಎನ್ನುವ ಹಾಗೆ ಮಾತನಾಡುತ್ತಿದ್ದಾರೆ. ಅಲ್ಲದೇ ತಾವು ಯಾವುದೇ ಒಂದು ಬೆಟರ್‌ಮೆಂಟ್ ಲೆವಿಯಾಗಲಿ, ಯಾವುದನ್ನು ವಸೂಲು ಮಾಡದೇ ರಾಜಕೀಯವಾಗಿ ತಾವು ತಮ್ಮ ಸ್ಥಾನವನ್ನು ಗಳಿಸಿಕೊಂಡರೆ ಸಾಕು ಎಂದು ಪ್ರಯತ್ನಪಟ್ಟರು. ಆದರೆ ನಾವು 1969ರಲ್ಲಿ ಹೊರಟು ನಮ್ಮ ರಾಜ್ಯವನ್ನು ಅಭಿವೃದ್ಧಿ ಮಾಡಬೇಕೆಂದು ಬಂದಿರುವಂತಹ ಜನರು. 1969ನೇ ಇಸವಿಯಲ್ಲಿ ಒಂದು ಒಳ್ಳೆಯ ಸರ್ಕಾರವನ್ನು ಸ್ಥಾಪನೆ ಮಾಡಬೇಕೆಂದು ಕೆಲವರು ಹೊರಟಿರತಕ್ಕವರಲ್ಲಿ ನಾನು ಒಬ್ಬ ಎಂದು ಹೇಳುತ್ತೇನೆ. ಆದರೆ ಈಗ ಜೂನ್ ತಿಂಗಳಿಂದೀಚೆಗೆ ನಾನು ಏನು ಕಾರ್ಯಕ್ರಮ ಮಾಡಬೇಕೆಂದು ಇದ್ದೆವು ಅದನ್ನು ಮಾಡುತ್ತಿದ್ದೇವೆ ಅದಕ್ಕೆ ಮೊದಲನದು ಹೇಳುವುದಾದರೆ ಪ್ರಜಾಪ್ರಭುತ್ವ ಜಾರಿಯಲ್ಲಿದೆ ಎಂದು ದಿನಬೆಳಗಾದರೆ ಸಾಕು ವಿದ್ಯಾರ್ಥಿಗಳಿಂದ ಬೊಬ್ಬೆ ಎಬ್ಬಿಸುವುದು, ಬೀದಿ ಲೈಟುಗಳನ್ನು ಹೊಡೆಸುವುದು, ಬಸ್ಸುಗಳಿಗೆ ಕಲ್ಲು ತೂರಿಸುವುದು ಇಂತಹ ಕೆಲಸಗಳನ್ನು ಮಾಡಿಸುತ್ತಿದ್ದರು, ಆ ನಷ್ಟಕ್ಕೆ ನಾವು ಹಣ ಖರ್ಚು ಮಾಡಬೇಕಾಗುತ್ತಿತ್ತು. ನಾವು ಯಾವ ಡೆವಲಪ್‌ಮೆಂಟ್ ಕೆಲಸ ಮಾಡಲಿಕ್ಕೆ ಇದರಿಂದಾ ಆಗಲಿಲ್ಲ ಎಂದು ಹೇಳುತ್ತೇನೆ. ಇನ್ನೊಂದು ಮುಖ್ಯ ವಿಷಯ ಹೇಳುವುದಾದರೆ ಅಸೆಂಬ್ಲಿ ಪ್ರಾರಂಭವಾದರೆ ಸಾಕು ಯಾವಾಗ ನೋಡಿದರು ಮೂರು ನಾಲ್ಕು ಕಡೆಗಳಲ್ಲಿ ಡೇರೆ ಹೊಡೆದುಕೊಂಡು ಕುಳಿತಿರುತ್ತಿದ್ದರು ನಾವು ಬರಬೇಕಾದರೆ ಇದನ್ನು ನೋಡಿಕೊಂಡು ಬರಬೇಕಾಗಿತ್ತು ಇದನ್ನು ನೋಡಿಕೊಂಡು ಬಂದು ನಾವು ಏನೊಂದು ಕೆಲಸ ಮಾಡುವುದಕ್ಕಾಗುತ್ತಿರಲಿಲ್ಲ. ಈಗ ಮಾನ್ಯ ಹನುಮೇಗೌಡರು ಬಹಳ ಚೆನ್ನಾಗಿ ಮಾತನಾಡುತ್ತಾ ತುರ್ತು ಪರಿಸ್ಥಿತಿ ಬಗ್ಗೆ ಹೇಳಿದರು ಇವರು ಈ ಮನೆಯಲ್ಲಿ ಎಲ್ಲಾ ವಿಷಯವನ್ನು ಹೇಳಲು ಅವಕಾಶವಿದೆ, ಆದರೆ ಇದೇ ವಿಷಯವನ್ನು ರಸ್ತೆಯಲ್ಲಿ, ಬೀದಿಯಲ್ಲಿ, ಬಸ್‌ಸ್ಟ್ಯಾಂಡ್‌ಗಳಲ್ಲಿ ಆಡಬೇಡಿ ಎಂದು ತುರ್ತು ಪರಿಸ್ಥಿತಿ ತಂದಿರುವುದು ಅವರು ಹೇಳುವಾಗ ಇಂದಿರಾ ಗಾಂಧಿ ಹೆಸರು ಹೇಳಿದರೆ ಸಾಕು ಒಳಗೆ ಹಾಕುತ್ತಾರೆ ಎಂದು ಹೇಳಿದರು, ಯಾವುದನ್ನು ಹೇಳಬೇಕು ಅದನ್ನು ಹೇಳಿದರೆ ಯಾರೂ ಕೂಡ ಅವರನ್ನು ಒಳಗೆ ಹಾಕುವುದಿಲ್ಲ, ಯಾವುದನ್ನು ಎಲ್ಲಿ ಹೇಳಬೇಕೋ ಅದನ್ನು ಅಲ್ಲಿ ಹೇಳಬೇಕು, ಅದನ್ನು ಅರ್ಥಮಾಡಿಕೊಂಡು ಮಾನ್ಯ ಹನುಮೇಗೌಡರು ಮಾತನಾಡಬೇಕು. ನಮ್ಮ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಈ ಒಂದು ತುರ್ತು ಪರಿಸ್ಥಿತಿ ಬಂದಿದ್ದರಿಂದ ಒಂದು ಒಳ್ಳೆಯ ಶಾಂತಿಯುತವಾದ ವಾತಾವರಣದಲ್ಲಿ ಇದ್ದೇವೆ ಎಂದು ನಾನು ಹೇಳುತ್ತೇನೆ. ಇವೊತ್ತಿನ ದಿವಸ ಈ ತುರ್ತುಪರಿಸ್ಥಿತಿ

ಬಂದಿದ್ದರಿಂದ ಜನರು ನಿರ್ಭೀತರಾಗಿ ಯಾವ ತೊಂದರೆ ಇಲ್ಲದೆ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ, ಹೈಸ್ಕೂಲ್‌ಗಳಲ್ಲಿ ವಿದ್ಯಾಭ್ಯಾಸ ಮಾಡಿಕೊಂಡು ಅವರ ಭವಿಷ್ಯದ ನಿರೂಪಣೆ ಮಾಡಿಕೊಳ್ಳುತ್ತಿದ್ದಾರೆ. ಈ ತುರ್ತು ಪರಿಸ್ಥಿತಿ ಜಾರಿಗೆ ತರದೇ ಹೋಗಿದ್ದರೆ ಏನಾಗುತ್ತಿತ್ತು ಎಂದರೆ ಎಲ್ಲಾದರೂ ಒಂದು ಕಾಲೇಜಿನಲ್ಲಿ ಏನಾದರೂ ಒಂದು ಸ್ವಲ್ಪ ಗಲಾಟೆಯಾದರೆ ಸಾಕು ಅದು ದೊಡ್ಡದಾಗಿ ಪೇಪರ್‌ನಲ್ಲಿ ಬರುತ್ತಿತ್ತು, ಅದನ್ನು ನೋಡಿದ ಎಲ್ಲಾ ಕಡೆಗಳಲ್ಲೂ ಕಾಲೇಜು ವಿದ್ಯಾರ್ಥಿಗಳು ಗಲಾಟೆ ಪ್ರಾರಂಭಿಸುತ್ತಿದ್ದರು, ಇದನ್ನು ಮರೆತು ಮಾನ್ಯ ಹನುಮೇಗೌಡರು ಮಾತನಾಡುತ್ತಿದ್ದಾರೆ. ಇನ್ನು ರೈತರ ಬಗ್ಗೆ ಸ್ವಲ್ಪ ಮಾತನಾಡಿದರು, ಅವರ ಬೆಳೆಗೆ ಕೊಡತಕ್ಕ ಹಣ ಕಡಿಮೆ ಎಂದು, ರೈತರು ಸರ್ಕಾರಕ್ಕೆ ಕೊಡತಕ್ಕ ಲೇವಿ ಭತ್ತವನ್ನು ಬಿಟ್ಟರೆ ಅವರು ಉಳಿದ ಧಾನ್ಯವನ್ನು 150 ರೂಪಾಯಿಗಳವರೆಗೆ ಮಾರಾಟ ಮಾಡುತ್ತಾರೆ, ಅದನ್ನು ಹೇಳದ ಯಾವುದೋ ಗೊಬ್ಬರದ ರೇಟು ಲೆಕ್ಕಹಾಕಿಕೊಂಡು ಯಾವುದೋ ಒಂದು ಬಾಯಿಗೆ ಬಂದಂತೆ ಹೇಳಿದರು ಏನೋ ರೈತರ ಪರವಾಗಿ ಮಾತನಾಡಿದ್ದಾರೆ ಎಂದು ತಿಳಿದುಬರಲಿ ಎಂದು ಆ ರೀತಿ ಮಾತನಾಡಿದ್ದಾರೆ. ಈಗ ಸರ್ಕಾರ ಒಂದು ರೀತಿಯಲ್ಲಿ ರೈತರಿಗೆ ಭರವಸೆಕೊಟ್ಟಿದೆ ಅದು ಏನೆಂದರೆ, ನಾವು ಬೆಳೆದಂಥ ಭತ್ತಕ್ಕೆ ನಮಗೆ ಸರ್ಕಾರದಿಂದ ಒಂದು ನಿಗದಿ ಬೆಲೆ ದೊರೆಯುತ್ತದೆ ಎನ್ನುವ ನಂಬಿಕೆ ಅವರಿಗೆ ಬಂದಿವೆ. ನಾವು ಇವೊತ್ತಿನ ದಿವಸ ತುರ್ತು ಪರಿಸ್ಥಿತಿ ಜಾರಿಗೆ ತಂದ ನಂತರ ನಮ್ಮ ನಮ್ಮ ಕೆಲಸಗಳನ್ನು ಚೆನ್ನಾಗಿ ಮಾಡಿಕೊಂಡು ಹೋಗತಕ್ಕ ಅವಕಾಶವಾಗಿದೆ. ಅಲ್ಲದೇ ಎಲ್ಲಾ ಕಡೆಗಳಲ್ಲೂ ಕೂಡ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುತ್ತಿವೆ. ಮೊದಲು ಒಂದು ಆಫೀಸಿನಲ್ಲಿ ಹೋಗಿ ನೋಡಿದರೆ ಅಲ್ಲಿ ಹತ್ತು ಕುರ್ಚಿಗಳು ಇದ್ದರೆ ಮೂರು ನಾಲ್ಕು ಕುರ್ಚಿಗಳಲ್ಲಿ ಕುಳಿತುಕೊಂಡು ಯಾರಾದರೂ ಎಲ್ಲಿಗೆ ಹೋದರು ಎಂದು ಕೇಳಿದರೆ ಅದನ್ನು ಹೇಳುವುದಕ್ಕೆ ಕುಳಿತುಕೊಂಡಿರುತ್ತಿದ್ದರು. ಆದರೆ ಇವೊತ್ತಿನ ದಿವಸ ಅದು ಎಲ್ಲಾ ಹೊರಟುಹೋಗಿ ಎಲ್ಲಾ ಕೆಲಸ ಕಾರ್ಯಗಳು ಸರಿಯಾಗಿ ನಡೆಯುವುದಕ್ಕೆ ಅನುಕೂಲವಾಗಿದೆ ಎಂದು ಹೇಳುತ್ತೇನೆ. ತಾವು ಸಭಾ ಚುನಾವಣೆ ಕಾಲದಲ್ಲಿ ಹೋದಾಗ ಏನು ಹೇಳುತ್ತೀರಾ, ನಾವು ಹೇಳುವುದು ಏನು ಎಲ್ಲರು ಹೇಳುವುದು ಪ್ರಜೆಗಳೇ, ಪ್ರಭುಗಳು, ನಿಮ್ಮ ಓಟಿನಿಂದ ನಾವು ಗೆದ್ದು ಬರಬೇಕು ಎಂದು ಹೇಳುತ್ತೇವೆ. ಆದರೆ ಅವರಿಗೆ ಯಾವರೀತಿ ಅನುಕೂಲ ಮಾಡಿಕೊಡುತ್ತೇವೆ ಅದನ್ನು ನಾವು ಮೊದಲು ನೋಡಬೇಕು. ನಮ್ಮ ಪ್ರಧಾನಿಯವರು ಈ ಭಾರತ ಭೂಮಿಯಲ್ಲಿ ಪ್ರತಿಯೊಬ್ಬ ಪ್ರಜೆಗೂ ಕೂಡ ಒಂದು ಮನೆ ಸ್ಥಳದ ಅಧಿಕಾರವಾದರೂ ಇರಬೇಕಾಗುತ್ತದೆ, ಆಗ ಅವನು ಒಬ್ಬ ನಿಜವಾದ ಪ್ರಜೆಯಾದಂತಾಗುತ್ತದೆ ಎಂದು ಜನತಾ ಹೌಸಿಂಗ್ ಸ್ಕೀಮು ತಂದರು ಅದನ್ನು ಬಿಟ್ಟು ತಾವು ಈ ಸರ್ಕಾರವನ್ನು ಟೀಕೆ ಮಾಡಿಕೊಂಡು ಹೋದರೆ ಅದು ಸಾಧ್ಯವಾಗುತ್ತದೆಯೇ, ಚುನಾವಣೆಯಾಗಿ ಬಂದಂಥವರನ್ನು ಘೇರಾವೋ ಮಾಡುವುದಕ್ಕೆ ಹೋದರೆ ವಿದ್ಯಾರ್ಥಿಗಳನ್ನು ಶಾಲಾ ಕಾಲೇಜಿಗೆ ಹೋಗದಂತೆ ಪ್ರಚೋದಿಸಿದರೆ. ಇನ್ನು ಚುನಾವಣೆ ಮಾಡುವುದು ಎಲ್ಲಿ ಬಂತು ಎಂದು ಮಾನ್ಯ ಹನುಮೇಗೌಡರಿಗೆ ಕೇಳುತ್ತೇನೆ. ಇದು ಯಾರು ಮಾಡಿದ ತಪ್ಪು ಎಂದು ನಾವು ನೋಡಬೇಕಾಗುತ್ತದೆ. ಅಷ್ಟೇ ಅಲ್ಲದೇ ಆ ಸಮಯದಲ್ಲಿ ಬೆಲೆಗಳ ಏರಿಕೆ ಬಹಳವಾಗಿತ್ತು. ದಾಸ್ತಾನುಗಾರರನ್ನು, ಕಳ್ಳಸಾಗಾಣಿಕೆದಾರರನ್ನು ಮಾತನಾಡಿಸುವವರೇ ಗತಿ ಇರಲಿಲ್ಲ. ಡಿಸೆಂಬರ್ 31ನೇ ತಾರೀಖು ಮಧ್ಯರಾತ್ರಿ 12 ಗಂಟೆಯಲ್ಲಿ ಎಷ್ಟು ಕಳ್ಳಹಣ ಹೊರಗಡೆ ಬಂತು ಎಂಬುದನ್ನು ನಾವು ಲೆಕ್ಕ ಹಾಕಿದರೆ, ಅದು ಬಂದಿದ್ದು ತುರ್ತು ಪರಿಸ್ಥಿತಿಯ ಘೋಷಣೆಯ ಸಂಬಂಧದಿಂದಲ್ಲವೇ ಎಂಬುದು ತಮಗೆಲ್ಲಾ ಗೊತ್ತಿದೆ. ಆದರೆ, ಇನ್ನೂ ಬೇಕಾದಷ್ಟು ಕಾಳಹಣ ಹಾಗೆಯೇ ಇದೆ. ಆದರೂ ಕೂಡ 1,113 ಕೋಟಿ ರೂಪಾಯಿಯಷ್ಟು ಕಾಳಧನ ಆ ಸಮಯಕ್ಕೆ ಬಂದಿದೆ. ಆದುದರಿಂದ, ತುರ್ತು ಪರಿಸ್ಥಿತಿ ಘೋಷಣೆಯಿಂದ ಏನಾಯಿತು ಎಂದು ಈಗೇನು ಹೊಸದಾಗಿ ಹುಡುಕಬೇಕಾಗಿಲ್ಲ. ಅದೇ ರೀತಿಯಲ್ಲಿ ಕಂಟ್ರಾಕ್ಟ್ ಕ್ಯಾರೇಜ್‌ಗಳ ವಿರುದ್ಧ ಕ್ರಮ ತಗೆದುಕೊಂಡಿದ್ದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತೇ ಇದೆ. ಈ ಕ್ರಮ ತೆಗೆದುಕೊಳ್ಳದೇ ಇದ್ದಿದ್ದರೆ, ಸರ್ಕಾರದ ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ನಿಲ್ಲಿಸುವುದನ್ನು ಬಿಟ್ಟು ಬೇರೆ ಮಾರ್ಗವೇ ಇರುತ್ತಿರಲಿಲ್ಲ. ಶಿವಮೊಗ್ಗಕ್ಕೆ ಬೆಂಗಳೂರು ನಗರದಿಂದ 3–4 ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಹೊರಟರೆ, ಕಂಟ್ರಾಕ್ಟ್ ಕ್ಯಾರೇಜ್ ಬಸ್ಸುಗಳು ಸುಮಾರು 15 ಹೋಗುತ್ತಿದ್ದವು. ಸರ್ಕಾರದ ಪರವಾಗಿ ಮತ್ತು ವಿರುದ್ಧವಾಗಿ ಮಾತನಾಡುವವರೆಲ್ಲಾ ಆ ಕಂಟ್ರಾಕ್ಟ್ ಕ್ಯಾರೇಜ್ ಬಸ್ಸುಗಳಲ್ಲೇ ಹೋಗುತ್ತಿದ್ದರು. ಅದು ಹೇಗೆಂದರೆ, ಮೊದಲೇ ರಿಜರ್ವ್

ಮಾಡಿಸಿ, ದುಡ್ಡು ಕೊಟ್ಟು ಹೋಗುತ್ತಿದ್ದರು. ಆದರೆ, ಸರ್ಕಾರಿ ಬಸ್ಸಿಗೆ ಯಾರೂ ಆ ರೀತಿ ಕಷ್ಟಪಟ್ಟು ಹೋಗುತ್ತಾ ಇರಲಿಲ್ಲ. ಅವರು, ಸರ್ಕಾರದ ಬಸ್ಸಿನಲ್ಲಿ ಹೋದರೆ, ಸರ್ಕಾರಕ್ಕೆ ಆದಾಯ ಬರುತ್ತದೆ, ಬಂದ ಆದಾಯದ ಹಣದಿಂದ ದೇಶದ ಅಭಿವೃದ್ಧಿಯಾಗುತ್ತದೆ, ಎನ್ನುವ ವಿಷಯವನ್ನೇ ಅವರು ತಿಳಿದುಕೊಂಡಿರಲಿಲ್ಲ.

2-30 P.M.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಹೋಗುತ್ತಿರಲಿಲ್ಲವೇ?

ಶ್ರೀ ಕೆ. ಎನ್. ವೀರಪ್ಪಗೌಡ.—ಇಲ್ಲ. ನಾನು ಇಲ್ಲಿಗೆ ಸದಸ್ಯನಾಗಿ ಬಂದಲಾಗಾಯ್ತು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತಲೇ ಇದ್ದೇನೆ. ಆದುದರಿಂದ ತುರ್ತುಪರಿಸ್ಥಿತಿ ಘೋಷಣೆ ಮಾಡದಿದ್ದರೆ ಇವೆಲ್ಲವೂ ಆಗುತ್ತಿರಲಿಲ್ಲವೆಂದು ಹೇಳುತ್ತೇನೆ. ಅಷ್ಟೇ ಅಲ್ಲದೆ, ಈಗ ದಿವಸವೊಂದಕ್ಕೆ ಲಕ್ಷಗಟ್ಟಲೆ ಹೆಚ್ಚು ಉತ್ಪತ್ತಿ ಬರುತ್ತಿದೆ ಎನ್ನುವುದನ್ನು ತಾವೆಲರೂ ತಿಳಿದುಕೊಂಡಿದ್ದೀರಿ ಎಂದು ಭಾವನೆ ಮಾಡುತ್ತೇವೆ. ಆದರೆ, ತುರ್ತುಪರಿಸ್ಥಿತಿಯಲ್ಲಿ ಆಗಿರತಕ್ಕ ಕಾರ್ಯಗಳನ್ನು ನೋಡಿದರೂ ಕೂಡ ತಮಗ್ಯಾರಿಗೂ ಹೇಳುವುದಕ್ಕೆ ಮನಸ್ಸು ಬರುತ್ತಾ ಇಲ್ಲ. ಅಷ್ಟೇ ಅಲ್ಲದೆ, ಅಕ್ರಮ ಸಾಗುವಳಿ ಮಾಡುತ್ತಿದ್ದವರ ವಿರುದ್ಧವೂ ಕೂಡ ಸರ್ಕಾರದವರು ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡಿದ್ದೇವೆ. ಇದು ಸ್ಪಷ್ಟವಾದ ನಿಲುವು ಎಂದು ಒಪ್ಪಿಕೊಳ್ಳುವುದಾದರೂ ಕೂಡ, ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಅದೇನೆಂದರೆ, ಅನೇಕ ಜನರು ಕೇವಲ 10 ಗುಂಟೆ, 15 ಗುಂಟೆ, ಒಂದು ಎಕರೆ, 2 ಎಕರೆ ಜಮೀನಿಗೆ ಸಾಗುವಳಿ ಚೀಟಿ ಇಲ್ಲದೆ ಸಾಗುವಳಿ ಮಾಡುವವರು ಇದ್ದಾರೆ. ಅದನ್ನು ಬಿಟ್ಟು ಅವರಿಗೆ ಅನ್ಯ ಮಾರ್ಗವೇ ಇಲ್ಲ. ಆದರೆ, ಯಾರು 250 ಎಕರೆ ಸಾಗುವಳಿ ಚೀಟಿ ಹಿಡಿದು, 500 ಎಕರೆಗೆ ಬೇಲಿ ಹಾಕಿಕೊಂಡು ಅಕ್ರಮ ಪ್ರವೇಶ ಮಾಡಿ ಸಾಗುವಳಿ ಮಾಡುತ್ತಿದ್ದಾರೆ, ಅವರನ್ನು ಕಂಡುಹಿಡಿದಿಲ್ಲ. ಈಗ ಈ ಕಾನೂನಿನಿಂದ ಸಾಮಾನ್ಯ ಜನರಿಗೆ, ಬಡವರಿಗೆ ನೇರವಾಗಿ ಪರಿಣಾಮ ಆಗುತ್ತದೆ. ಆದುದ್ದರಿಂದ ಸರ್ಕಾರದವರು ಇದನ್ನು ಅರ್ಥ ಮಾಡಿಕೊಂಡು, ಈ ಬಗ್ಗೆ ಏನಾದರೂ ವ್ಯವಸ್ಥೆ, ಅಂದರೆ, ಇಷ್ಟು ಜಮೀನು ಇರತಕ್ಕವರಿಗೆ ಇದರಿಂದ ವಿನಾಯಿತಿ ಇಲ್ಲ; ಇಂತಿಷ್ಟು ಇರುವವರಿಗೆ ವಿನಾಯಿತಿ ಇದೆ ಎಂದು ಮಾಡುವ ಅಗತ್ಯವಿದೆ ಎಂದು ಒತ್ತಿ ಹೇಳುತ್ತೇನೆ. ಸಾಮಾನ್ಯ ಜನರ ಏಳಿಗೆಗಾಗಿ ಶ್ರಮ ಪಡುತ್ತೇವೆ ಎಂದು ನಾವು ಹೇಳುವಾಗ, ಸರ್ಕಾರದವರು ಇದನ್ನು ಯೋಚನೆ ಮಾಡಬೇಕಾಗಿದೆ.

ಇನ್ನು ಭೂಸುಧಾರಣೆ ವಿಷಯ ಹೇಳುವುದಾದರೆ, ಇದು ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ; ಇದು ಬಂದದ್ದು 1962 ನೇ ಇಸವಿಯ ಚುನಾವಣೆ ಸಮಯದಲ್ಲಿ ರಾಷ್ಟ್ರಪತಿಗಳ ಅಂಗೀಕಾರ ಪಡೆಯಿತು. ಅಲ್ಲಿಂದಲೂ 1965 ನೇ ಇಸವಿಯವರೆಗೂ ನಾನಾ ಕಾರಣಗಳಿಂದಾಗಿ ಮುಂದೂಡುತ್ತಲೇ ಬಂದಿತು. 1965 ರಲ್ಲಿ ಬಂದ ಕಾನೂನಿನಲ್ಲಿ ಏನಿತ್ತು ಎಂದರೆ, ಜಮೀನ್ದಾರರು, ಜಮೀನು ವಾಪಸ್ಸು ಬೇಕು ಎಂದು ಕೇಳುವವರೂ ಕೂಡ, ತಕ್ಷಣ ಸರ್ಕಾರಕ್ಕೆ ಅರ್ಜಿ ಹಾಕಬೇಕು. ಅಲ್ಲಿಂದ ಟ್ರಿಬುನಲ್ ಎಂದು ಮಾಡಿ, ಅಲ್ಲಿ ಲಾಯರುಗಳು ಹಾಜರಾಗಲು ಅವಕಾಶವಿತ್ತು ಆ ವ್ಯವಸ್ಥೆಯಿಂದ ಗೇಣಿದಾರರು ಹಣ ಕಳೆದುಕೊಳ್ಳಬೇಕಾಗಿತ್ತು. ಆದುದರಿಂದ, ಈಗ ಆ ವ್ಯವಸ್ಥೆಯನ್ನು ಮಾಡಿಲ್ಲ. ಈಗ ಭೂ ಮಾಲೀಕರು ಭೂಮಿ ಬಿಡಿಸಿಕೊಳ್ಳುವುದಕ್ಕೆ ಅರ್ಜಿ ಹಾಕುವ ಪ್ರಶ್ನೆಯೇ ಇಲ್ಲ. ಅಲ್ಲಿನ ವಿಚಾರವನ್ನು ಸ್ಥೂಲವಾಗಿ ತಿಳಿದಿರತಕ್ಕ ವ್ಯಕ್ತಿಗಳನ್ನೊಳಗೊಂಡ ಟ್ರಿಬ್ಯೂನಲ್ ಎಂದು ಮಾಡಿ, ನ್ಯಾಯ ಒದಗಿಸುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇನೆ. ಈಗ ಇರುವ ಟ್ರಿಬ್ಯೂನಲ್‌ಗಳು ಬೇಗ ಬೇಗ ಕೇಸುಗಳನ್ನು ತೀರ್ಮಾನ ಮಾಡುತ್ತಾ ಇವೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲೇ ತೆಗೆದುಕೊಳ್ಳುವುದಾದರೆ, ಸುಮಾರು 7152 ಅರ್ಜಿಗಳು ಬಂದಿದ್ದವು; ಇದರಲ್ಲಿ 3254 ಅರ್ಜಿಗಳನ್ನು ಈಗಾಗಲೇ ತೀರ್ಮಾನ ಮಾಡಿದ್ದೇವೆ. ತಿಂಗಳಿಗೆ 12 ರಿಂದ 15 ದಿವಸ ಬರೀ ಅದೇ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇದರ ನಿಮಿತ್ತವಾಗಿ ಬೆಂಗಳೂರು ನಗರಕ್ಕೆ ಬರುವುದನ್ನೂ ಕಡಿಮೆ ಮಾಡಿ, ಅದರ ಕಡೆ ಹೆಚ್ಚು ಗಮನ ಕೊಟ್ಟಿದ್ದೇವೆ. ಅಷ್ಟು ಶೀಘ್ರವಾಗಿ ನಾವು ಕೆಲಸಗಳನ್ನು ಮಾಡುತ್ತಿದ್ದೇವೆ. ಆದುದರಿಂದ, ಇಷ್ಟು ಮಾತ್ರ ಸತ್ಯ. ತುರ್ತುಪರಿಸ್ಥಿತಿ ಬಂದನಂತರ ದೇಶದಲ್ಲಿ ಹೆಚ್ಚು ಹೆಚ್ಚು ಕಾರ್ಯಸಾಧನೆಯಾಗುತ್ತಿದೆ ಎನ್ನುವುದು.

ಇನ್ನು ಕೈಗಾರಿಕೆಗಳ ವಿಷಯ ತೆಗೆದುಕೊಂಡರೆ, ದಿನಬೆಳಗಾದರೆ ಎಲ್ಲೆಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಇದ್ದವೋ ಅಲ್ಲೆಲ್ಲಾ ಕೆಂಪು ಬಾವುಟಗಳು ಹಾರಾಡುತ್ತಿದ್ದವು. ಆದರೆ, ಇವತ್ತಿನ ದಿವಸ ಅಂಥಾ ಕೆಂಪು ಬಾವುಟಗಳು ಕಣ್ಣಿಗೆ ಬೀಳುವುದೇ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಏತಕ್ಕೆ ಬೀಳುವುದಿಲ್ಲ? ಮಾನ್ಯ ಸದಸ್ಯರಿಗೆ ಬಾವುಟ ಕಂಡರೆ ಹೆದರಿಕೆಯಾಗುತ್ತದೆಂದು ಕಾಣುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಇದರ ಅರ್ಥ; ನೌಕರರು ಹೆಚ್ಚು ಕೆಲಸ ಮಾಡುತ್ತಿದ್ದಾರೆ ಎಂದು. ಈಗ ದೇಶದ ಉತ್ಪತ್ತಿ ಜಾಸ್ತಿಯಾಗುತ್ತಾ ಇದೆ; ಆ ಮೂಲಕ ಕಾರ್ಮಿಕರ ಉತ್ಪತ್ತಿ ಕೂಡ ಜಾಸ್ತಿಯಾಗುತ್ತಾ ಇದೆ. ಹಿಂದೆ ವಿಧಾನ ಸಭೆ ನಡೆಯುವ ಸಂದರ್ಭಗಳಲ್ಲಿ ಯಾವ ಯಾವ ರೀತಿಯ ಬಾವುಟಗಳು ಬೋರ್ಡ್‌ಗಳನ್ನು ನೋಡುವುದು; ಅವರ ಬಗ್ಗೆ ವಿಧಾನ ಸಭೆಯಲ್ಲಿ ನಿಲುವಳಿ ಸೂಚನೆ ಮಂಡಿಸುವುದು; ಗಮನ ಸೆಳೆಯುವ ಸೂಚನೆಗಳನ್ನು ಮಂಡಿಸುವುದು ಇದೆಲ್ಲಾ ನಡೆದಿತ್ತು. ಇದನ್ನು ನಾವು; ನೀವು; ಎಲ್ಲರೂ ನೋಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗೆ ಮಾಡುವುದು ತಪ್ಪೇ ?

ಶ್ರೀ ಕೆ. ಎನ್. ವೀರಪ್ಪಗೌಡ.—ಬಹುಶಃ ಈಗ ಅದ್ಯಾವುದಕ್ಕೂ ಅವಕಾಶವಿಲ್ಲ. ಸಾವಿರಾರು ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕ ಕಾಲೇಜು ಲೆಕ್ಚರರ್ ಕೂಡ ಮುಷ್ಕರ ಹೂಡಿಬಿಟ್ಟಿದ್ದರು. ಜಡ್ಜಸ್‌ಗಳೂ ಕೂಡ ಒಂದು ಸಂಘ ಮಾಡಿಕೊಂಡು ಸೇರಿದ್ದರು. ಇದನ್ನು ನೋಡಿದರೆ ಪ್ರಜಾ ಪ್ರಭುತ್ವ ಎಲ್ಲಿಯವರೆಗೆ ಹೋಗಿತ್ತು ಎನ್ನುವುದು ನಮಗೆ ವೇದ್ಯವಾಗುತ್ತದೆ. ಈಗ ಸ್ವಲ್ಪ ಮಟ್ಟಿಗೆ ಎಲ್ಲರೂ ನಿರಾತಂಕವಾಗಿ ಅವರವರ ಕಾರ್ಯದಲ್ಲಿ ತೊಡಗಿದ್ದಾರೆ. ಯಾರೋ ನಾಲ್ಕೈದು ಪರ್ಸೆಂಟ್ ಜನ ತುರ್ತುಪರಿಸ್ಥಿತಿಯಿಂದ ತೊಂದರೆಯಾಗುತ್ತದೆ ಎಂದು ಹೇಳಿದರೆ ವಿಚಾರಾರ್ಹ ವಲ್ಲ. ಹಳ್ಳಿಗಾಡುಗಳಲ್ಲಿ ಎಲ್ಲರೂ ಇವತ್ತಿನ ದಿವಸ ನಿರ್ಭೀತಿಯಿಂದ ಓಡಾಡುತ್ತಿದ್ದಾರೆ ನಾವು ಕೂಡ ನಿರ್ಭೀತಿಯಿಂದ ಕೆಲಸ ಮಾಡುತ್ತಿದ್ದೇವೆ. ದೇಶದ ಜನಜೀವನ ಈಗ ಸುಖವಾಗಿ ನಡೆಯುತ್ತಾ ಇದೆ; ಈ ತುರ್ತುಪರಿಸ್ಥಿತಿಯನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ, ಆದುದರಿಂದ, ಈ ತುರ್ತುಪರಿಸ್ಥಿತಿ ಇನ್ನೂ ಹೆಚ್ಚು ಕಾಲ ಇದ್ದರೆ ಬಹಳ ಒಳ್ಳೆಯದು ಎಂದು ಅಭಿಪ್ರಾಯ ಪಡುತ್ತೇನೆ. ಇದನ್ನು ವಿರೋಧಪಕ್ಷದ ಸದಸ್ಯರೂ ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ.

ಇನ್ನು, ನಾನು ಅನೇಕ ಸಂದರ್ಭದಲ್ಲಿ ಕಾನೂನುಗಳನ್ನು ಸರ್ಕಾರದವರು ಮಾಡುವ ಬಗ್ಗೆ ನಮ್ಮ ಹಳ್ಳಿಗಳಲ್ಲಿ ಹೇಳಿದ್ದೇನೆ. ಸರ್ಕಾರ ಕಾನೂನು ಮಾಡಿದಾಗ ಅದನ್ನು ಯಾರೂ ತಪ್ಪಿ ನಡೆಯಬೇಡಿ; ಸರ್ಕಾರ ಒಂದು ಕಾನೂನು ಮಾಡಿದಾಗ, ನೀವು ಅದರಿಂದ ತಪ್ಪಿಸಿಕೊಂಡು, ಅದರ ಕೆಳಗಡೆ ಹೋಗಲಿಕ್ಕೆ ಪ್ರಯತ್ನ ಮಾಡಿದಾಗ, ಅಥವಾ ಹೋದಾಗ ಸರ್ಕಾರ ಇನ್ನೊಂದು ಕಾನೂನು ತರುತ್ತದೆ, ಅದುದರಿಂದ ನಾವು ಜಾಗ್ರತರಾಗಿದ್ದಷ್ಟು ಸರ್ಕಾರದ ಕಾನೂನು ಕಡಿಮೆಯಾಗುತ್ತದೆ ಎಂದು ಹೇಳಿದ್ದೇನೆ. ಇಲ್ಲಿ ನಾನು ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಅದೇನೆಂದರೆ, ಇಂದಿನ ತುರ್ತುಪರಿಸ್ಥಿತಿ, ಜಯಪ್ರಕಾಶ ನಾರಾಯಣರಾಗಲೀ, ಅಥವಾ ವಿರೋಧ ಪಕ್ಷದವರಾಗಲೀ ಇಲ್ಲಿಯವರೆಗೆ ವರ್ತಿಸಿದ ರೀತಿಯ ಪರಿಣಾಮವಾಗಿ ಘೋಷಣೆಯಾಗಿದೆ ಎಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಂದರೆ, ಇಂದಿನ ಯಶಸ್ಸಿಗೆ ಜಯಪ್ರಕಾಶ್ ನಾರಾಯಣರೇ ಕಾರಣರು ಎಂದ ಹಾಗಾಯ್ತು !

ಶ್ರೀ ಕೆ. ಎನ್. ವೀರಪ್ಪಗೌಡ.—ನಿಮ್ಮಿಂದಲೇ ಎಲ್ಲ ಜನರೂ ಸುಖವಾಗಿದ್ದಾರೆ ಎಂದೂ ಬೇಕಾದರೂ ನಾವು ಒಪ್ಪಿಕೊಳ್ಳುತ್ತೇವೆ.

ನಮ್ಮ ಹನುಮೇಗೌಡರು ಟ್ಯಾಕ್ಸ್ ಮತ್ತು ಬಡ್ತಿ ಬಗ್ಗೆ ಹೇಳಿದರು. 50 ಕಿಲೋ ಮೀಟರು ರಸ್ತೆಯನ್ನು ತೆಗೆದುಕೊಳ್ಳುತ್ತಿದ್ದಾರೆಂದು ತಾವು ಹೇಳಿದಿರಿ, 50 ಕಿಲೋಮೀಟರು ರಸ್ತೆಯನ್ನು ಒಂದೊಂದು ತಾಲ್ಲೂಕಿನಲ್ಲಿ ತೆಗೆದುಕೊಂಡು ದುರಸ್ತಿ ಮಾಡಬೇಕಾದರೆ ದುಡ್ಡು ಎಲ್ಲಿದೆ ? ತೆಗೆದುಕೊಂಡಂತಹ ರಸ್ತೆಯನ್ನು ಪೂರ್ತಿ ಮಾಡಲೇ ಬೇಕೆಂದು ಈಗ ತಾನೇ ಹೇಳಿದಿರಿ. ಟ್ಯಾಕ್ಸ್ ಯಾವುದೇ ಜಾಸ್ತಿ ಮಾಡಬಾರದು ಎಂದು ತಾವು ಹೇಳುತ್ತೀರಿ, ಎಲ್ಲಾ ನೀರಾವರಿ ಸೌಕರ್ಯ

ಗಳು ಆಗಬೇಕು. ? ಹೊಸ ಹೊಸ ಆಸ್ಪತ್ರೆಗಳು ಆಗಬೇಕು ? ಮೈಲಿಗೊಂದರಂತೆ ಸ್ಕೂಲುಗಳು ಆಗಬೇಕು, ಇವೆಲ್ಲಾ ಆಗಬೇಕಾದರೆ ಟ್ಯಾಕ್ಸ್ ಹಾಕುವುದು ಬೇಡವೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ವೀರಪ್ಪಗೌಡರು ಈ ರೀತಿ ಮಾತನಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ನಾನು ಹೇಳುವುದನ್ನು ಸ್ವಲ್ಪ ಕೇಳಿ, ನಾನು ನಿಮ್ಮ ಪಕ್ಷದಲ್ಲಿಯೇ ಇದ್ದೆ; ಅದನ್ನು ಸಹಿಸದೇ ವಿರೋಧಿಸಿ ಈ ಕಡೆ ಬಂದಿದ್ದೇನೆ. ನಿಮ್ಮ ಹಾಗೆ ಅಧಿಕಾರಕ್ಕೆ ಅಂಟಿಕೊಂಡಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನೀವು ಈ ಕಾಂಗ್ರೆಸ್ಸಿನಲ್ಲಿ ಮೊದಲಿನಿಂದಲೂ ಇದ್ದವರು.

ಶ್ರೀ ಕೆ. ಎನ್. ವೀರಪ್ಪಗೌಡ.—ದೊಡ್ಡ ಬಾಡೆಯಂತಿದೆ ನಿಜಲಿಂಗಪ್ಪನವರ ಸರ್ಕಾರ ಮತ್ತು ವೀರೇಂದ್ರಪಾಟೀಲರ ಸರ್ಕಾರ ಒಡೆಯಲು ಸಾಧ್ಯವಿಲ್ಲ ಎಂಬ ಕಾಲದಲ್ಲಿ ಕೇವಲ 13 ಜನ ಮಾತ್ರ ಬಿಟ್ಟು ಹೊರಟೆವು ಅದನ್ನು ನೆನಪಿನಲ್ಲಿ ಇಟ್ಟುಕೊಳ್ಳಿ. ಈಗ ಈ ಒಂದು ಸಂದರ್ಭದಲ್ಲಿ ಹೇಳುವುದಾದರೆ ಎಷ್ಟರಮಟ್ಟಿನ ಕೆಲಸಗಳಾಗಿವೆ ಎಂಬುದನ್ನು ನಾನು ಹೊಸದಾಗಿ ಹೇಳಬೇಕಾಗಿಲ್ಲ. ಸಾಮಾನ್ಯವಾಗಿ ಈ ಒಂದು ರಸ್ತೆಗಳ ನಿರ್ಮಾಣ ತೆಗೆದುಕೊಂಡರೆ, ಸುಮಾರು 7 ಸಾವಿರ ಕಿಲೋಮೀಟರ್ ರಸ್ತೆಯನ್ನು ಮಾನ್ಯ ಚನ್ನಬಸಪ್ಪನವರು ಸರ್ಕಾರಕ್ಕೆ ಹೊಸದಾಗಿ ತೆಗೆದುಕೊಂಡಿದ್ದಾರೆ, ರಸ್ತೆಗಳನ್ನು ತೆಗೆದುಕೊಂಡ ಮೇಲೆ ಅಭಿವೃದ್ಧಿ ಮಾಡಬೇಕು, ಅಭಿವೃದ್ಧಿ ಮಾಡಬೇಕಾದರೆ ಹಣಕಾಸು ಬೇಕೇ ಬೇಕು. ಇವತ್ತು ತೆಗೆದುಕೊಂಡಿರುವುದನ್ನು ಕೈಬಿಡುವುದಕ್ಕೆ ಆಗುವುದಿಲ್ಲ. ಅದರಮೇಲೆ ಎಷ್ಟು ಖರ್ಚಾಗುತ್ತದೆ, ಅಷ್ಟು ಟ್ಯಾಕ್ಸನ್ನು ಹಾಕಲೇಬೇಕಾಗುತ್ತದೆ. ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಕ್ಕೆ ಇಚ್ಛೆಪಡದೆ, ಒಟ್ಟಿನಲ್ಲಿ ತುರ್ತುಪರಿಸ್ಥಿತಿ ಬಂದನಂತರ ಮತ್ತು ರಾಷ್ಟ್ರದಲ್ಲಿ, ದೇಶದಲ್ಲಿ ಒಳ್ಳೆಯ ಕೆಲಸ ಮಾಡತಕ್ಕ ಮನೋಭಾವ ಬಂದಿದೆ. ಅದಕ್ಕೆ ನಾವು ಸಂತೋಷಪಡಬೇಕು. ಮಾನ್ಯ ರಾಜ್ಯಪಾಲರು ಸರ್ಕಾರದವರು ಒಂದು ವರ್ಷದಲ್ಲಿ ಏನು ಮಾಡಿದ್ದಾರೆ. ಮುಂದೆ ಏನು ಮಾಡಬೇಕಾಗಿದೆ ಎಂದು ಇವತ್ತು ನಮ್ಮ ಮುಂದೆ ಕೆಲವು ಅಂಶಗಳನ್ನು ಇಟ್ಟಿದ್ದಾರೆ ಇದಕ್ಕೆ ನಾನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ನಿನ್ನೆ ದಿವಸ ಮಾತನಾಡುತ್ತಾ ಮಾನ್ಯ ಕಕ್ಕಿಲಾಯರವರು ಹಲವಾರು ವಿಷಯಗಳನ್ನು ಹೇಳಿದ್ದಾರೆ. ಮಾನ್ಯ ಪುಟ್ಟಸ್ವಾಮಿಯವರು ರಾಜ್ಯಪಾಲರ ಭಾಷಣಕ್ಕೆ ಬೆಂಬಲ ಕೊಟ್ಟು 3-4 ಗಂಟೆಗಳ ಕಾಲ ಮಾತನಾಡಿದ್ದನ್ನು ಕೇಳಿದ್ದೇನೆ. ಅದೇ ರೀತಿಯಲ್ಲಿ ಆ ಕಡೆ ಇರುವ ವಿರೋಧ ಪಕ್ಷದ ನಾಯಕರನ್ನು ಒಳಗೊಂಡು ಇತರೆ ಸ್ನೇಹಿತರು ಮಾತನಾಡಿದ್ದನ್ನು ಕೇಳಿದ್ದೇನೆ. ಒಂದು ಕಡೆ ನಮ್ಮ ಸ್ನೇಹಿತರು ಹಾಗೂ ಶ್ರೀ ಮಾನ್ ಪುಟ್ಟಸ್ವಾಮಿಯವರು ಸಹ ಪರಿಸ್ಥಿತಿ ಚೆನ್ನಾಗಿದೆ, ಅನುಕೂಲವಾಗಿದೆ ಯಾವ ರೀತಿಯಲ್ಲೂ ಕೆಟ್ಟಿಲ್ಲ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ''ರೋಸಿ ಪಿಕ್ಚರ'' ಎನ್ನುತ್ತಾರೆ ಇಂಗ್ಲಿಷಿನಲ್ಲಿ ಆ ರೀತಿ, ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಬಗ್ಗೆ ಮಾತನಾಡಿದರು. ಈ ಕಡೆ ಯಾವರು ಸರ್ಕಾರ ಮಾಡಿದ್ದೆಲ್ಲಾ ತಪ್ಪು, ಎಲ್ಲಾ ಕೆಟ್ಟುಹೋಗಿದೆ ಪ್ರಜಾಪ್ರಭುತ್ವದ ಕೊಲೆಯಾಗಿದೆ, ಎಲ್ಲವೂ ನಾಶವಾಗಿವೆ ತುರ್ತುಪರಿಸ್ಥಿತಿ ಸರಿಯಿಲ್ಲ ಎಂಬ ವಾದವನ್ನು ಇಟ್ಟು ಮಾತನಾಡಿದರು, ನನ್ನ ಅಭಿಪ್ರಾಯದಲ್ಲಿ ಈ ಎರಡು ವಾದಗಳು ಸರಿಯಾದುದು ಅಲ್ಲ. ಈಗ ಬಂದಿರುವ ತುರ್ತುಪರಿಸ್ಥಿತಿಯನ್ನು ನಾನು ಸ್ವಾಗತಿಸುತ್ತೇನೆ, ಮತ್ತು ಇದು ಸರಿಯಾದುದು ಎಂದು ನನ್ನ ಅಭಿಪ್ರಾಯ. ಏತಕ್ಕೋಸ್ಕರ ತುರ್ತುಪರಿಸ್ಥಿತಿ ಬಂದಿತು ? ಯಾವ ಕಾರಣಗಳಿಗಾಗಿ ತುರ್ತುಪರಿಸ್ಥಿತಿ ಬಂತು ಎನ್ನುವುದನ್ನು ನನ್ನ ಸ್ನೇಹಿತರಾದ ಶ್ರೀ ಮಾನ್ ಕಕ್ಕಿಲಾಯರವರು ಹೇಳಿದ್ದಾರೆ. ಇದರ ಬಗ್ಗೆ ಕೆಲವರ ಅಭಿಪ್ರಾಯ ಏನು ಎಂದರೆ, ತುರ್ತುಪರಿಸ್ಥಿತಿ ಬರುವ ಅವಶ್ಯಕತೆ ಇರಲಿಲ್ಲ, ನಮ್ಮ ದೇಶದಲ್ಲಿ ಬೇರೆ ಕಾನೂನುಗಳು ಇದ್ದವು, ಅವುಗಳನ್ನು ಉಪಯೋಗಮಾಡಬಹುದಿತ್ತು. ವಿನಾಕಾರಣ ಕೆಲವರನ್ನು ಬಂಧನದಲ್ಲಿ ಇಟ್ಟಿದ್ದಾರೆ ಎನ್ನುವ ವಾದ ಕೂಡ ಇದೆ. ತಪ್ಪು ಮಾಡಿದರೆ ಶಿಕ್ಷೆ ಕೊಡಿ, ಮೀಸಾ, ಡಿ. ಐ. ಆರ್. ಉಪಯೋಗಿಸುವುದು ಏತಕ್ಕೆ ಎಂದು ಎರಡನೇ ವಾದ, ಈ ವಾದಗಳಲ್ಲಿ ಯಾವ ತಿರುಳೂ ಇಲ್ಲ. ಇಲ್ಲಿ ಪ್ರಶ್ನೆ, ಇರುವುದು

ರಾಜಕೀಯ ಪ್ರಶ್ನೆ, ವ್ಯಕ್ತಿಗಳ ಪ್ರಶ್ನೆ ಅಲ್ಲ. ಮಾನ್ಯ ದೇವೇಗೌಡರ ಮಾತು ಜಯಪ್ರಕಾಶ್ ನಾರಾಯಣರ ಪ್ರಶ್ನೆ ಅಲ್ಲ. ರಾಜಕೀಯವಾಗಿ ಅವರ ಧೋರಣೆ ಏನು ಇತ್ತು, ಯಾರು ಯಾರು ಜಯಪ್ರಕಾಶ್ ನಾರಾಯಣರವರ ಚಳುವಳಿಗೆ ಬೆಂಬಲ ಕೊಡುತ್ತಿದ್ದರು ? ಅವರ ರಾಜಕೀಯಕ್ಕೆ ಒಪ್ಪಿಗೆ ಕೊಟ್ಟಿದ್ದರೆ ದೇಶ ಏನಾಗುತ್ತಿತ್ತು ಎನ್ನುವುದು ಮುಖ್ಯ ಸಮಸ್ಯೆ. ಅವರ ರಾಜಕೀಯಕ್ಕಾಗಿ ಬೆಂಬಲ ಕೊಟ್ಟು ಅವರು ಅಧಿಕಾರಕ್ಕೆ ಬಂದಿದ್ದರೆ ಖಂಡಿತವಾಗಿಯೂ ನಮ್ಮ ದೇಶದಲ್ಲಿ ಪರಿಸ್ಥಿತಿ ಈಗಿರುವುದಕ್ಕಿಂತ ಇನ್ನೂ ತೀವ್ರತರವಾದ ಅನ್ಯಾಯವಾಗುತ್ತಿತ್ತು, ಅಷ್ಟೇ ಮಾತ್ರವಲ್ಲ ಫ್ಯಾಸಿಸಂನ ಕರಾಳ ಸ್ವರೂಪ ಬರುತ್ತಿತ್ತು. ಅಲ್ಲದೆ ಪ್ರತಿಗಾಮಿ ಶಕ್ತಿಗಳ ಕೈ ಮೇಲಾಗುತ್ತಿತ್ತು, ಈ ಪ್ರತಿಗಾಮಿ ಶಕ್ತಿಗಳ ಬೇರನ್ನು ಕಿತ್ತು ಹಾಕಲಿಕ್ಕಾಗಿ ಈ ದಿನ ತುರ್ತುಪರಿಸ್ಥಿತಿ ಬಂದಿದೆ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಬೇರೆ ಬೇರೆ ವಿಷಯಗಳನ್ನು ನಮ್ಮ ಸ್ನೇಹಿತರು ಹೇಳಿದ್ದಾರೆ. ತುರ್ತುಪರಿಸ್ಥಿತಿ ಬಂದಮೇಲೆ ಏನಾಗಿದೆ ಎಂಬುದನ್ನು ಪರಿಶೀಲಿಸಬೇಕಾಗಿದೆ. ತುರ್ತು ಪರಿಸ್ಥಿತಿ ಬರುವುದಕ್ಕೆ ಮುಂಚೆ ನಮ್ಮ ದೇಶದಲ್ಲಿ ಅಂತರಿಕವಾಗಿ ಕೆಲವು ಪಟ್ಟಭದ್ರಹಿತಾಸಕ್ತಿಗಳು ಕೋಮುವಾರು ಹಿತಾಸಕ್ತಿಗಳು ಪ್ರತಿಗಾಮಿ ಮತ್ತು ಗುತ್ತೇದಾರಿ ಶಕ್ತಿಗಳು ಬಂಡವಾಳಗಾರರು ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಇವರೆಲ್ಲರೂ ಏನು ಒಂದು ಪಿತೂರಿ ನಡೆಸಬೇಕೆಂದು ಪ್ರಯತ್ನಪಟ್ಟರು, ಈ ಪಿತೂರಿ ಸಫಲವಾಗಲಿಲ್ಲ, ಅದು ಸಂತೋಷದ ವಿಷಯ. ಆದರೂ ಬೇರು ಸಹಿತ ಕಿತ್ತು ಹಾಕುವುದಕ್ಕೆ ಸಾಧ್ಯವಾಗಿದೆಯೇ; ಇವರ ಚಟುವಟಿಕೆಗಳು ನಿಂತು ಹೋಗಿದೆಯೇ; ಇವರಿಂದ ಇನ್ನೂ ಅಪಾಯ ಇದೆಯೇ ಎಂದು ಪ್ರಶ್ನೆ ಹಾಕಿದರೆ ನಮಗೆ ಅನಿಸುತ್ತದೆ, ಇನ್ನೂ ಆಳವಾಗಿ ಇದೆ ಎಂದು. ಇದನ್ನು ನಾನು ಬಹಳ ಕಳಕಳಿಯಿಂದ ಹೇಳಬೇಕಾಗಿದೆ. ಅನೇಕ ಜನ ಆ ಅಪಾಯವನ್ನು ಇನ್ನೂ ಅರಿತುಕೊಂಡಿಲ್ಲ, ನಾನು ಯಾರ ಮೇಲೆ ನಿಂದನೆ ಮಾಡಿ ಹೇಳುತ್ತಿಲ್ಲ. ಆ ಪರಿಸ್ಥಿತಿಯನ್ನು ಇನ್ನೂ ಆಳವಾಗಿ ಅಭ್ಯಾಸ ಮಾಡಿ ಗಂಡಾಂತರವನ್ನು ಅರಿತುಕೊಂಡಿಲ್ಲ ಎಂದು ನನ್ನ ಅಭಿಪ್ರಾಯ. ಮೊದಲನೆಯದಾಗಿ ಕೆಲವರನ್ನು ಬಂಧನ ಮಾಡಿದ್ದಾರೆ, ಬಂಧನ ಮಾಡಿದ ಮೇಲೆ ಏನಾಗಿದೆ, ಜನಸಂಘ ಮತ್ತು ಆರ್. ಎಸ್. ಎಸ್. ಸ್ನೇಹಿತರು ಭೂಗತವಾಗಿದ್ದಾರೆ. ಅವರೆ, ಅವರ ಪತ್ರಿಕೆಗಳು, ಬರುತ್ತಿವೆ. ಪ್ರಚಾರ ಕೂಡ ನಡೆಸುತ್ತಿದ್ದಾರೆ. ಪೂರ್ತಿಯಾಗಿ ಅವರ ಚಟುವಟಿಕೆಗಳು ನಿಂತಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನೂ ಕೆಲವೆಡೆ ವಿಧ್ವಂಸಕ ಕೃತ್ಯಗಳ ನಡೆದಿವೆ ಎನ್ನುವುದರ ಬಗ್ಗೆ ವರದಿಗಳು ಬಂದಿವೆ. ಮೊನ್ನೆ ಬೆಂಗಳೂರಿನಲ್ಲಿ ರೈಲ್ವೆ ಸೇತುವೆಯ ಕೆಳಗೆ ಡೈನಾಮೆಂಟ್, ಇಟ್ಟಿದ್ದರು, ಮುಖ್ಯಮಂತ್ರಿಗಳ ಮನೆ ಪಕ್ಕದಲ್ಲಿ ಅಂದರೆ ರೈಲ್ವೆ ಲೈನಿನ ಹತ್ತಿರ ಡೈನಾಮೆಂಟ್ ಇಟ್ಟಿದ್ದರು.

ಆದ್ದರಿಂದ ವಿಧ್ವಂಸಕ ಕಾರ್ಯಕ್ರಮಕ್ಕೆ ತೊಡಗಿ ನಷ್ಟ ಮಾಡಬೇಕೆಂದು ಇದ್ದಾರೆ. ಅವರು ಬಹಿರಂಗವಾಗಿ ಮಾಡುವ ಬದಲು ಅಂತರಂಗವಾಗಿ ಕೆಲಸ ,ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಅದನ್ನು ಮರೆಯುವ ಹಾಗೆ ಇಲ್ಲ. ಈ ದಿವಸ ಅವರ ಪ್ರಚಾರ ನೋಡಿದರೆ, ಅವರ ಸಾಧನೆ ನೋಡಿದರೆ ಹಲವಾರು ರೀತಿ ನಡೆಯುತ್ತಾ ಇದೆ. ಒಂದು ಕಡೆ ಪತ್ರಿಕೆಗಳ ಮೂಲಕ ನಡೆಯುತ್ತಿದೆ, ಇನ್ನೊಂದು ಕಡೆ ಆಂತರಂಗಿಕವಾಗಿ ನಡೆಯುತ್ತಿದೆ. ಮತ್ತೊಂದು ಕಡೆ ನೋಡಿದರೆ ವಿದ್ಯಾರ್ಥಿಗಳ ಮಧ್ಯೆ, ಮೇಷ್ಟರುಗಳ ಮಧ್ಯೆ, ಹೆಚ್ಚಿನ ರೀತಿಯಲ್ಲಿ ಅವರು ಪ್ರಚಾರ ಮಾಡುತ್ತಿದ್ದಾರೆ. ನಾನು ಬೆಂಗಳೂರಿನಲ್ಲಿರುವುದರಿಂದ ಇದು ನನ್ನ ಅನುಭವಕ್ಕೆ ಬಂದಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ಧೋರಣೆಗೆ ಅಂತರಂಗವಾಗಿ ಇರತಕ್ಕಂಥಾ ಪ್ರತಿಗಾಮಿಗಳು ಸಹಾಯ ಮಾಡುತ್ತಿದ್ದಾರೆ, ಅಷ್ಟೇ ಅಲ್ಲ ಇದಕ್ಕೆ ಅಂತರರಾಷ್ಟ್ರೀಯ ಬೆಂಬಲವೂ ಕೂಡ ಇದೆ ಎಂದು ಹೇಳಬೇಕಾಗಿದೆ. ಏತಕ್ಕೆಂದರೆ ನಮ್ಮ ದೇಶದಲ್ಲಿರತಕ್ಕಂಥ ವಿದ್ಯಮಾನಗಳನ್ನು ನೋಡಿದರೆ ಅಮೇರಿಕಾ ದೇಶದ ಸಾಮ್ರಾಜ್ಯವಾದಿಗಳು ಮತ್ತು ಚೈನಾ ದೇಶದ ಮಾವೋವಾದಿಗಳು ಈ ಇಬ್ಬರೂ ಸೇರಿ ನಮ್ಮ ದೇಶದ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಲ್ಲಿರತಕ್ಕಂಥಾ ಪ್ರಜಾಪ್ರಭುತ್ವವನ್ನು ಪಾರ್ಲಿಮೆಂಟ್ ಪ್ರಜಾಪ್ರಭುತ್ವವನ್ನು ಕಿತ್ತುಹಾಕುವುದಕ್ಕೆ ಅವರು ತಮ್ಮ ಪ್ರಭಾವವನ್ನು ಬೀರಿ ತಮ್ಮ ಕಡೆ ನಮ್ಮ ದೇಶವನ್ನು ಒಲಿಸಿಕೊಳ್ಳಲು ಯತ್ನಿಸುತ್ತಿದ್ದಾರೆ ಇದು ಸ್ಪಷ್ಟ. ಅಮೇರಿಕನ್ ಸಾಮ್ರಾಜ್ಯವಾದಿಗಳ ಪ್ರಚಾರ ಈ ಹೊತ್ತು ಪತ್ರಿಕೆಗಳಲ್ಲಿ ಏನು ಬರುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ರೀತಿಯಾದಂಥ ಹೇಯ ಪ್ರಚಾರವನ್ನು ಅವರು ಮಾಡುತ್ತಿದ್ದಾರೆ. ಈ ಬಗ್ಗೆ

ಪ್ರಧಾನಿಯವರು ಮೇಲಿಂದ ಮೇಲೆ ಮಾತನಾಡುತ್ತಿದ್ದಾರೆ. ಇದಲ್ಲದೆ ಇನ್ನೂ ಒಂದು ವಿಚಾರ ಏನೆಂದರೆ ನಮ್ಮ ದೇಶದ 1500 ಮೈಲಿಯಿಂದಾಚೆ ಡಿಯಾಗೋಗಾರ್ಸಿಯಾ ದ್ವೀಪದಲ್ಲಿ ಐರ್ಲೆಂಡ್‌ನಲ್ಲಿ ಒಂದು ಯುದ್ಧದ ನೆಲೆಯನ್ನೇ ಸ್ಥಾಪನೆ ಮಾಡಿದ್ದಾರೆ. ಈ ಅಣುಶಸ್ತ್ರವನ್ನಿಟ್ಟುಕೊಂಡು ಅಲ್ಲಿಂದ ನಮ್ಮ ದೇಶಕ್ಕೆ ಹೆದರಿಕೆ ಉಂಟು ಮಾಡುತ್ತಿದ್ದಾರೆ. ಇಷ್ಟೇ ಅಲ್ಲ ಅಮೇರಿಕಾ ದೇಶದವರು ಪಾಕಿಸ್ತಾನಕ್ಕೆ ತನ್ನ ಶಸ್ತ್ರಾಸ್ತ್ರಗಳನ್ನು ಪೂರ್ತಿಯಾಗಿ ಒದಗಿಸುವುದಕ್ಕೆ ಸಹಾಯ ಮಾಡುತ್ತಿದ್ದಾರೆ. ಗಲ್ಫ್ ಕ್ಷೇತ್ರಗಳಿಗೆ ಶಸ್ತ್ರಾಸ್ತ್ರಗಳನ್ನು ಸಹಾಯ ಮಾಡುತ್ತಿದ್ದಾರೆ. ಅಲ್ಲದೆ ಚೈನಾ ದೇಶದ ಮಾವೋ ಕುಂಗ ಸರ್ಕಾರ ಗಡಿಯಲ್ಲಿ ನಮ್ಮವರನ್ನು 4 ಜನರನ್ನು ಕೊಂದು ಹಾಕಿದರು. ಈ ರೀತಿಯಾಗಿ ಅವರು ಪ್ರಚೋದನೆ ಮಾಡುತ್ತಿದ್ದಾರೆ. ಇಷ್ಟೇ ಅಲ್ಲದೆ ಈ ಪ್ರತಿಗಾಮಿ ಶಕ್ತಿಗಳು ಬಾಂಗ್ಲಾ ದೇಶದಲ್ಲಿ ಅಲ್ಲಿ ಪ್ರಧಾನಿಯಾಗಿದ್ದಂಥಾ ಷೇಖ್ ಮುಜೀಬುರ್ ರಹಮಾನ್, ಅವರ ಪತ್ನಿ ಮತ್ತು ಮಕ್ಕಳ ಮತ್ತು ಅವರ ಸಂಬಂಧಿಕರ ಅವರ ಜೊತೆಯಲ್ಲಿ ಹೋರಾಟ ನಡೆಸಿದ್ದವರ ಸಂಬಂಧಿಕರೆಲ್ಲರನ್ನೂ ಕೊಲೆ ಮಾಡಿದರು. ಈ ರೀತಿಯಾಗಿ ನಮ್ಮ ದೇಶವನ್ನು ಈ ಪ್ರತಿಗಾಮಿ ಶಕ್ತಿಗಳು ಸುತ್ತುಗಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಪ್ರತಿಗಾಮಿ ಶಕ್ತಿಗಳು ಸುತ್ತಲೂ ಸಹ ತಮ್ಮ ಒಳಕ್ಕೆ ಹಾಕಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಹಾಗೆಯೇ ಶ್ರೀಲಂಕಾದಲ್ಲೂ ಕೂಡ ಇಂಥಾ ಪರಿಸ್ಥಿತಿ ಬಂದಿದೆ. ಅಲ್ಲೂ ಕೂಡ ಈ ರೀತಿ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ದೇಶವನ್ನು ಸುತ್ತುಗಟ್ಟಿಕೊಂಡು ಎಲ್ಲರನ್ನು ತನ್ನೊಳಗೆ ತಮ್ಮ ಪ್ರಭಾವದಲ್ಲಿ ಹಾಕಿಕೊಳ್ಳುವುದಕ್ಕೆ ಪ್ರತಿಗಾಮಿ ಶಕ್ತಿಗಳು ತಮ್ಮ ಶಕ್ತಿಯನ್ನು ಉಪಯೋಗಿಸುತ್ತಿದ್ದಾರೆ ಆದ್ದರಿಂದ ನಮಗೆ ಇನ್ನೂ ಅಪಾಯ ಪೂರ್ತಿ ಮುಗಿದಿಲ್ಲ, ಅದನ್ನು ನಾವು ಎದುರಿಸಬೇಕಾಗಿದೆ. ಆ ಒಂದು ಜವಾಬ್ದಾರಿ ಎಲ್ಲರ ಕರ್ತವ್ಯವಾಗಿದೆ ಮೇಲಾಗಿ ಕಾಂಗ್ರೆಸ್ಸಿನವರ ಮೇಲೆ ಇದೆ.

ಇನ್ನು ಎರಡು ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ಯಾವುದೆಂದರೆ 20 ಅಂಶದ ಕಾರ್ಯಕ್ರಮದ ಬಗ್ಗೆ ರಾಜ್ಯಪಾಲರು ಏನು ಹೇಳಿದ್ದಾರೆ ಎಂದರೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಈ 20 ಅಂಶದ ಕಾರ್ಯಕ್ರಮ ಅಳವಡಿಸಿಕೊಳ್ಳುವುದಕ್ಕೆ ಅನುಕೂಲವಾಗಿದೆ ಎಂದು ಹೇಳಿದ್ದಾರೆ. ನಿಜವಾಗಿಯೂ ಇದು ನಮ್ಮ ದೇಶದ ಮೂಲಭೂತವಾದ ಬದಲಾವಣೆಗೆ ಅನುಕೂಲವಾದ ಕಾರ್ಯಕ್ರಮವಾಗಿದೆ ಎಂದು ಹೇಳಿದರೆ ಅದನ್ನು ನಾನು ಒಪ್ಪಿಕೊಳ್ಳುವುದಕಾಗುವುದಿಲ್ಲ. ಇನ್ನೂ ಇದರ ಬಗ್ಗೆ ಬದಲಾವಣೆಯಾಗಬೇಕಾದ್ದು ಇದೆ. ಅದನ್ನು ನಮ್ಮ ಪಕ್ಷದವರು ಹೇಳುತ್ತಿದ್ದಾರೆ. ಇದು ನನ್ನ ಒಬ್ಬನ ಅಭಿಪ್ರಾಯವಲ್ಲ. ನಮ್ಮ ದೇಶದ ಜನತೆಗೆ ಅದರಲ್ಲಿ ಸಾಮಾನ್ಯ ಜನರಿಗೆ, ಕೃಷಿ ಕಾರ್ಮಿಕರಿಗೆ, ಮಧ್ಯಮ ವರ್ಗದವರಿಗೆ ಹಾಕಿಕೊಂಡಿರತಕ್ಕಂಥಾ ಕಾರ್ಯಕ್ರಮ ಇದು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಇದು ಕಾರ್ಯಗತವಾಗುವುದರೊಳಗೆ ಕೆಲವು ಅಪಾಯ ಚಿಹ್ನೆಗಳು ಕಂಡುಬರುತ್ತವೆ. ಮೊದಲನೆಯದಾಗಿ ಹೇಳಬೇಕಾದರೆ ನಮ್ಮ ದೇಶದಲ್ಲಿ "ಆ ಇಜಂ, ಈ ಇಜಂ" ಎಂದು ಏನು ಮಾತನಾಡುತ್ತಿದ್ದಾರೆ ಅದು ಬೇಡ ಎಡ ಅಥವ ಬಲ ಎಂಬ ವಾದಕ್ಕೆ ಎಡೆಕೊಡಕೂಡದೆ ಎಲ್ಲರೂ ಸೇರಿ ಕೆಲಸ ಮಾಡಿಕೊಂಡು ಹೋಗಬೇಕು" ಎನ್ನುತ್ತಿದ್ದಾರೆ. ನಾನು ಶ್ರೀ ಮಾನ್ ಸಂಜಯಗಾಂಧಿಯವರನ್ನು ವೈಯಕ್ತಿಕವಾಗಿ ಟೀಕೆ ಮಾಡುತ್ತಿಲ್ಲ. ಅವರು ಯುವಕ ಕಾಂಗ್ರೆಸ್ಸಿಗೆ ಸೇರಿದವರು. ಆದರೆ ಅವರ ವಾದ ಸರಣಿ ಏನು ಇದೆ ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ತೆಗೆದುಕೊಂಡರೆ ಹಿಂದೆ ಹಿಟ್ಲರ್ ಯಾವ ರೀತಿ ಬಂದಿದ್ದ ನೋಡಿ, ಅಧಿಕಾರಕ್ಕೆ ಬಂದದ್ದನ್ನು ನೋಡಿದಲ್ಲಿ, ಮುಸ್ಸೋಲಿನಿಗೆ ಯಾವ ರೀತಿ ಅಧಿಕಾರ ಬಂದದ್ದು ಎಂಬುದನ್ನು ವಿಚಾರ ಮಾಡಿದ್ದಲ್ಲಿ ಯಾರು "ಎಡವೂ ಬೇಡ ಬಲವೂ ಬೇಡ" ಎಂದು ಹೇಳಿದರೋ ಅವರೆಲ್ಲರೂ ದೇಶವನ್ನು ಬಲಕ್ಕೆ ಕೊಂಡೊಯ್ಯಲು ಸಹಾಯ ಮಾಡಿದರು ಆದುದರಿಂದ ಈ ವಾದ ಪ್ರತಿಗಾಮಿಗಳಿಗೆ ಮಾತ್ರ ಅನುಕೂಲವಾಗುತ್ತದೆ.

ಅಧ್ಯಕ್ಷರು.— ದಯವಿಟ್ಟು ತಾವು ಬೇಗನೆ ಮುಗಿಸಿ, ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ ನನ್ನ ಅಭಿಪ್ರಾಯದಲ್ಲಿ ಈ 20 ಅಂಶದ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ ಇದನ್ನು ಜಾರಿಗೆ ತರುವಾಗ ಜನತಾ ಪ್ರತಿನಿಧಿಗಳ ಸಮಿತಿಗಳನ್ನು ರಚಿಸಿ ಮಾಡಿ ಅವರ ಮೂಲಕ ಈ 20 ಅಂಶದ ಕಾರ್ಯಕ್ರಮವನ್ನು ಜಾರಿಗೊಳಿಸಬೇಕು ಎಂದು ಹೇಳುತ್ತೇನೆ. ಅದರಲ್ಲಿ ಯಾರು ಯಾರು ಈ ಪಾರ್ಲಿಮೆಂಟರಿ ಸಿಸ್ಟಂ ಬೆಳೆಯಬೇಕು ಎಂದು ಹೇಳುತ್ತಾರೋ ಮತ್ತು ಅವರಲ್ಲಿ ಯಾರು ಯಾರು ಈ ಪಾರ್ಲಿಮೆಂಟರಿ ಪದ್ಧತಿಯನ್ನು ನಂಬುತ್ತಾರೋ ಅವರನ್ನೊಳಗೊಂಡಂತ ಸಮುದಾಯಿಕ ಸಂಘಟನೆಗಳೂ ಪ್ರತಿನಿಧಿಗಳನ್ನೊಂಡ ಸಮಿತಿಗಳನ್ನು ರಚಿಸಿ ಈ 20 ಅಂಶದ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಇದರಲ್ಲಿ ನಾವು ಖಂಡಿತವಾಗಿಯೂ ಬೆಂಬಲ ನೀಡಬೇಕಾಗಿದೆ ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡ್ಗಿ (ಬೈಂದೂರ್).—ಮಾನ್ಯ ಅಧ್ಯಕ್ಷರೇ ನೂತನ ರಾಜ್ಯಪಾಲರು ಈ ಸದನದಲ್ಲಿ ಮಾಡಿದ ಭಾಷಣದ ಮೇಲೆ ವಂದನಾರ್ಪಣಾ ನಿರ್ಣಯವನ್ನು ಶ್ರೀ ಮಾನ್ ಕೆ. ಪುಟ್ಟಸ್ವಾಮಿಯವರು ಮಂಡಿಸಿದ ವಿಚಾರದಲ್ಲಿ ನಾನೂ ಕೂಡ ಅದಕ್ಕೆ ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನಾಡುವುದಕ್ಕೆ ಇಚ್ಛೆ ಪಡುತ್ತೇನೆ.

ಈಹೊತ್ತು, ರಾಷ್ಟ್ರದ ನಾಯಕಿಯಾದಂಥ ಇಂದಿರಾಗಾಂಧಿಯವರು ಕೈಗೊಂಡಂಥ ತುರ್ತು ಪರಿಸ್ಥಿತಿಯಿಂದ ಈ ದೇಶಕ್ಕೆ ಅದೊಂದು ವರದಾನ ಅಂತ ನಾವು ಖಚಿತವಾಗಿ ಭಾವಿಸಬೇಕಾಗಿದೆ. 27 ವರ್ಷಗಳಲ್ಲಿ ಸುಧಾರಿಸಲಿಕ್ಕೆ ಸಾಧ್ಯವಾಗದಂಥ ಸಮಸ್ಯೆಗಳನ್ನು ಕೇವಲ 27 ದಿನಗಳಲ್ಲಿ ಈ ದೇಶದಲ್ಲಿ ಅದನ್ನು ಸುಧಾರಿಸಲಿಕ್ಕೆ ಸಾಧ್ಯವಾಗಿದೆ. ಈಗ ನೋಡಿದರೆ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡುತ್ತಿದ್ದಾರೆ, ಗೊಂದಲವಾತಾವರಣವೆಲ್ಲಾ ನಿವಾರಣೆಯಾಗಿದೆ. ಮತ್ತು ಕೈಗಾರಿಕಾ ರಂಗದಲ್ಲಿ ನೋಡಿದರೆ ಮೊದಲಿಗಿಂತ ಉತ್ಪಾದನೆ ಹೆಚ್ಚಳವಾಗಿದೆ. ಮತ್ತು ದೇಶದಲ್ಲಿರುವ ಪ್ರಜೆಗಳನ್ನು ನೋಡಿದರೆ ಪ್ರಜೆಗಳು ಶಾಂತಿಯುತವಾಗಿ ಹೆಚ್ಚು ಸುಖ ಸಂತೋಷದಿಂದ ಬಾಳುತ್ತಿದ್ದಾರೆ. ಮತ್ತು ಬೆಲೆಗಳನ್ನು ನೋಡಿದರೆ ಗಣನೀಯವಾಗಿ ಇಳಿಮುಖವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯಪಾಲರು ನಮ್ಮ ಕರ್ನಾಟಕದ ಪ್ರಗತಿಯನ್ನು ಪ್ರಶಂಸೆ ಮಾಡಿದ್ದಾರೆ. ಅದಕ್ಕೆ ನಾವು ಕೂಡ ಹೆಮ್ಮೆ ಪಡಬೇಕಾದಂಥ ವಿಚಾರ. ಬಹುಶ: ನಮ್ಮ ವಿರೋಧಪಕ್ಷದ ಅನೇಕ ಮಂದಿ ಮಾತನಾಡುವಾಗ ತುರ್ತು ಪರಿಸ್ಥಿತಿ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದರೂ ಕೂಡ ವೈಯುಕ್ತಿಕವಾಗಿ ಹೊರಗಡೆ ಮಾತನಾಡುವಾಗ ಅನೇಕ ಮಂದಿ ಸ್ನೇಹಿತರು ಹೇಳಿದರು ಇದು ಒಂದು ವರದಾನ ಎಂದು. ಅಲ್ಲದೆ ಈ ತುರ್ತು ಪರಿಸ್ಥಿತಿ ಒಂದು ಪವಿತ್ರವಾದ ಕಾರ್ಯವೆಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇದು ನಾವೆಲ್ಲಾ ಸಂತೋಷ ಪಡಬೇಕಾದಂಥಾ ವಿಚಾರ, ನಮ್ಮ ರಾಷ್ಟ್ರದ ಪ್ರಗತಿಗೆ ಹೆಚ್ಚು ಪೂರಕವಾದಂಥಾದ್ದನ್ನು ಒಪ್ಪಿಕೊಳ್ಳುವಂಥಾ ವಿಚಾರ ಎಂದು ನಾನಾದರೂ ತಿಳಿದುಕೊಂಡಿದ್ದೇನೆ.

ಇನ್ನು 20 ಅಂಶದ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದಕ್ಕೆ ಹೊಸ ಆರ್ಥಿಕ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಇದು ಸರಿಯಾದಂಥ ಅವಕಾಶವಾಗಿದೆ. ಅಲ್ಲದೆ ಇದರಿಂದ ದೇಶದಲ್ಲಿ ಹೆಚ್ಚು ಹೆಚ್ಚು ಪ್ರಗತಿಯಾಗಿ, ಪ್ರಯೋಜನಕಾರಿಯಾಗಿ ಈ ಧೋರಣೆಯನ್ನು ಕಾರ್ಯಗತಗೊಳಿಸುವುದಕ್ಕೆ ಅಸ್ಪದವಾಗಿದೆ. ಇದನ್ನು ನಾವು ಒಪ್ಪಿಕೊಳ್ಳಬೇಕೆಂದು ನನ್ನ ಖಚಿತ ಅಭಿಪ್ರಾಯವಾಗಿದೆ.

ಇಂದು ಈ 20 ಅಂಶದ ಕಾರ್ಯಕ್ರಮದ ಅಂಗವಾಗಿ ಬೆಲೆಗಳನ್ನು ಹತೋಟಿ ಮಾಡುವುದು ಬಹಳ ಪ್ರಾಮುಖ್ಯವಾದ ವಿಚಾರವಾಗಿದೆ. ಈ ವಿಷಯದಲ್ಲಿ ನಮ್ಮ ಕರ್ನಾಟಕ ಸರ್ಕಾರ ಕೂಡ ಸೂಕ್ತವಾದ ಕಾರ್ಯಕ್ರಮ ಕೈಕೊಂಡಿದೆ. ಲೆವಿ ಭತ್ತ ಮೂಲಕ ಮತ್ತು ಇನ್ನಿತರ ಧಾನ್ಯಗಳನ್ನು ಸರ್ಕಾರದವರು ರೈತರಿಂದ ಖರೀದಿ ಮಾಡುವುದರ ಮೂಲಕ, ಅವುಗಳನ್ನು ಜನಸಾಮಾನ್ಯರಿಗೆ ಯೋಗ್ಯ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಏರ್ಪಾಡು ಮಾಡಿದ್ದಾರೆ. ಇಲ್ಲಿ ನಾವು ಒಂದು ವಿಚಾರವನ್ನು ಗಮನಿಸಬೇಕಾಗಿದೆ ; ಏನೆಂದರೆ ಇವೊತ್ತು ಸ್ಟೇಟ್ ಮಾರ್ಕೆಟಿಂಗ್ ಫೆಡ

ರೇಷನ್ ಅವರು ಕೆಲವು ಕಡೆಗಳಲ್ಲಿ ಭತ್ತವನ್ನು ಖರೀದಿ ಮಾಡಿದ್ದಾರೆ. ಭತ್ತ ಖರೀದಿ ಮಾಡಲು ಫುಡ್ ಕಾರ್ಪೊರೇಷನ್ ಇರುವಾಗ ಅವರು ಖರೀದಿ ಮಾಡುವ ಅಗತ್ಯವಾದರೂ ಏನಿತ್ತು ? ಈ ರೀತಿ ಖರೀದಿ ಮಾಡಿದ ಭತ್ತವನ್ನು ಅಂದರೆ 5 ಸಾವಿರ ಕ್ವಿಂಟಾಲ್ ಬತ್ತವನ್ನು ಶಿವಮೊಗ್ಗದಲ್ಲಿ ಹರಾಜಿನ ಮೂಲಕ ಮಾರಾಟ ಮಾಡಿದ್ದಾರೆ. ಇಂದು ಶಿವಮೊಗ್ಗದಲ್ಲಿ ಭತ್ತದ ಬೆಲೆ ಕ್ವಿಂಟಾಲ್ ಒಂದಕ್ಕೆ 105 ರಿಂದ 110 ರವರೆಗೆ ಮಾರುಕಟ್ಟೆಯಲ್ಲಿದ್ದರೆ ಹರಾಜು ಮೂಲಕ ಒಬ್ಬ ವ್ಯಾಪಾರಿ ಕ್ವಿಂಟಾಲ್ ಒಂದಕ್ಕೆ 158 ರೂಪಾಯಿಗಳ ಪ್ರಕಾರ ಪಡೆದುಕೊಳ್ಳಬೇಕಾದರೆ, ಅದಕ್ಕಿರುವ ಕಾರಣವಾದರೂ ಏನು ಎಂಬುದನ್ನು ನಾವು ಪರಿಶೀಲಿಸಬೇಕಾಗಿದೆ. ಈ ವಿಚಾರದಲ್ಲಿ ನಾನು ಈಗ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ; ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಬೆಲೆಗೆ ಭತ್ತವನ್ನು ಕೊಂಡುಕೊಳ್ಳುದರ ಅರ್ಥವಾದರೂ ಏನು ? ಇದಕ್ಕೆ ಸರ್ಕಾರದವರು ಉತ್ತರ ಕೊಡಬೇಕು.

3-00 P. M.

ಇನ್ನು ಇಪ್ಪತ್ತು ಅಂಶಗಳ ಕಾರ್ಯಕ್ರಮಗಳ ಪೈಕಿ ಭೂಸುಧಾರಣೆಯೂ ಒಂದು ; ಇಂದು ಎಲ್ಲ ಗೇಣಿದಾರರೂ ಅರ್ಜಿಗಳನ್ನು ಕೊಟ್ಟಿದ್ದಾರೆ. ಭೂಸುಧಾರಣೆಯ ವಿಷಯದಲ್ಲಿ ಸರ್ಕಾರದವರು ಏನಾದರು ಯಶಸ್ಸನ್ನು ಸಾಧಿಸಬೇಕೆಂದಿದ್ದರೆ ಬಹುಶಃ ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲು ಯಶಸ್ಸನ್ನು ಸಾಧಿಸಬೇಕಾಗುತ್ತದೆ. ಏಕೆಂದರೆ ಇಡೀ ರಾಜ್ಯದಲ್ಲಿ 4.8 ಲಕ್ಷಕ್ಕಿಂತ ಹೆಚ್ಚು ಗೇಣಿದಾರರು ಒಡೆತನದ ಹಕ್ಕುಗಳ ಬಗ್ಗೆ ಅರ್ಜಿಗಳನ್ನು ಸಲ್ಲಿಸಿದ್ದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲಿಯೇ 1.8 ಲಕ್ಷ ಅರ್ಜಿಗಳನ್ನು ಅಲ್ಲಿಯ ಗೇಣಿದಾರರು ಸಲ್ಲಿಸಿದ್ದಾರೆ. ಆದಕಾರಣ ಸರ್ಕಾರದವರು ಈ ಜಿಲ್ಲೆಯಲ್ಲಿ ಮೊದಲು ಯಶಸ್ಸನ್ನು ಸಾಧಿಸಿದರೆ ಇಡೀ ಕರ್ನಾಟಕ ರಾಜ್ಯದಲ್ಲಿಯೇ ಯಶಸ್ಸನ್ನು ಸಾಧಿಸಿದಂತೆ ಆಗುತ್ತದೆ. ಇದನ್ನು ಯಶಸ್ವಿಯಾಗಿ ಜಾರಿಗೆ ತರುವುದಕ್ಕೆ ಅನೇಕ ರೀತಿಯ ಅಡ್ಡಿ ಆತಂಕಗಳಿವೆ. ಜಾಸ್ತಿ ಅರ್ಜಿಗಳು ಇರುವ ಕಡೆಗಳಲ್ಲಿ ಜಾಗ್ರತೆ ವಿಲೇವಾರಿ ಮಾಡಲು ಅನುಕೂಲವಾಗುವಂತೆ ಹೊಸ ನ್ಯಾಯಮಂಡಲಿಗಳನ್ನು ಸರ್ಕಾರದವರು ರಚನೆ ಮಾಡಿದ್ದಾರೆ. ಆದರೆ ಅಲ್ಲಿಗೆ ಸಿಬ್ಬಂದಿಯನ್ನು ಇನ್ನೂ ನೇಮಕ ಮಾಡಿಲ್ಲ ; ಮಾನ್ಯ ಕಂದಾಯ ಮಂತ್ರಿಗಳು ಇದರ ಕಡೆಗೆ ಹೆಚ್ಚಿನ ಗಮನ ಕೊಟ್ಟು ಶೀಘ್ರದಲ್ಲಿಯೇ ಸಿಬ್ಬಂದಿಯನ್ನು ನೇಮಕ ಮಾಡುವುದರ ಮೂಲಕ ಅವು ಜಾಗ್ರತೆ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಜೊತೆಗೆ ಸರ್ಕಾರದವರು ತಮ್ಮಲ್ಲಿರುವ ಬಂಜರು ಭೂಮಿಯನ್ನು ಮತ್ತು ಹೆಚ್ಚುವರಿ ಭೂಮಿಯನ್ನು ಭೂರಹಿತರಿಗೆ ಕೊಡುವ ವಿಚಾರದಲ್ಲಿ ಸೂಕ್ತವಾದ ಕಾರ್ಯಕ್ರಮ ಕೈಕೊಂಡಿರುವುದು ಸಹ ಸಂತೋಷದ ವಿಚಾರವಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಜನರು ದರಖಾಸ್ತು ಅರ್ಜಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದರೆ ಈ ವಿಚಾರದಲ್ಲಿ ಮೊನ್ನೆ ಸರ್ಕಾರದಿಂದ ಬಂದಿರತಕ್ಕಂಥ ಒಂದು ಅಧ್ಯಾದೇಶದ ಪ್ರಕಾರ ದರಖಾಸ್ತು ಅರ್ಜಿಗಳನ್ನು ಹಾಕಿರುವವರಿಗೆ ಬಹಳ ತೊಂದರೆಯುಂಟಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಆ ಒಂದು ಆಜ್ಞೆ ಪ್ರಕಾರ ಯಾರು ಸರ್ಕಾರೀ ಭೂಮಿಯನ್ನು ಆಕ್ರಮಣ ಮಾಡಿ ಕೊಂಡಿದ್ದಾರೆ, ಅದು ಅವರಿಗೆ ಸಿಂಧುವಾಗುವುದಿಲ್ಲ. ಇದನ್ನು ಸರ್ಕಾರದವರು ಪುನರ್ ಪರಿಶೀಲನೆ ಮಾಡುವುದು ಅಗತ್ಯವಿದೆ, ಹಿಂದುಳಿದ ವರ್ಗದವರು ಮತ್ತು ದಲಿತ ವರ್ಗದವರು ಇಂತಹ ಸರ್ಕಾರೀ ಜಮೀನನ್ನು ಏನಾದರು ಆಕ್ರಮಣ ಮಾಡಿ ಕೆಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದರೆ, ಅಂತಹ ಜಮೀನನ್ನು ಅವರ ಹೆಸರಿಗೇ ಮಾಡಿಕೊಡುವುದು ಅಗತ್ಯವಿದೆ. ಅವರುಗಳು ಸರ್ಕಾರಕ್ಕೆ ಅನೇಕ ಸಲ ಅರ್ಜಿಗಳನ್ನು ಸಹ ಕೊಟ್ಟಿದ್ದಾರೆ. ಇಂತಹವರ ವಿಚಾರದಲ್ಲಿ ಸರ್ಕಾರದವರು ಕನಿಕರ ತೋರಿಸುವುದು ಅಗತ್ಯವಿದೆ. ಆದಕಾರಣ ಸರ್ಕಾರದವರು ಈಗಿನ ಆಜ್ಞೆಯನ್ನು ಪುನರ್ ಪರಿಶೀಲನೆ ಮಾಡುವುದು ಅಗತ್ಯವಿದೆ ಎಂದು ನಾನು ಭಾವಿಸಿದ್ದೇನೆ. ಮತ್ತೊಂದು ಮುಖ್ಯವಾದ ಅಂಶವೆಂದರೆ ಕೆಲವರು ದರಖಾಸ್ತು ಅರ್ಜಿಗಳನ್ನು ಕೊಟ್ಟು 8—10 ವರ್ಷಗಳಾಗಿದ್ದರೂ ಸಹ ಅವುಗಳು ಇನ್ನೂ ಇತ್ಯರ್ಥವಾಗಿಲ್ಲ; ಇದಕ್ಕೆ ಕಾರಣ ನನಗೆ ತಿಳಿದಂತೆ ಅವರು ಕೊಟ್ಟ ಅರ್ಜಿಗಳು ರೆವಿನ್ಯೂ ಇಲಾಖೆಗೆ ಹೋಗುತ್ತವೆ. ನಂತರ ಅರಣ್ಯ ಇಲಾಖೆಯವರು ಅವರು ಕೇಳಿರುವ ಜಮೀನಿನಲ್ಲಿ ಮರಗಳೇನಾದರು ಇದ್ದರೆ ಅವುಗಳನ್ನು ಕಡಿಯಬೇಕಾಗುತ್ತದೆ. ಆದರೆ ಮರಗಳನ್ನು ಕಡಿಯಲು ಆ ಇಲಾಖೆಯವರು ಅನೇಕ ವರ್ಷಗಳನ್ನು ತೆಗೆದುಕೊಂಡಂತಹ ಉದಾಹರಣೆಗಳಿವೆ. ಇದಕ್ಕೆ ಕಾರಣ

ಆ ಇಲಾಖೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸಿಬ್ಬಂದಿ ವರ್ಗ ಇಲ್ಲದಿರುವದು ; ದರಖಾಸ್ತು ಅರ್ಜಿಗಳು ಜಾಗ್ರತೆ ಇತ್ಯರ್ಥವಾಗುವಂತಾಗಲು ಈ ಇಲಾಖೆಗೆ ಸಾಕಷ್ಟು ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ನೇಮಕ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಬಡಜನರಿಗೆ ನಿವೇಶನ ಕೊಡುವ ವಿಚಾರದಲ್ಲಿ ಕೂಡ ನಾವು ಸಾಕಷ್ಟು ಪ್ರಗತಿ ಸಾಧಿಸಿದ್ದೇವೆಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. 7.1 ಲಕ್ಷ ಕುಟುಂಬಗಳ ಪೈಕಿ ಈಗಾಗಲೇ 5.1 ಲಕ್ಷ ಕುಟುಂಬಗಳಿಗೆ ನಿವೇಶನಗಳನ್ನು ಕೊಡಲಾಗಿವೆ ಎಂಬತಕ್ಕಂಥ ಅಂಶ ಇದರಿಂದ ನಮಗೆ ಕಂಡು ಬರುತ್ತದೆ. ಈ ರೀತಿ ನಿವೇಶನಗಳನ್ನು ಹಂಚುವುದರ ಜೊತೆಗೆ ಅದರ ಒಂದು ಸಂಪೂರ್ಣ ಹಕ್ಕನ್ನು ಸಹ ಅವರಿಗೆ ದೊರಕಿಸಿಕೊಡಬೇಕಾದ ಅವಶ್ಯಕತೆಯೂ ಸಹ ಇದೆ. ಅನೇಕ ಜನರಿಗೆ ನಿವೇಶನದ ಹಕ್ಕನ್ನು ಇನ್ನೂ ಕೊಟ್ಟಿಲ್ಲ ; ಜೊತೆಗೆ ಈಗ ಯಾರು ಯಾರಿಗೆ ನಿವೇಶನಗಳನ್ನು ಕೊಡಲಾಗಿದೆಯೋ, ಅವುಗಳನ್ನು ಸಮತಟ್ಟು ಮಾಡಿಲ್ಲ ; ಆ ಜಾಗವನ್ನು ಸಮಟ್ಟು ಮಾಡಲು ಸರ್ಕಾರದವರು ಒದಗಿಸಿರುವ ಹಣ ಬಹಳ ಕಡಿಮೆಯಾಗಿದೆ. ಅದನ್ನು ಜಾಸ್ತಿ ಮಾಡಿ ಕೂಡಲೇ ಸಮತಟ್ಟು ಮಾಡಿಸಿ ಅದರ ಒಂದು ಪ್ರಯೋಜನ ಅವರಿಗೂ ಸಿಗುವಂತೆ ಮಾಡಬೇಕು. ಇದರ ಜೊತೆಗೆ ನಾವು ಮನೆಗಳನ್ನು ಕಟ್ಟಿಸಿಕೊಡುವ ವಿಚಾರದಲ್ಲಿಯೂ ಸಹ ಸಾಕಷ್ಟು ಪ್ರಗತಿ ಸಾಧಿಸಿದ್ದೇವೆಂದು ಹೇಳಿದರೂ ಕೂಡ ಈ ವಿಚಾರದಲ್ಲಿ ನಾವು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಈಗ ಅನೇಕ ಕಡೆಗಳಲ್ಲಿ ಕೈಕೊಂಡಿರುವ ಗೃಹ ನಿರ್ಮಾಣ ಯೋಜನೆಯ ಕೆಲಸ ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ ; ಮುಖ್ಯವಾಗಿ ಆಯಾ ಸ್ಥಳದ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತಹ ಮನೆಗಳನ್ನು ಕಟ್ಟಿಸಬೇಕಾಗಿದೆ. ಮತ್ತು ಅದಕ್ಕೆ ತಕ್ಕಂತಹ ಎಸ್ಟಿಮೇಟ್‌ಗಳನ್ನು ತಯಾರು ಮಾಡಬೇಕಾಗುತ್ತದೆ. ಈಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮನೆಗಳನ್ನು ಕಟ್ಟಿಸಲು ಸರ್ಕಾರದವರು ಏನು ಹಣ ನಿಗದಿ ಮಾಡಿದ್ದಾರೆ, ಅದು ಬಹಳ ಕಡಿಮೆಯಾಗಿದೆ ಎಂದು ನಾವು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಆ ಭಾಗದಲ್ಲಿ ಮನೆ ಕಟ್ಟಿಸಲು ಸ್ವಲ್ಪ ಹೆಚ್ಚು ಹಣ ಬೇಕಾಗುತ್ತದೆ. ಸರ್ಕಾರದವರು ಈ ಬಗ್ಗೆ ಯೋಚನೆ ಮಾಡಿ ನಮ್ಮ ಜಿಲ್ಲೆಗೆ ಹೆಚ್ಚು ಹಣ ಒದಗಿಸಿಕೊಡುತ್ತಾರೆಂದು ನಾನು ಭಾವಿಸಿದ್ದೇನೆ.

ಇನ್ನು ಸಹಕಾರಿ ಕ್ಷೇತ್ರವನ್ನು ನಾವು ಹೆಚ್ಚು ಬಲಗೊಳಿಸುವ ಅವಶ್ಯಕತೆ ಇದೆ. ಅದಕ್ಕಾಗಿ ಸರ್ಕಾರದವರು ನಾನಾ ಕಾರ್ಯಕ್ರಮಗಳನ್ನು ಕೈಕೊಂಡಿರುವುದು ಸಂತೋಷಕರವಾದಂಥ ವಿಚಾರ. ಇಂದು ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಹ ದಿನಬಳಕೆ ವಸ್ತುಗಳನ್ನು ಸಹಕಾರಿ ಸಂಘಗಳ ಮೂಲಕ ವಿತರಣೆ ಮಾಡಬೇಕಾದಂಥ ಒಂದು ಸನ್ನಿವೇಶ ಬಂದಿದೆ. ಆದರೆ ಈ ಒಂದು ದಿಶೆಯಲ್ಲಿ ಸಹಕಾರಿ ಸಂಘಗಳು ತಮ್ಮ ಒಂದು ಪಾತ್ರವನ್ನು ಸಕ್ರಿಯವಾಗಿ ವಹಿಸುವುದಕ್ಕೆ ಕೆಲವು ಅಡೆತಡೆಗಳಿವೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಮುಖ್ಯವಾಗಿ ಸಹಕಾರೀ ಸಂಘಗಳ ಮೂಲಕ ಜನಸಾಮಾನ್ಯರಿಗೆ ವಿತರಣೆ ಮಾಡುವಂತಹ ವಸ್ತುಗಳಿಗೆ ತೆರಿಗೆಯಿಂದ ವಿನಾಯಿತಿ ಕೊಡಬೇಕು. ಇಲ್ಲದಿದ್ದರೆ ಅವುಗಳು ಖಾಸಗೀ ವ್ಯಾಪಾರಿಗಳ ಜೊತೆಯಲ್ಲಿ ಪೈಪೋಟಿಯಿಂದ ವ್ಯಾಪಾರ ಮಾಡುವುದು ಕಷ್ಟವಾಗುತ್ತದೆ. ಆದಕಾರಣ ತೆರಿಗೆ ವಿನಾಯಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ನೀರಾವರೀ ವಿಚಾರವನ್ನು ಹೇಳಬೇಕೆಂದರೆ ಬಹಳ ಬೇಸರವಾಗುತ್ತದೆ. ಸರ್ಕಾರದವರು ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ ಅನೇಕ ವರ್ಷಗಳಿಂದ ಕೋಟಿಗಟ್ಟಲೆ ಹಣವನ್ನು ವ್ಯಯ ಮಾಡುತ್ತಿದ್ದಾರೆ. ಈ ರೀತಿ ಹಣ ಖರ್ಚು ಮಾಡಿದ ಮೇಲೆ ಆ ನೀರು ಸರಿಯಾಗಿ ವ್ಯಯವಾಗುವಂತೆ ವ್ಯವಸ್ಥೆ ಮಾಡಿಲ್ಲ ; ನಮ್ಮ ಜಿಲ್ಲೆಯಲ್ಲಿ ಕೆಲವು ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕೆಂದು ಕಳೆದ 3—4 ವರ್ಷಗಳಿಂದ ಕೇಳಿಕೊಂಡರೂ ಸಹ ಸರ್ಕಾರದವರು ಅದರ ಕಡೆ ಗಮನ ಕೊಟ್ಟಿಲ್ಲ ; ಕುಂದಾಪುರದ ಬಳಿ ಮಧ್ಯಮ ನೀರಾವರಿ ಯೋಜನೆಯಾದ 15 ಲಕ್ಷ ರೂಪಾಯಿಗಳ ವೆಚ್ಚದ ಬೀಜೂರು ಯೋಜನೆಯನ್ನು ಇನ್ನು ಕೈಗೊಂಡಿಲ್ಲ. ಅದೇ ರೀತಿ ವರಾಹಿ ಜಲ ವಿದ್ಯುತ್ ಯೋಜನೆ ಸಹ ಇನ್ನೂ ಕಾರ್ಯಗತವಾಗಿಲ್ಲ ; ಈ ದಿಶೆಯಲ್ಲಿ ಸರ್ಕಾರ ಮುಂದುವರಿದಂತೆ ಕಂಡು ಬರುತ್ತಿಲ್ಲ ; ನಮ್ಮ ಜಿಲ್ಲೆಯಲ್ಲಿ ಸಣ್ಣಪುಟ್ಟ ನೀರಾವರಿ ಯೋಜನೆಗಳನ್ನು ಕೈಕೊಂಡಿದ್ದೇ ಆದರೆ ನಮ್ಮ ರಾಜ್ಯದಲ್ಲಿರುವ ಆಹಾರದ ಕೊರತೆಯನ್ನು ನೀಗಿಸಬಹುದೇ ಅಲ್ಲದೆ ಆ ಜಿಲ್ಲೆಯನ್ನು ಭತ್ತದ ಕಣಜವನ್ನಾಗಿ

ಪರಿವರ್ತನೆ ಮಾಡಬಹುದೆಂದು ಹೇಳುತ್ತೇನೆ. ಈ ಕಾರಣದಿಂದ ನಮ್ಮ ಜಿಲ್ಲೆಯಲ್ಲಿ ಸಣ್ಣಪುಟ್ಟ ಮತ್ತು ಕೆಲವು ದೊಡ್ಡ ನೀರಾವರಿ ಯೋಜನೆಗಳನ್ನು ಕೈಕೊಳ್ಳುವುದರ ಬಗ್ಗೆ ಮೊದಲು ಪ್ರಾಶಸ್ತ್ಯ ಕೊಡಬೇಕೆಂದು ಕಳಕಳಿಯಿಂದ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಹಾಲಿನ ಉತ್ಪಾದನೆ ವಿಚಾರದಲ್ಲಿ ಇಪ್ಪತ್ತು ಡ್ಯಾನಿಸ್ ಯೋಜನೆ ಪ್ರಾರಂಭವಾಗಿದೆ. ಈ ಯೋಜನೆಯ ಕೆಳಗೆ ಅನೇಕ ಜಿಲ್ಲೆಗಳನ್ನು ಸೇರಿಸಿದ್ದರೂ ಸಹ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ಅಳವಡಿಸಿಕೊಂಡಿಲ್ಲ ; ಇದಕ್ಕೆ ಕಾರಣವೇನೆಂಬುದು ನನಗೆ ತಿಳಿದುಬಂದಿಲ್ಲ ; ನಮ್ಮ ಜಿಲ್ಲೆಯ ಶಾಸಕರು ಸಂಬಂಧಪಟ್ಟ ಮಂತ್ರಿಗಳ ಗಮನವನ್ನು ಈ ಬಗ್ಗೆ ಸೆಳೆದಿದ್ದರೂ ಸಹ ಅವರು ಇದರ ಕಡೆಗೆ ಇನ್ನೂ ಗಮನ ಹರಿಸಿಲ್ಲದಿರುವುದು ಖೇದಕರವಾದಂಥ ವಿಚಾರವಾಗಿದೆ. ಆದಷ್ಟು ಜಾಗ್ರತೆ ನಮ್ಮ ಜಿಲ್ಲೆಯನ್ನು ಸಹ ಆ ಯೋಜನೆಯಲ್ಲಿ ಸೇರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಹೊನ್ನಾವರ ಮತ್ತು ಮಲ್ಪೆ ಬಂದರುಗಳನ್ನು ಅಭಿವೃದ್ಧಿಗೊಳಿಸುತ್ತಿರುವುದು ಸಂತೋಷದ ವಿಚಾರವಾಗಿದೆ. ಆದರೆ ಗಂಗೊಳ್ಳಿ ಬಂದರನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲಿ ಒಂದು ಹೆಜ್ಜೆ ಕೂಡ ಮುಂದೆ ಹೋದಂತೆ ಕಾಣುತ್ತಿಲ್ಲ ; ಆ ಬಂದರನ್ನು ಸಹ ಮೀನುಗಾರಿಕೆ ಮತ್ತು ಸರಕು ಸಾಗಾಣಿಕೆ ಮಾಡುವಂತಹ ಬಂದರನ್ನಾಗಿ ಅಭಿವೃದ್ಧಿಪಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಆರ್ಥಿಕ ಸಾಧನೆ ವಿಚಾರವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಕರಾವಳಿ ಸಿರೂರು ಮತ್ತು ಗಂಗೊಳ್ಳಿ ಭಾಗದಲ್ಲಿ ಏನು ಅಭಿವೃದ್ಧಿ ಕಾರ್ಯಗಳು ನಡೆಸಬೇಕೋ ಅದರ ಬಗ್ಗೆ ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ ; ಅಲ್ಲಿ ಅದಿರು ಸಿಕ್ಕುತ್ತದೆ ಅದನ್ನು ಉಪಯೋಗಿಸಿಕೊಂಡು ಅಲ್ಲಿ ಒಂದು ಅಲ್ಯೂಮಿನಿಯಂ ಕಾರ್ಖಾನೆ ರಚನೆ ಮಾಡಿದರೆ ಆ ಭಾಗದ ಜನರಿಗೆ ಆರ್ಥಿಕವಾಗಿ ಸಹಾಯವಾಗುತ್ತದೆ. ಅಲ್ಲಿ ಅಲ್ಯೂಮಿನಿಯಂ ತಯಾರು ಮಾಡುವಂತೆ ಈ ಸಂದರ್ಭದಲ್ಲಿ ಮೊದಲನೆಯದಾಗಿ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಅರಣ್ಯದಿಂದ ಬೇಕಾದಷ್ಟು ಕಚ್ಚಾ ಮಾಲುಗಳು ದೊರೆಯುವುದರಿಂದ ಅದನ್ನು ಉಪಯೋಗಿಸಿಕೊಳ್ಳಬೇಕು. ನಮ್ಮ ಭಾಗದಲ್ಲಿ ನೀರಾವರಿ ಯೋಜನೆಗಳನ್ನು ಕೈಕೊಂಡಾಗ ಅಲ್ಲಿ ಸಿಕ್ಕುವ ಖನಿಜ ಸಂಪತ್ತು ಬಹಳ ವಿಶಿಷ್ಟ ಪರಿಸ್ಥಿತಿಯನ್ನು ಕಾಣುತ್ತೇನೆ. ಇನ್ನು ಕಾಳಿಯೋಜನೆಯಿಂದ ಸುಮಾರು ಎಕರೆ ಅರಣ್ಯ ಹೋಗಿ ಅಲ್ಲಿ ದೊರಕುತ್ತಿದ್ದ ಅರಣ್ಯ ಸಂಪತ್ತು ಮುಳುಗಿ ಹೋಗುತ್ತದೆ ಅಲ್ಲಿ ದೊರೆಯುತ್ತಿದ್ದ ಖನಿಜ ಸಂಪತ್ತು ಎಲ್ಲಾ ಹೋಗುತ್ತದೆ. ಇನ್ನು ವರಾಹಿ ಯೋಜನೆಯನ್ನು ತೆಗೆದುಕೊಂಡಾಗ ಅಲ್ಲಿನ ಸುತ್ತಮುತ್ತಲ ಪ್ರದೇಶಗಳು ಮುಳುಗಿ ಹೋಗುತ್ತವೆ. ಆದ್ದರಿಂದ ಏನಾದರೂ ಮುಂದಾಲೋಚನೆ ಮಾಡಿ ಅಲ್ಲಿ ದೊರಕುವ ಖನಿಜ ಸಂಪತ್ತು ಮರಗಿಡಗಳನ್ನು ಮುಳುಗಡೆ ಯಾಗುವುದಕ್ಕಿಂತ ಮುಂಚೆ ಅದರ ಉಪಯೋಗವನ್ನು ಪಡೆಯುವಂತೆ ಏರ್ಪಾಡು ಮಾಡಿ ಆ ಅರಣ್ಯ ಸಂಪತ್ತನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂದು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳ ಸಾರಿಗೆ ಸಂಪರ್ಕದ ವಿಷಯವನ್ನು ಹೇಳಬೇಕಾದರೆ ನಮ್ಮ ದುರಾದೃಷ್ಟದಿಂದ ನಿರ್ಮಾಣವಾಗಿರುವ ರಸ್ತೆಗಳು ಸರಿಯಾಗಿ ಸಾರಿಗೆ ಸಂಪರ್ಕವನ್ನು ಮಾಡುವ ಸ್ಥಿತಿಯಲ್ಲಿಲ್ಲ ಎಲ್ಲಾ ನಿರ್ನಾಮವಾಗಿವೆ. ಅವನ್ನು ಸರಿಯಾಗಿ ಮೇಯಿಂಟೇನ್ ಮಾಡುವಂತಹ ಹೊಣೆಯನ್ನು ಹೊತ್ತುಕೊಂಡಂತೆ ಕಾಣುವುದಿಲ್ಲ. ರಸ್ತೆಗಳು ಹೀನಾಯವಾದ ಸ್ಥಿತಿಯಲ್ಲಿ ಇವೆ. ಅದಕ್ಕೋಸ್ಕರ ದಯಮಾಡಿ ಇದರ ಬಗ್ಗೆ ಹೆಚ್ಚು ಹಣವನ್ನು ಒದಗಿಸಿಕೊಟ್ಟು ನಮ್ಮ ಮಲೆನಾಡು ಪ್ರದೇಶಗಳ ಜನರಿಗೆ ಸರಿಯಾದ ಸೌಕರ್ಯ ದೊರೆಕುವಂತೆ ಮಾಡಿ ಅದರ ಜೊತೆಗೆ ಸೇತುವೆಗಳ ನಿರ್ಮಾಣ ನಮ್ಮ ಜಿಲ್ಲೆಯಲ್ಲಿ ರಚನೆಯಾಗಿಲ್ಲ ಇದರ ಬಗ್ಗೆ ಕೂಡ ಸರ್ಕಾರದ ಗಮನವನ್ನು ಹರಿಸಬೇಕೆಂದು ಕೇಳಿಕೊಂಡು ಸಮಯದ ಒತ್ತಡದಿಂದ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಸರ್ಕಾರ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದರೂ ಕೂಡ ಇನ್ನು ಸಾಧನೆ ಮಾಡಬೇಕೆಂದು, ಜೊತೆಗೆ ರಾಷ್ಟ್ರದ ಜನಸಾಮಾನ್ಯರಿಗೆ ಏನು ಸಾಧನೆ ನಡೆದಿದೆ ಎಂದು ತಿಳಿಯಲು ಸಾಕಷ್ಟು ಪ್ರಚಾರ ಕಾರ್ಯ ಆಗಬೇಕು ಎಂದು ಹೇಳುತ್ತೇನೆ. ಇನ್ನು ಅನೇಕ ಕಡೆಗಳಲ್ಲಿ ಪ್ರಗತಿ ಆಗಬೇಕು

ಜೊತೆಗೆ ಆಗಿರುವ ಪ್ರಗತಿಯನ್ನು ಸಾಮಾನ್ಯ ಜನತೆಯ ಗಮನಕ್ಕೆ ತರಬೇಕು. ಕೆಲವು ಕಡೆ ಅತೃಪ್ತಿ ಅಶಾಂತಿ ಇದೆ, ಕಾರಣವಾದರೂ ಇಷ್ಟೆ. ನಮ್ಮ ಪ್ರಗತಿಯ ಬಗ್ಗೆ ಅವರಿಗೆ ಸರಿಯಾದ ತಿಳುವಳಿಕೆಯಿಲ್ಲ. ಇದು ಅವರಿಗೆ ಗೊತ್ತಾಗಬೇಕು. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ವೈ. ಪಾಟೀಲ್ .— (ಸಿಂದಗಿ): ಮಾನ್ಯ ಅಧ್ಯಕ್ಷರೇ, ಈಗ ನಾನು ಮಾನ್ಯ ಕೆ. ಪುಟ್ಟಸ್ವಾಮಿಯವರು ಏನು ವಂದನಾ ನಿರ್ಣಯದ ಮೇಲೆ ಭಾಷಣ ಮಾಡಿದರೋ ಆ ಭಾಷಣವನ್ನು ಕೇಳಿದೆ. ನಮ್ಮ ಅಪೋಸಿಷನ್ ಲೀಡರ್ ಶ್ರೀ ಕೃಷ್ಣಪ್ಪನವರು ಮಾಡಿದ ಭಾಷಣವನ್ನು ಕೇಳಿದ ಮೇಲೆ ಗೌರ್ನರ್ ಭಾಷಣದ ಮೇಲೆ ಈ ಎಲ್ಲಾ ಭಾಷಣವನ್ನು ನೋಡಿದರೆ ವಕೀಲರು ಏನು ಇದ್ದಾರೆ ಅವರ ಬಗ್ಗೆ ನನಗೆ ಬಹಳ ಅಭಿಮಾನ ಅನ್ನಿಸಿತು. ನಾನು ಇವತ್ತು ನೋಡುತ್ತಿದ್ದೇನೆ ಅದರ ಬಗ್ಗೆ ನಾನು ಬಹಳ ಹೇಳಲಿಕ್ಕೆ ಹೋಗುವುದಿಲ್ಲ. ಅವಕಾಶ ಉಳಿಯುವುದಿಲ್ಲ, ಮುಖ್ಯವಾಗಿ ನನ್ನ ಚಾರ್ಜ್ ಇವತ್ತು ಏನು ಎಂದರೆ ನಮ್ಮ ನಾಯಕಿ ಮಹಾ ಪ್ರಧಾನಿಯವರು ನಮ್ಮ ದೇಶದಲ್ಲಿ ಏನು 20 ಅಂಶದ ಕಾರ್ಯಕ್ರಮದ ಯೋಜನೆ ಹಾಕಿದ್ದಾರೆ ಅದು ಇರಲಿಕ್ಕೆ ಆದರೆ ಕರ್ನಾಟಕದ ನಕಾಶೆಯನ್ನು ಬದಲಾವಣೆಯನ್ನು ಮಾಡಬೇಕಾಗುತ್ತದೋ ಏನೋ, ಅದನ್ನು ಇವತ್ತು ಯಾರು ಧೈರ್ಯದಿಂದ ಮಾತನಾಡುತ್ತಾರೆ. ಎಲ್ಲರೂ ಬಹಳ ಪೋಷಕವಾಗಿ ಮಾತನಾಡತ್ತಾರೆ. ಶ್ರೀಮಾನ್ ಚೆನ್ನಬಸಪ್ಪನವರಿಗೆ ನಾನು ಹೇಳಿದೆ ನಾವು ಬರೀ ಮಾತನಾಡುವುದರಿಂದ ಏನೂ ಪ್ರಯೋಜನವಿಲ್ಲ. ನಾನು ಮಾತನಾಡುವುದನ್ನು ಕಂಡು ಮಾನ್ಯ ಚೆನ್ನಬಸಪ್ಪನವರು ಹೊರಟರು. ಈಗ ಮಾನ್ಯ ಸಿದ್ಧವೀರಪ್ಪನವರಿಗೆ ಹೇಳುತ್ತೇನೆ ಜನರ ಆರೋಗ್ಯ ಉಳಿಯಬೇಕಾದರೆ ಹಾಸ್ಪಿಟಲ್ ಹೆಚ್ಚಬೇಕು. ದೇಹ ಜೀವಂತವಾಗಿ ಇರುವಾಗ ಅದಕ್ಕೆ ಏನಾದೂ ಚಿಕಿತ್ಸೆ ಕೊಡಬೇಕು ಇಲ್ಲದೆ ಜೀವ ಹೋಗಿ ಹೆಣವಾದ ಮೇಲೆ ಏನು ಚಿಕಿತ್ಸೆ ಮಾಡಿದರೂ ಪ್ರಯೋಜನವಿರುವುದಿಲ್ಲ. ಅದೇ ರೀತಿ ನಮ್ಮ ಬಿಜಾಪುರ ಜಿಲ್ಲೆಯ ಉದ್ಧಾರದ ಬಗ್ಗೆ ಏನು ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ. ಬರೀ ಭಾಷಣ ಮಾಡಿದರೆ ಏನು ? ಅಪ್ಪರ್ ಕೃಷ್ಣ ಮತ್ತು ನಮ್ಮ ಕೊಯಿನಾ ಪ್ರಾಜೆಕ್ಟು ಏನಾಗಿವೆ ಅದರ ಬಗ್ಗೆ ನಾನು ತಮ್ಮನ್ನು ಪ್ರಶ್ನೆ ಕೇಳುತ್ತೇನೆ. ಶ್ರೀಮಾನ್ ಚೆನ್ನಬಸಪ್ಪನವರು ಹೇಳಿದರು ಆ ಯೋಜನೆಯನ್ನು ಮಾತ್ರ ಕೈಬಿಡುವುದಿಲ್ಲವೆಂದು. ಆ ಯೋಜನೆಯನ್ನು ತಂದಿದ್ದೇ ಆದರೆ ಬಹಳ ಲಾಭ ಆಗುತ್ತದೆ. ಇವತ್ತು ಅನ್ನದ ಬಗ್ಗೆ, ಎಲೆಕ್ಟ್ರಿಫಿಕೇಷನ್ ಬಗ್ಗೆ ಮೊದಲೇ ಏನಾದರೂ ಪ್ರಮೋಷನ್ ಅಥವಾ ರಿವರ್ಷನ್ ಮಾಡಲಿ ಆದರೆ ಇವತ್ತು ಬದುಕುವ ವ್ಯವಸ್ಥೆಯಲ್ಲದಿದ್ದರೆ ನಾವು ಅಸೆಂಬ್ಲಿಗೆ ಬಂದಿದ್ದೇವೆ ಅದರಲ್ಲಿ ಯಾರು ಉಂಡು ಬಂದಿದ್ದೇವೆ ಯಾರು ಹಸಿದು ಬಂದಿದ್ದೇವೆ ಎನ್ನುವುದು ಗೊತ್ತಾಗುವುದಿಲ್ಲ. ಆದ್ದರಿಂದ ನಮ್ಮ ಬಿಜಾಪುರ ಜಿಲ್ಲೆಗೆ ಮಾನ್ಯ ರಾಠೋಡ್ ಅವರು ಬಂದಿದ್ದಾಗ ಅಲ್ಲಿನ ಲಂಬಾಣಿಗಳು ಇದ್ದಾರೋ ಹರಿಜನ ಗಿರಿಜನ ಇದ್ದಾರೋ ಎಲ್ಲವನ್ನೂ ನೋಡಿಕೊಂಡು ಬಂದಿದ್ದಾರೆ. ಸಾಮಾನ್ಯ ಜನರೆಲ್ಲರೂ ಮಹಾರಾಷ್ಟ್ರಕ್ಕೆ ಹೋಗುತ್ತಿದ್ದಾರೆ. ಮಹಾರಾಷ್ಟ್ರ ಸರ್ಕಾರ ಬಹಳಷ್ಟು ಸಹಕಾರ ಕೊಡುತ್ತಿದೆ. ಸುಮಾರು ಜನರು ಕೊಲ್ಹಾಪುರದ ಕಡೆಗೆ ಹೋಗುತ್ತಿದ್ದಾರೆ ಬಿಜಾಪುರದ ಕಡೆಯಿಂದ ಹೋಗುತ್ತಿರುವ ಜನರಿಗೆ ಬಹಳಷ್ಟು ಸಹಕಾರ ಕೊಡುತ್ತಿದ್ದಾರೆ. ಅದಕ್ಕೆ ಮಹಾರಾಷ್ಟ್ರ ಸರ್ಕಾರವನ್ನು ಅಭಿನಂದಿಸುವುದು ನಮ್ಮ ಕರ್ತವ್ಯ. ನಮ್ಮ ದೊಡ್ಡ ಯೋಜನೆಯೆಂದರೆ ಆಲಮಟ್ಟಿ. ಆಲಮಟ್ಟಿ ಯೋಜನೆಯ ಶಂಕುಸ್ಥಾಪನೆಯನ್ನು ಜಗತ್ ಪ್ರಸಿದ್ಧರಾದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಹಾಕಿದರು. ನಮ್ಮ ನಾಯಕಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಇದನ್ನು ಕೈಬಿಡುವುದಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ವಿಶ್ವ ಬ್ಯಾಂಕಿನ ಸಹಾಯದಿಂದ 51 ಕೋಟಿ ರೂಪಾಯಿ ಹಣವನ್ನು ಒದಗಿಸಲಿಕ್ಕೆ ವ್ಯವಸ್ಥೆ ಮಾಡಿದರು. ಇದು ಬಿಜಾಪುರ ಜಿಲ್ಲೆ ಸಿಂದಗಿ ಭಾಗಕ್ಕೆ ಬರುತ್ತದೆ. ಈ ನಾಲ್ಕು ವರ್ಷ ನಮ್ಮ ಅವಧಿ ಕಳೆದು ಹೋಗಿದೆ, ನಾಲ್ಕು ಭಾಷಣವಾಗಿ ಇನ್ನು ಒಂದು ಭಾಷಣ ಮುಗಿದರೆ ನಮ್ಮ ಕೋರ್ಸ್ ಕಂಪ್ಲೀಟ್ ಆಗುತ್ತದೆ. ಆದ್ದರಿಂದ ಈ ಸಿಸ್ಟಮ್ಯಾಟಿಕ್ ಟಿ.ಬಿ. ಕಾಯಿಲೆಯನ್ನು ಕಂಪ್ಲೀಟ್ ಮಾಡುವುದಕ್ಕೆ ನಮ್ಮ ಸರ್ಕಾರ ಸಹಾಯ ಮಾಡಬೇಕು. ಇನ್ನು ಮಾನ್ಯ ಶ್ರೀ ನಗರಾಳ್‌ರವರು ಬಂದಿದ್ದಾಗ ಅವರನ್ನು ಕೇಳಿದರೆ ಅವರು ಹೇಳುತ್ತಾರೆ ಅಲ್ಲಿ ಮೈನರ್ ಇರಿಗೇಷನ್ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಯಾವ ಸ್ಕೋಪ್ ಇಲ್ಲವೆಂದು. ಈ ರೀತಿ ಮೇಜರ್ ಇರಿಗೇಷನ್ ಮತ್ತು

ಮೈನರ್ ಇರಿಗೇಷನ್ ಎಂದು ಹೇಳಿಕೊಂಡು ನಮ್ಮ ಬಿಜಾಪುರ ಜಿಲ್ಲೆಯನ್ನು ಕಡೆಗಣಿಸುತ್ತಾ ಬಂದಿದ್ದಾರೆ. ಇನ್ನು ನಾನು ನಮ್ಮ ಮಾನ್ಯ ದೀಕ್ಷಿತ್‌ರವರು ನಮ್ಮ ಇಂದಿರಾಜಿಯವರ ಆಪ್ತರು ಮತ್ತು ರಾಜಕೀಯದಲ್ಲಿ ಬಹಳ ನುರಿತವರು, ಆದ್ದರಿಂದ ಈ ಸರ್ಕಾರ ಏನು ವರದಿ ಕೊಡುತ್ತಾರೆ ಅದನ್ನು ಅವರು ಓದುವುದಿಲ್ಲ. ಅವರದೇ ಆದ ಒಂದು ಹೊಸ ಸುದ್ದಿಯನ್ನು ತಂದಿದ್ದಾರೆ ಎಂದು ತಿಳಿದಿದ್ದೆ. ಅವರು ಬಹಳ ಏಬಲ್ ಲೀಡರ್ ಎಂದು ಜೊತೆಗೆ ಮೊರಾರ್ಜಿ ದೇಸಾಯಿಯವರನ್ನು ಬಿಟ್ಟರೆ ನಮ್ಮ ದೀಕ್ಷಿತ್‌ರವರು ಕರ್ನಾಟಕದಲ್ಲಿ ಬಹಳಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಲಿಕ್ಕೆ ಬಂದಿದ್ದಾರೆ, ಅವರ ಮುಖಾಂತರ ನಮ್ಮ ಕರ್ನಾಟಕಕ್ಕೆ ಬಹಳ ಕೆಲಸಕಾರ್ಯಗಳನ್ನು ಮಾಡುವುವರಲ್ಲಿ ನಮ್ಮ ಮಂತ್ರಿಗಳನ್ನು ಹತೋಟಿಯಲ್ಲಿ ಇಟ್ಟುಕೊಂಡು ನಮ್ಮ ರಾಜ್ಯವನ್ನು ಉದ್ಧಾರ ಮಾಡಲಿಕ್ಕೆ ಇವರನ್ನು ಇಂದಿರಾಜಿಯವರು ಕಳುಹಿಸಿದ್ದಾರೆ ಎಂದು ತಿಳಿದಿದ್ದೆ. ಆದರೆ ಮಾನ್ಯ ದೀಕ್ಷಿತ್‌ರವರು ಅದನ್ನು ಮಾಡದೆ ಈ ಮಂತ್ರಿಮಂಡಲ ಏನು ಕೊಟ್ಟಿದೆಯೋ ಅದನ್ನೇ ಇಲ್ಲಿ ಓದಿದ್ದಾರೆ ಅಷ್ಟೇ. ಅವರು ಒಂದು ಹೊಸದೊಂದು ವಾಕ್ಯವನ್ನೂ ಹೇಳಲಿಕ್ಕೆ ಶಕ್ಯವಿಲ್ಲವಾಗಿದೆ. ಮುಂಬೈ ಪ್ರಾಂತದಲ್ಲಿ ನಾವಿದ್ದಾಗ ಸಿಂಧಗಿ, ಇಂಡಿ ತಾಲ್ಲೂಕುಗಳ ಸಲುವಾಗಿ ಕೊಯಿನಾ ಯೋಜನೆ ಇತ್ತು. ಅದನ್ನು ಯಾರು ಕೈಬಿಟ್ಟರು? ಯಾಕೆ ಬಿಟ್ಟಿದೆ ಎಂಬುದನ್ನು ತಿಳಿಸಬೇಕು. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಮಾಡುವಿರೋ ಇಲ್ಲವೋ? ಈ ಬಗ್ಗೆ ಭಾರತ ಸರ್ಕಾರದ ಧೋರಣೆ ಏನು? ಈ ಬಗ್ಗೆ ನಿಮ್ಮ ವಿಚಾರವೇನು? ಸ್ವಚ್ಛ ಮಾತಿನಲ್ಲಿ ಉತ್ತರ ಸಿಗಬೇಕು.

ಇನ್ನು ಬಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ದೋಣಿ ನದಿಯ ಯೋಜನೆಯಿಂದ ಸಿಂಧಗಿ ತಾಲ್ಲೂಕಿನಲ್ಲಿ ನೀರಾವರಿಯಾಗುತ್ತಿದ್ದು ಆ ಬಗ್ಗೆ ಸರ್ಕಾರದಲ್ಲಿ ತಯಾರುಮಾಡಿದ ಯೋಜನೆ ಒಂದಿದೆ. ಈ ಯೋಜನೆಯಿಂದ ಈ ನದಿಯ ನೀರು ನೀರಾವರಿಗೆ ಉಪಯೋಗವಿಲ್ಲವೆಂದು ಸರ್ಕಾರ ನೆಪ ಮುಂದುಮಾಡಿ ಕೈಬಿಟ್ಟಿದ್ದಾರೆ. ಈ ನೀರು ನೀರಾವರಿಗೆ ಉಪಯೋಗವಿದೆಯೋ ಅಥವಾ ಇಲ್ಲವೇ ಎಂಬುದನ್ನು ನಿರ್ಣಯಿಸಿಕೊಂಡು ಮಾನ್ಯ ಮುಖ್ಯ ಮಂತ್ರಿಗಳಿಗೆ ಎಷ್ಟೋ ಸಲ ಹೇಳಿದ್ದೇನೆ. ಆದರೂ ಅದರ ಕಡೆಗೆ ಗಮನಕೊಟ್ಟಿಲ್ಲ.

ಸರ್ಕಾರದವರು ಇತ್ತೀಚೆಗೆ ಹರಿಜನ ಹಾಗೂ ಹಿಂದುಳಿದವರ ಉದ್ಧಾರದ ಬಗ್ಗೆ ಬಹಳವಾಗಿ ಮಾತನಾಡುತ್ತಾರೆ. ಬರೀ ಮಾತಿನಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಮಹಾತ್ಮ ಗಾಂಧಿ ಹಾಗೂ ಡಾ: ಅಂಬೇಡ್ಕರ್ ಇವರಂತೆ ಸತ್ಯವಾದ ಹಾಗೂ ಸ್ತುತ್ಯವಾದ ಕೆಲಸಗಳನ್ನು ಮಾಡಿರಿ. ಬಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ಅಪರಿಮಿತ ಭೂಮಿ ಇದೆ. ನೀರಿದ್ದಲ್ಲಿ ದೊಡ್ಡದೊಂದು ಸಾಮೂಹಿಕ ಬಾವಿಗಳನ್ನು ತೆಗೆದು ಆ ನೀರಿನ ಸಹಾಯದಿಂದ ಚಕ್ಕೆ ಗಿಡ, ನಿಂಬೆ ಗಿಡ, ದ್ರಾಕ್ಷಿ ಇತ್ಯಾದಿ ಸಣ್ಣ ಸಣ್ಣ ತೋಟಗಳನ್ನು ಭೂರಹಿತರಿಗೆ ಮಾಡಿಕೊಟ್ಟರೆ ನಿಜವಾಗಿ ದೀನದಲಿತರ ಹಾಗೂ ಹರಿಜನರ ಉದ್ಧಾರವಾಗುವದು.

ಬಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ಬಹಳ ಹಳೆಯ ಬಾವಿಗಳಿವೆ. ಸಿಂಧಗಿ ಮತ್ತು ಇಂಡಿ ಈ ಎರಡು ತಾಲ್ಲೂಕುಗಳಲ್ಲಿ ಸುಮಾರು 15ಸಾವಿರ ಬಾವಿಗಳಿವೆ. ಅವುಗಳನ್ನು ಗುಮ್ಮ ಮಾಡಿ ಸುತ್ತ ಗೋಡೆ ಕಟ್ಟಿ ಪಂಪು ಹಚ್ಚಿಕೊಟ್ಟು, ನೀರುಣ್ಣುವ ಭೂಮಿಯನ್ನು ಸ್ವಚ್ಛಮಾಡಿಸಿ ನಂತರ ಸಮಪಾತಳಿ ಮಾಡಿಸಿದರೆ ಆಗ ರೈತನ ಮೇಲೆ ಇರತಕ್ಕ ಸರ್ಕಾರದ ಸಾಲವನ್ನು ತೀರಿಸುವುದಕ್ಕೆ ಒಂದು ಯೋಜನೆಯನ್ನು ತಯಾರಿಸಿ ಅವುಗಳ ಬಗ್ಗೆ ಸುಧಾರಣೆ ಮಾಡಿದರೆ ನಮ್ಮ ಭಾಗದಲ್ಲಿರತಕ್ಕ ರೈತರೆಲ್ಲರೂ ಬಡತನದಿಂದ ಮುಕ್ತರಾಗುವರು. ನಮ್ಮ ಭಾಗದಲ್ಲಿ ಭೂಮಿ ಸಪಾಟವಿದ್ದುದರಿಂದ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ. ಸರ್ಕಾರದವರು ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಿಲ್ಲ. ಹೀಗಾದರೆ ಅವರು ಬದುಕುವ ಉಪಾಯವಾದರೂ ಏನು?

ಇನ್ನು ಹಂದಿ, ಕೋಳಿ, ಕುರಿ ಸಾಕಾಣಿಕೆಗೆ ಹಣ ಒದಗಿಸಿದ್ದೀರಿ. ಹೈನು ಯೋಜನೆಗೆ ಬ್ಯಾಂಕುಗಳಿಂದ 51 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಆದರೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಣವೇಕೆ ಇಲ್ಲ? ಈ ಬಗ್ಗೆ ಸುಸ್ಪಷ್ಟವಾದ ಉತ್ತರ ಬೇಕು. ನಿಮ್ಮ ಋಣವಿಮೋಚನ ಕಾಯಿದೆಯಿಂದ ಅನೇಕ ದುಷ್ಟಜನರು ತಾವು ಸಾಲಗಾರರೆಂದು ನಿರಪರಾಧಿಗಳಿಗೆ ಅಂಜಿಸಿ ಬ್ರಾಂಡ್‌ಗಳನ್ನು ಪಡೆದಿದ್ದಾರೆ. ಮತ್ತೊಂದು ಮಾತು, ಮೊನ್ನೆ ಖಾಸಗಿ ಬಸ್ಸುಗಳನ್ನು ಸರ್ಕಾರ

ತೆಗೆದುಕೊಂಡಿದ್ದು ಸ್ವಾತ್ಯಕಾರ್ಯವಾದರೂ ಅವರಿಗೆ ವಂಚಿತವಾಗಿ ಹೀಗೆ ಮಾಡುವುದು ಸರಿಯಲ್ಲ. ನಿಮ್ಮ ಈ ಧೋರಣೆಯಿಂದ ರೈತರು, ವ್ಯಾಪಾರಿಗಳು ಗಾಬರಿಯಾಗಿದ್ದಾರೆ. ಇದರಿಂದ ರಾಷ್ಟ್ರದ ಉತ್ಪತ್ತಿಯ ಮೇಲೆ ಪರಿಣಾಮವಾಗುತ್ತದೆ. ಈ ರಾಜ್ಯದಲ್ಲಿ ಜನತೆಯನ್ನು ಅಂಜಿಸುವ ಹೊಸ ಪದ್ಧತಿ ಪ್ರಾರಂಭವಾಗಿದೆ. ಪ್ರಧಾನಿ ಇಂದಿರಾಗಾಂಧಿಯವರಿಗೆ ಬೈದಿದ್ದರೆ, ಮುಖ್ಯಮಂತ್ರಿಗಳಿಗೆ ಅಶ್ಲೀಲ ಮಾತನಾಡಿದ್ದರೆ, ಹರಿಜನರಿಗೆ ಹೊಡೆಯುತ್ತಾರೆ, ಬೈಯುತ್ತಾರೆ ಇತ್ಯಾದಿ ಕಟ್ಟಳೆಗಳನ್ನು ಹರಿಜನರು, ಹರಿಜನರಲ್ಲದವರ ಮೇಲೆ ಸುಳ್ಳು ಕಟ್ಟಳೆಮಾಡಿ ಅಂಜಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಶ್ರೀ ಚನ್ನಬಸಪ್ಪನವರಿಗೆ ಒಂದು ಮಾತು ಕೇಳಬಯಸುತ್ತೇನೆ. ನೀವು ಮಂತ್ರಿಗಳಿಲ್ಲದಾಗ ಕೃಷ್ಣಾ ಮೇಲ್ದಂಡೆ ವಿಚಾರವಾಗಿ ಮಾತನಾಡಿದ್ದಿರಿ. ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ಆ ಬಗ್ಗೆ ವಿಚಾರ ಮಾಡಿದಿರಿ. ಆಗ ನಿಮಗೆ ವಿಮಾನ ತಪ್ಪಿ ಬೆಂಗಳೂರಿಗೆ ಕಾರಿನಲ್ಲಿ ಬಂದಿರೆಂದು ನಾನು ಕೇಳಿದ್ದೇನೆ. ಆದರೆ ಈಗ ನೀವೇ ಮಂತ್ರಿಮಂಡಲದಲ್ಲಿದ್ದು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಏಕೆ ಕಾರ್ಯಗತಮಾಡಬಾರದು? ದುಶ್ಶಾಸನ ದ್ರೌಪದಿಯ ಸೀರೆ ಸೆಳೆಯುವಾಗ ಪಾಂಡವರು ಅಬಲೆಯಂತೆ ಕೈಕಟ್ಟಿಕೊಂಡು ಕುಳಿತಂತೆ ನೀವು ಏಕೆ ಸುಮ್ಮನೆ ಕುಳಿತಿದ್ದೀರಿ ? ರಾಜ್ಯ ಘಟನೆಯಂತೆ ಭಾರತದ ಪ್ರತಿಯೊಂದು ಆಜ್ಞೆ ರಾಷ್ಟ್ರಪತಿಯಿಂದ ಹೊರಡುತ್ತಿದ್ದು ಅವರ ಹೆಸರನ್ನು ಬಿಟ್ಟು ಕೇವಲ ಇಂದಿರಾ ಗಾಂಧಿಯವರನ್ನು ಮಾತ್ರ ಹೊಗಳುವ ಕಾರಣವೇನು ?

ಒಟ್ಟಿನಲ್ಲಿ ಬಿಜಾಪುರ ಜಿಲ್ಲೆಯ ಉತ್ತರ ಭಾಗದ ಪ್ರಾಮುಖ್ಯ ತಾಲ್ಲೂಕುಗಳಾದ ಸಿಂಧಗಿ, ಇಂಡಿ ತಾಲ್ಲೂಕುಗಳಲ್ಲಿ ಮೇಲ್ಕಂಡ ನೀರಾವರಿ ಯೋಜನೆಯ ಬಗ್ಗೆ ಸರ್ಕಾರದ ಸುಸ್ಪಷ್ಟ ಧೋರಣೆಯನ್ನು ತಾಳಬೇಕು. ನಿಮಗೆ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಆಗದಿದ್ದರೆ ಅಪ್ಪು ಕೊಟ್ಟು ಜನತೆ ಮರಣವನ್ನು ಅಪ್ಪಲು ಸಹಾಯ ಮಾಡಬೇಕೆಂದು ಹೇಳಲೇ ? ಈ ವರ್ಷದ ಅತಿವೃಷ್ಟಿಯಿಂದ ಜನ ಬಿತ್ತಿಲ್ಲ. ಅಧಿಕಾರಿಗಳು ಅದರ ಬಗ್ಗೆ ಏನು ಯೋಚನೆಮಾಡುತ್ತಿದ್ದಾರೋ ಗೊತ್ತಿಲ್ಲ. ಕೂಲಿಗಾರರಿಗೆ ಕೂಲಿ ಇಲ್ಲ, ದನಗಳಿಗೆ ಮೇವು, ಸೊಪ್ಪು ಇಲ್ಲ. ಆದ್ದರಿಂದ ಸರ್ಕಾರದವರು ದಯವಿಟ್ಟು ಕೂಡಲೇ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪ್ರಾರಂಭ ಮಾಡಿಸಬೇಕು.

ಮಾನ್ಯ ಚನ್ನಬಸಪ್ಪನವರಲ್ಲಿ ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ನಾವು ವಿರೋಧ ಪಕ್ಷದವರು ನಿಮ್ಮ ಕಾರ್ಯಗಳಿಗೆ ಯಾವುದಕ್ಕೂ ವಿರೋಧ ಮಾಡಿಲ್ಲ. 4 ವರ್ಷಗಳಲ್ಲಿ ಬಹಳ ಉತ್ತಮವಾದ ಕಾರ್ಯಗಳನ್ನು ತಾವು ಮಾಡಿದ್ದೀರಿ. ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಬಹಳ ಉತ್ತಮವಾದ ಕಾರ್ಯವನ್ನು ಮಾಡಿದ್ದೀರಿ. ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಿದ್ದೀರಿ. ಆದರ ಸಲುವಾಗಿ ನಿಮ್ಮಲ್ಲಿ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ದಯವಿಟ್ಟು ಅಪ್ಪರ್ ಕೃಷ್ಣಾ ಯೋಜನೆ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಬೇಕು. ನಮ್ಮ ಕಡೆ ಪರಿಸ್ಥಿತಿ ಅಷ್ಟು ಚಲೋ ಇಲ್ಲ. ಕೊಯ್ನಾ ವಾಟರ್ ಬಗ್ಗೆ, ಅಪ್ಪರ್ ಕೃಷ್ಣಾ ಬಗ್ಗೆ ಪರಿಣಿತರನ್ನು ಕಳುಹಿಸಿ ಕೂಡಲೇ ಅಲ್ಲಿ ಪರಿಶೀಲನೆ ಮಾಡಿ ಕೆಲಸ ಶುರುವಾಗುವಂತೆ ಮಾಡಿ ನಮ್ಮ ಕಡೆಯ ಜನಗಳಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ನಂಬಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

3-30 P.M.

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

† ಶ್ರೀ ಐ.ಜಿ. ಸನದಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಗತ ವೈಭವವನ್ನು ಮತ್ತೆ ಪುನಶ್ಚೇತನಗೊಳಿಸಲು ಕಂಕಣ ತೊಟ್ಟು ಮಾನ್ಯ ಶ್ರೀ ಉಮಾಶಂಕರ್ ದೀಕ್ಷಿತ್‌ರವರು ಇಲ್ಲಿಗೆ ರಾಜ್ಯಪಾಲರಾಗಿ ಬಂದಿದ್ದಾರೆ. ನಾವು ರಾಜ್ಯಪಾಲರ ಭಾಷಣವನ್ನು ಓದಿದಾಗ ನಮ್ಮ ನಾಡಿನ ತುಂಬಾ ನವೋತ್ಸಾಹ ತುಂಬಿರುವುದು ಕಂಡುಬರುತ್ತಿದೆ. ರಾಷ್ಟ್ರದ ಜನ ಜೀವನವನ್ನು ಅಸ್ತವ್ಯಸ್ತಗೊಳಿಸಲು ಕೆಲವು ವಿಚ್ಛಿದ್ರಕಾರಿ ಶಕ್ತಿಗಳು ಹೊರಟಿದ್ದರು. ಅಂಥವರನ್ನು ದಮನ ಮಾಡಲು ಅಂಥ ರಾಕ್ಷಸರನ್ನು ದಮನ ಮಾಡಲು ರಾಕ್ಷಸನಾಮ ಸಂವತ್ಸರದಲ್ಲಿ ಅವರ ಕೊನೆಯ ಹಂತವನ್ನು

ಕಾಣುತ್ತಿದ್ದೇವೆ. ಒಂದು ಕಡೆ ದಿ. ಪಂಡಿತ ಜವಾಹರಲಾಲ್ ನೆಹರೂರವರು ಒಂದು ಮಾತನ್ನು ಹೇಳಿದ್ದಾರೆ, 'ಅರಾಜಕತೆ ದೇಶದಲ್ಲಿ ಉಂಟಾದರೆ, ಆ ದೇಶದಲ್ಲಿ ಕ್ರಾಂತಿಯುಂಟಾಗುತ್ತದೆ, ಆಗ ದೇಶ ಎಂದಿಗೂ ಏಳಿಗೆ ಹೊಂದಲಾರದು'' ಎನ್ನತಕ್ಕಂತ ಮಾತನ್ನು ಹೇಳಿದ್ದಾರೆ. ಆ ಮಾತನ್ನು ನೆನೆದು ಇವತ್ತು ಆ ಎಲ್ಲಾ ಶಕ್ತಿಗಳನ್ನೂ ಒಳಹಾಕಿ ತುರ್ತು ಪರಿಸ್ಥಿತಿಯನ್ನು ತಂದು ದೇಶವನ್ನು ಅಭಿವೃದ್ಧಿಯ ಕಡೆಗೆ ಸಾಗಿಸಬೇಕು ಎನ್ನುವ ಉದ್ದೇಶದಿಂದಲೇ ಈ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ. ಹಾಗೆ ಇದೇ ಅದರ ಉದ್ದೇಶ. ಆ ದೃಷ್ಟಿಯಿಂದ ನಮ್ಮ ದೇಶದ ಎಲ್ಲಾ ಜನರೂ ಅದರಲ್ಲೂ ಕೂಡ ನಿಮ್ನ ವರ್ಗದ ಜನ ಏನಿದ್ದಾರೆ, ದೀನದಲಿತರು, ದುರ್ಬಲವರ್ಗದವರು, ಎಲ್ಲರೂ ಒಕ್ಕೊರಲಿನಿಂದ ಇದನ್ನು ಸ್ವಾಗತಿಸುತ್ತಿದ್ದಾರೆ. ಎಲ್ಲಾ ರಂಗಗಳಲ್ಲೂ ಕೂಡ ಧೈರ್ಯದಿಂದ ದೇಶಕ್ಕಾಗಿ ತಮ್ಮ ಪೂರ್ಣ ಕರ್ತವ್ಯವನ್ನು ನಿರ್ವಹಿಸುವ ಸಲುವಾಗಿ ಆತ್ಮ ಅವಲೋಕನವನ್ನು ಮಾಡುತ್ತಿದ್ದಾರೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಇಂದು ನಾವು ಎಲ್ಲಾ ರಂಗಗಳಲ್ಲೂ ಹೆಚ್ಚು ಹೆಚ್ಚು ಕೆಲಸಗಳನ್ನು ಮಾಡಬೇಕು ಎನ್ನುವುದನ್ನು ನಾವು ಕಂಡುಕೊಳ್ಳುತ್ತಿದ್ದೇವೆ. ಇವತ್ತು ಅನೇಕ ತರಹದ ಸಾಧನೆಗಳನ್ನು ಮಾಡಿ ನಮ್ಮ ರಾಜ್ಯವನ್ನು ಅಭಿವೃದ್ಧಿಯತ್ತ ಸಾಗಿಸಬೇಕೆಂದು ಸರ್ಕಾರ ಉದ್ದೇಶ ಹೊಂದಿದೆ ಎನ್ನುವಂಥ ಮಾತನ್ನು ನಮ್ಮ ರಾಜ್ಯಪಾಲರು ಬಹಳ ಸೂಕ್ಷ್ಮವಾಗಿ ತಮ್ಮ ಚಿಕ್ಕ ಹಾಗೂ ಚೊಕ್ಕಟವಾದಂತ ಭಾಷಣದಲ್ಲಿ ನಿವೇದಿಸಿರತಕ್ಕಂಥದ್ದನ್ನು ನಮ್ಮ ಇಡೀ ಕರ್ನಾಟಕ ಜನತೆ ಓದಿ ತಿಳಿದುಕೊಂಡಿದ್ದಾರೆ. ಹಿಂದೆ ದ್ವಾಪರ ಯುಗದಲ್ಲಿ ಕೌರವರು ಪಾಂಡವರಿಗೆ ಕೊಡಬೇಕಾದಂತ ಜಮೀನುಗಳ ಪೈಕಿ ಒಂದು ಸೂಜಿಯಷ್ಟು ಜಾಗವನ್ನೂ ಕೊಡುವುದಿಲ್ಲವೆಂದು ಹೇಳಿದ್ದರಂತೆ. ಆಮೇಲೆ ಅವರು ನಿಧಾನವಾಗಿ ತಮಗೆ ಸೇರಬೇಕಾದಂತ ಪ್ರದೇಶಗಳನ್ನೆಲ್ಲಾ ಅವರು ಸೇರಿಸಿಕೊಂಡರು. ಹಾಗೆ ಇವತ್ತು ನಾವು ದೇಶದಲ್ಲಿ ಸೈಲೆಂಟ್ ರೆವಲ್ಯೂಷನ್ ಮುಖಾಂತರ ಭೂಕಾರ್ಮಿಕರು ಏನಿದ್ದಾರೆ, ಭೂ ಹಿಡುವಳಿ ಇಲ್ಲದಂತಹವರು ಏನಿದ್ದಾರೆ ಅಂತಹವರಿಗೆ ಹೆಚ್ಚು ಭೂಮಿ ಇರತಕ್ಕಂತವರಿಂದ ಭೂಮಿಯನ್ನು ಪಡೆದುಕೊಂಡು ಅವರಿಗೆ ಕೊಡತಕ್ಕಂತ ಶಕ್ತಿಯನ್ನು ನಮ್ಮ ಸರ್ಕಾರದವರು ಪಡೆದುಕೊಂಡಿದ್ದಾರೆ. ಅಂಥ ಮಹಾ ಸಾಹಸವನ್ನು ನಮ್ಮ ಸರ್ಕಾರ ಮಾಡಿದೆ. ಈ ಕಾರ್ಯವನ್ನು ಎಲ್ಲರೂ ಮೆಚ್ಚುತ್ತಿದ್ದಾರೆ. ನಿಮ್ನ ವರ್ಗದ ಜನಕ್ಕೆ, ಅವರ ಉಪಜೀವನಕ್ಕೂ ಮಾರ್ಗವಿಲ್ಲದೆ ಇರತಕ್ಕಂತವರಿಗೆ ಒಂದು ಮಾರ್ಗವನ್ನು ಮಾಡಿಕೊಡಬೇಕೆಂದು ನಮ್ಮ ಸರ್ಕಾರದವರು ಪ್ರಯತ್ನ ಪಡುತ್ತಿದ್ದಾರೆ. ಅದರಲ್ಲಿ ಸರ್ವಾಂಗೀಣವಾಗಿ ಸಾಧಿಸಬೇಕಾದಂತ ಸಂದರ್ಭ ಬಂದಾಗ ಶಿಸ್ತು ಮುಖ್ಯ. ಇದನ್ನು ಸಾಧಿಸಬೇಕಾದರೆ ನಮ್ಮಲ್ಲಿರತಕ್ಕಂತ ಆಲಸ್ಯವನ್ನು ಹೊಡೆದೋಡಿಸುವ ಸಲುವಾಗಿ ರಾಷ್ಟ್ರದ ನಾಯಕರು ಕೊಡತಕ್ಕಂತ ಕರೆಯನ್ನು, ರಾಷ್ಟ್ರದ ನಾಯಕರು ಕೊಡತಕ್ಕಂತ ಸಂದೇಶಗಳನ್ನು ಇವತ್ತು ಎಲ್ಲರೂ ಒಪ್ಪಿಕೊಂಡು ಅದರಂತೆ ನಡೆಯುವಾಗ, ಹೊರಗಿನ ಶತ್ರುಗಳಿಗಿಂತಲೂ ನಮ್ಮ ನೆರಳಿನಲ್ಲಿರತಕ್ಕಂತ ಶತ್ರುಗಳೇನಿದ್ದಾರೆ, ಅವರಲ್ಲಿ ಆಲಸ್ಯ ಎನ್ನತಕ್ಕಂತದ್ದು ಏನಿದೆ ಅದನ್ನು ಹೊಡೆದೋಡಿಸುವುದಕ್ಕೆ ಇವತ್ತು ಕಾರ್ಯಪ್ರವೃತ್ತರಾಗಿದ್ದೇವೆ. ಇವತ್ತು ಆಲಸ್ಯವನ್ನು ಹೊಡೆದೋಡಿಸುವುದಕ್ಕೆ ಪ್ರಯತ್ನ ಮಾಡದಿದ್ದರೆ ಭವ್ಯವಾದಂತ ಕರ್ನಾಟಕವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ ಎನ್ನುವಂತ ಮಾತನ್ನು ಇವತ್ತು ಎಲ್ಲರೂ ಒಕ್ಕೊರಲಿನಿಂದ ಹೇಳುತ್ತಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ನಮ್ಮ ಸರ್ಕಾರದವರು 4 ವರ್ಷಗಳ ಹಿಂದೆ ಆಡಳಿತ ವಹಿಸಿಕೊಂಡಿದ್ದಾಗ ಆರ್ಥಿಕ ಬೆನ್ನೆಲುಬು ಮುರಿದು ಬಿದ್ದು ಹೋಗಿತ್ತು. ರಾಜ್ಯದ ಬೊಕ್ಕಸ ಖಾಲಿಯಾಗಿ ಓವರ್ ಡ್ರಾಫ್ಟ್ ಇತ್ತು. ಇವತ್ತು ನಮ್ಮ ಅರ್ಥ ಮಂತ್ರಿಗಳು ಓವರ್ ಡ್ರಾಫ್ಟನ್ನು ತೀರಿಸಿ ರಾಜ್ಯದ ಆದಾಯವನ್ನು 10 ಪಟ್ಟು 100 ಪಟ್ಟು ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಇನ್ನು ಬೇಡಿ ಬೇಡಿದ ಇಲಾಖೆಗಳಿಗೆ ಬೇಡಿದ್ದನ್ನು ಕೊಡುತ್ತಿದ್ದಾರೆ. ಆದರೆ ಅವರು ಬೇಡಿದ್ದನ್ನು ಕೊಡಬೇಕಾದರೆ ಮೊದಲು ಯಾವುದೇ ಯೋಜನೆಯಾಗಲಿ ಅವರಿಗೆ ಮನವರಿಕೆಯಾದ ಮೇಲೆ ಅವನ್ನು ನೀಡುವುದಕ್ಕೆ ಅವರು ಪ್ರಯತ್ನಮಾಡುತ್ತಾರೆ. ಇವತ್ತು ಕಾಳೀ ನದಿ ಬಹಳ ದೊಡ್ಡ ಸಾಹಸದಂತ ಯೋಜನೆ. ಮಾನ್ಯ ಅರಸುರವರು ಆಗಾಗ್ಗೆ ಒಂದು ಮಾತನ್ನು ಹೇಳುತ್ತಾರೆ, "ನಿನ್ನ ಶಕ್ತಿಯ ಮೇಲೆ ನಿನಗೆ ಆತ್ಮವಿಶ್ವಾಸವಿರಲಿ ದೇವರು ನಿನ್ನನ್ನು ಕೈ ಬಿಡುವುದಿಲ್ಲ'' ಎಂದು. ಹಾಗೆಯೇ ಇವತ್ತು ಕಾಳಿ ನದಿ ಯೋಜನೆಯಂತವುಗಳನ್ನು ಧೈರ್ಯವಾಗಿ ಕೈಗೆತ್ತಿಕೊಂಡು, ಧೈರ್ಯದಿಂದ ಎಷ್ಟೇ ಕಷ್ಟ ಬರಲಿ ಹಿಡಿದ ಕೆಲಸವನ್ನು ಮಾಡಿಯೇ ತೀರಿಸುತ್ತೇವೆ ಎನ್ನತಕ್ಕಂಥ ಮನೋ ಧಾರ್ಢ್ಯ,

ವನ್ನು ಹೊಂದಿ ಕೆಲಸವನ್ನು ಮಾಡುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಅರಬ್‌ರಾಷ್ಟ್ರಗಳು ಇವತ್ತಿನ ದಿವಸ ನಮಗೆ ಸಹಾಯ ಮಾಡಲಿಕ್ಕೆ ಬರುತ್ತಿವೆ. ಇವತ್ತು ಕಾಳಿ ನದಿ ಕರ್ನಾಟಕಕ್ಕೆ ಒಂದು ಬೆಳಕನ್ನು ಕೊಡುವಸಲುವಾಗಿ, ಶಕ್ತಿಯನ್ನು ಕೊಡುವ ಸಲುವಾಗಿ ಇನ್ನು ಸ್ವಲ್ಪ ದಿವಸಗಳಲ್ಲಿಯೇ ಚಮತ್ಕಾರ ಮಾಡಿ ತೋರಿಸತಕ್ಕಂಥ ರೀತಿಯಲ್ಲಿ ಅಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿವೆ. ಕಾಳಿ ನದಿಯನ್ನು ಈಗಿನ ಸ್ಥಿತಿಯಲ್ಲಿ ಪ್ರತಿಯೊಬ್ಬ ಕನ್ನಡಿಗನೂ ನೋಡತಕ್ಕಂಥದ್ದು ಬಹಳ ಉತ್ತಮವೆಂದು ನನ್ನ ಅಭಿಪ್ರಾಯ. ಅಲ್ಲಿ ನಡೆಯುತ್ತಿರತಕ್ಕಂಥ ಸುರಂಗ ಮಾರ್ಗದ ಕೆಲಸ, ಅಲ್ಲಿ ಕೆಲಸ ಮಾಡುತ್ತಿರತಕ್ಕಂಥ ಕನ್ನಡಿಗರಾದ, ಕರ್ನಾಟಕದವರೇ ಆದ ತಂತ್ರಜ್ಞರು ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಿ ತೋರಿಸುತ್ತಿದ್ದಾರೆ.

ಇನ್ನು ಮಾನ್ಯ ಶ್ರೀ ಎಸ್ ವೈ. ಪಾಟೀಲರವರು ಬಹಳ ಕಳಕಳಿಯಿಂದ, ನೊಂದ ಮನಸ್ಸಿನಿಂದ ಅಪ್ಪರ್ ಕೃಷ್ಣಾ ಬಗ್ಗೆ ಹೇಳಿದರು. ಬಿಜಾಪುರ ಜಿಲ್ಲೆ ಕ್ಷಾಮಡಾಮರಗಳಿಗೆ ತುತ್ತಾಗತಕ್ಕಂಥ ಪ್ರದೇಶ. ಅಲ್ಲಿರತಕ್ಕಂಥ ಪ್ರತಿಯೊಂದು ಸಮಸ್ಯೆಗಳನ್ನು ಪ್ರತಿಯೊಬ್ಬ ಕನ್ನಡಿಗರೂ ಕಣ್ಣಾರೆ ಕಂಡಿದ್ದಾರೆ. ಆದುದರಿಂದ ಅಲ್ಲಿ ಶಾಶ್ವತವಾದಂಥ ಪರಿಹಾರ ಕಾರ್ಯಗಳು ಕೂಡಲೇ ಆಗಬೇಕಾಗಿದೆ. ಅಲ್ಲಿ ಸಣ್ಣಪುಟ್ಟ ಯೋಜನೆಗಳೂ ಕೂಡ ಆಗಿಲ್ಲ. ಆದುದರಿಂದ ಅಲ್ಲಿಗೆ ಯೋಜನೆಗಳನ್ನು ಹಾಕಿಕೊಂಡು ವಿಶ್ವಸಂಸ್ಥೆಯವರಿಂದ ಹಣ ಸಹಾಯವನ್ನು ಪಡೆದು, ವಾರ್ ಫುಟಿಂಗ್‌ನಲ್ಲಿ ಯಾವ ರೀತಿ ಒಂದು ಫೇಸ್ಡ್ ಪ್ರೋಗ್ರಾಮ್ ಹಾಕಿಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತೀರೋ ಹಾಗೆ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಮುಗಿಸುವುದಕ್ಕೆ ಸರ್ಕಾರದವರು ಆದ್ಯತೆ ಕೊಡಬೇಕೆಂದು ನಾನು ಸಹ ಈ ಸಂದರ್ಭದಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಈ ಭೂ ಸುಧಾರಣೆಯ ಬಗ್ಗೆ ಹೇಳುವುದಾದರೆ, ಇವತ್ತು ರೈತ ಒಂದು ಹೊತ್ತು ಊಟಕ್ಕೂ ಗತಿಯಿಲ್ಲದೆ ಭೂ ಮಾಲೀಕರ ಕೈಗೆ ಸಿಕ್ಕಿ ನರಳುತ್ತಿದ್ದಂಥವರನ್ನು ಹಾಗೂ ಶೋಷಣೆಗೆ ಒಳಗಾಗಿರತಕ್ಕಂಥವರನ್ನು ಋಣ ವಿಮುಕ್ತರನ್ನಾಗಿ ಮಾಡುವಂಥ ಕಾರ್ಯವನ್ನು ನಮ್ಮ ಸರ್ಕಾರದವರು ದಿಟ್ಟತನದಿಂದ ಮಾಡಿದ್ದಾರೆ. ಅವರಿಗೆ ರಕ್ಷಣೆಯನ್ನು ಕೊಡತಕ್ಕಂತ ಭಾರವನ್ನು ಇವತ್ತು ಸರ್ಕಾರದವರು ಹೊತ್ತುಕೊಂಡಿದ್ದಾರೆ.

ಇನ್ನು ನಮ್ಮ ರಾಜ್ಯದಲ್ಲಿ ಸರ್ಕಾರದವರು ವೃದ್ಧಾಪ್ಯ ವೇತನವನ್ನು ಕೊಡುತ್ತಿದ್ದಾರೆ. 40 ರೂಪಾಯಿಗಳ ಸಂಭಾವನೆಯನ್ನು ಶ್ರೀಮತಿ ಇಂದಿರಾಗಾಂಧಿಯವರ ಪೆನ್‌ಷನ್‌ನನ್ನು ಇವತ್ತು ಅವರು ಪಡೆಯುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.— ಶ್ರೀಮತಿ ಇಂದಿರಾಗಾಂಧಿಯವರ ಪೆನ್‌ಷನ್ ಎಂದರೆ ಏನು ?

ಶ್ರೀ ಐ.ಜಿ. ಸನದಿ .— ಯಾರು ನಿರ್ಗತಿಕರಾಗಿರತಕ್ಕಂಥವರು ಇದ್ದಾರೆ ಅವರಿಗೆ ನಮ್ಮ ಸರ್ಕಾರದವರು 40 ರೂಪಾಯಿಗಳ ಸಂಭಾವನೆಯನ್ನು ಕೊಡುತ್ತಿದ್ದಾರೆ. ಅವರ ಹತ್ತಿರ ತಾವು ಯಾರಾದರೂ ಹೋಗಿ ಪ್ರಶ್ನೆ ಮಾಡಿದಾಗ ಶ್ರೀಮತಿ ಇಂದಿರಾಗಾಂಧಿಯವರ ಕೃಪೆಯಿಂದ ನಮಗೆ ಸಂಭಾವನೆ ಸಿಕ್ಕಿತು ಎಂದು ಜನ ಹೇಳುತ್ತಾರೆಂದು ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರಲ್ಲಿ ಅರಿಕೆ ಮಾಡಬಯಸುತ್ತೇನೆ.

ಇನ್ನು ರಾಜ್ಯದಲ್ಲಿ ಕೆಲವು ವಿಧವೆಯರು ಇದ್ದಾರೆ. ಅವರು ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ನಡಿ ಪಾಲು ಆಗುವವರಿರುತ್ತಾರೆ. ಅಂತಹ ವಿಧವೆಯವರಿಗೆ ಕಾಯಕ ಮಾಡಿಕೊಂಡು ಇರಲು ಸರ್ಕಾರ ಯಾವುದಾದರೂ ಒಂದು ರೀತಿಯಲ್ಲಿ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಕನಿಷ್ಠಪಕ್ಷ ಅವರಿಗೆ ತಿಂಗಳಿಗೆ ಸುಮಾರು ಒಂದು ಐವತ್ತು ರೂಪಾಯಿಗಳಾದರೂ ಕೂಡ ಸಿಗುವಂತಹ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ. ಈಗ ಜೀವ ವಿಮಾ ಕಾರ್ಪೊರೇಷನ್‌ನಲ್ಲಿ ಒಂದು ಸ್ಕೀಮು ಜಾರಿಗೆ ತಂದಿದ್ದಾರೆ, ಅದು ಸುಮಾರು ತಿಂಗಳಲ್ಲಿ ಐದು ಅಥವಾ ಹತ್ತು ರೂಪಾಯಿಗಳನ್ನು ಹಿಡಿದುಕೊಳ್ಳತಕ್ಕದ್ದು, ಅದು ಒಂದು ಸೌಭಾಗ್ಯ ನಿಧಿಯೆಂದು ಮಾಡಿದ್ದಾರೆ. ಅಲ್ಲದೇ ಸಧ್ಯದಲ್ಲಿ ನಿರ್ಗತಿಕ ಮಹಿಳೆಯರಿಗೆ ಐವತ್ತು ರೂಪಾಯಿಗಳವರೆಗೆ ಪೆನ್‌ಷನ್ ಕೊಡಬೇಕೆಂದು ಮಾಡುತ್ತಿದ್ದಾರೆ.

ಇನ್ನು ಉದ್ದಿಮೆ ರಂಗಗಳ ಬಗ್ಗೆ ಹೇಳುವುದಾದರೆ, ಅವರು ಯಾವ ಒಂದು ವರ್ಗದಲ್ಲಿಯೇ ಕೆಲಸ ಮಾಡುತ್ತಿರಲಿ, ಅವರು ಒಂದು ಬಸ್‌ಸ್ಟಾಂಡಿನಲ್ಲಿಯಾಗಲಿ, ಅಥವಾ ಒಂದು ರೈಲ್ವೆ ಸ್ಟೇಷನ್‌ನಲ್ಲಿಯಾಗಲಿ ಕೆಲಸ ಮಾಡತಕ್ಕವರ ಸಂಖ್ಯೆ ಬಹಳ ಇದೆ. ಅವರ ಕ್ಷೇಮಾಭಿವೃದ್ಧಿಯ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈಗ ಲೇಬರ ಮಿನಿಸ್ಟರ್ ಅವರು ಇಲ್ಲಿಯೇ ಇದ್ದಾರೆ, ಇದು ಕಾರ್ಮಿಕ ಇಲಾಖೆಯ ಕಕ್ಷಿಗೆ ಒಳಪಡುವುದಿಲ್ಲ ಎಂದು ಕೇಳಿಬರುತ್ತಿದೆ. ಈಗ ಅವರು ಒಂದು ಟ್ರಕ್ ಲೋಡ್ ಮಾಡಿದಾಗ ಮಾತ್ರ ಅವರಿಗೆ ಏನಾದರೂ ಒಂದು ಸ್ವಲ್ಪ ಹಣ ದೊರೆಯುತ್ತಿದೆ ಇಲ್ಲದಿದ್ದರೆ ಅವರಿಗೆ ಏನು ಸಿಕ್ಕುವುದಿಲ್ಲ. ಅವರಿಗೆ ಟ್ರಕ್ ಲೋಡ್ ಮಾಡುವುದಕ್ಕೆ ಅವಕಾಶ ದೊರೆಯಲಿಲ್ಲ ಎಂದರೆ ಅವರು ಯಾವ ರೀತಿಯಲ್ಲಿ ತಮ್ಮ ಜೀವನೋಪಾಯವನ್ನು ಸಾಗಿಸಬೇಕು ಎಂದು ಯೋಚನೆ ಮಾಡಿದರೆ ಅವರ ಜೀವನಕ್ಕೆ ಏನೂ ಸಿಕ್ಕುವುದಿಲ್ಲ. ಏಕೆಂದರೆ ನಾನು ಇದೇ ಬೆಂಗಳೂರಿನಲ್ಲಿ ನೋಡಿದ್ದೇನೆ ಅನೇಕ ಬಡ ಜನರು ಒಂದು ಎರಡಾಣೆಗೆ ಅನ್ನ ತೆಗೆದುಕೊಂಡು ತಿನ್ನುತ್ತಿರುತ್ತಾರೆ. ಅದನ್ನು ನೋಡಿದರೆ ತುಂಬಾ ಬೇಜಾರಾಗುತ್ತದೆ. ಇಂತಹವರಿಗೆ ಸರ್ಕಾರ ಒಂದು ಹೊಸ ವಿಧಾನ ಕಂಡು ಹಿಡಿಯಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದು ಹುಬ್ಬಳ್ಳಿ ಧಾರವಾಡ ಬಿಟ್ಟಿದೆ ಎಂದು ನಾನು ತಿಳಿದುಕೊಂಡಿಲ್ಲ, ಈಗ ಅಲ್ಲಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಮಾಡಬೇಕು ಎಂಬ ಸಲುವಾಗಿ ಹಿಂದುಳಿದ ಜಿಲ್ಲೆ ಎಂದು ಘೋಷಣೆ ಮಾಡಿದ್ದು ಔದ್ಯಮಿಕ ರಂಗದಲ್ಲಿ ಪ್ರಗತಿ ಸಾಧಿಸಲಿಕ್ಕೆ ಸರ್ಕಾರ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಎಷ್ಟೋ ದಿನಗಳ ಬೇಡಿಕೆಯಾದಂತ ವಿಮಾನ ನಿಲ್ದಾಣಕ್ಕೆ ನಾಲ್ಕು ನೂರು ಕೋಟಿ ರೂಪಾಯಿಗಳ ಬೇಡಿಕೆ ಇತ್ತು. ಆದರೆ ಅಲ್ಲಿ ಏಳೆಂಟು ಲಕ್ಷ ರೂಪಾಯಿಗಳು ಸಹ ಖರ್ಚಾಗಲಿಲ್ಲ. ಅಲ್ಲಿಗೆ ಏನು ನ್ಕಾಶೆಗಳು ಬಂದಿತ್ತು ಅವುಗಳನ್ನು ಪಿಡಬ್ಲ್ಯೂಡಿ ಇಲಾಖೆಗೆ ಕಳುಹಿಸಿದರು, ಅಲ್ಲಿದ್ದ ಇಂಜಿನಿಯರುಗಳನ್ನು ವಾಪಸ್ಸು ಕರೆಯಿಸಿಕೊಂಡರು ಹುಬ್ಬಳ್ಳಿ, ಧಾರವಾಡ ಮಾರ್ಗವಾಗಿ ಯಾರಾದರೂ ಪರದೇಶದವರೂ ಬಂದರೆ, ದೊಡ್ಡ ದೊಡ್ಡ ನಾಯಕರು ಬಂದರೆ ಅಲ್ಲಿ ಇಳಿಯಲು ಅನುಕೂಲವಾಗುತ್ತದೆ. ಇಪ್ಪತ್ತು ಅಂಶಗಳ ಕಾರ್ಯಕ್ರಮ ಪ್ರಚಾರ ಮಾಡುವಾಗ ಹುಬ್ಬಳ್ಳಿಯಲ್ಲಿ ಒಂದು ವಿಮಾನ ನಿಲ್ದಾಣ ಸ್ಥಾಪಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಾಯ ತರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇಷ್ಟು ಕೆಲಸ ಮಾಡಿಸಿದರೆ ಹುಬ್ಬಳ್ಳಿ ಧಾರವಾಡ ಪ್ರದೇಶಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ತಿಳಿಸುತ್ತೇನೆ. ಏಕೆಂದರೆ ಇದಕ್ಕೆ ಪ್ರಿಲಿಮಿನರಿ ಸರ್ವೆಯಾಗಿದೆ ಆದುದರಿಂದ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಈ ದಿಸೆಯಲ್ಲಿ ಹೆಚ್ಚು ಒತ್ತಾಯ ತರಬೇಕು ಎಂದು ಮತ್ತೊಮ್ಮೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಷಯ ಹೇಳುವುದಾದರೆ ಸರ್ಕಾರದವರು ಏನು ಮಾಡಿದರು ಎಂದರೆ ವರ್ಲ್ಡ್ ಬ್ಯಾಂಕಿನಿಂದ ಸಾಲ ಪಡೆದು ಕ್ಷೀರ ಅಭಿವೃದ್ಧಿ ಮಾಡಬೇಕೆಂದು, ಒಬ್ಬೊಬ್ಬ ಬಡವರಿಗೆ ಒಂದೊಂದು ಹಸುವನ್ನು ಕೊಟ್ಟು ಅಭಿವೃದ್ಧಿಪಡಿಸಬೇಕೆಂದು ಮಾಡಿದರು ಅದಕ್ಕೆ ವರ್ಲ್ಡ್ ಬ್ಯಾಂಕಿನಿಂದ 50 ಕೋಟಿ ರೂಪಾಯಿ ಪಡೆದಿದ್ದನ್ನು ನಾವು ಓದಿದ್ದೇವೆ. ಎಲ್ಲಾ 50 ಕೋಟಿ ರೂಪಾಯಿಗಳನ್ನು ಬೆಂಗಳೂರು, ತುಮಕೂರು, ಕೋಲಾರ, ಮಂಡ್ಯ ಚಿಕ್ಕಮಗಳೂರು, ಹಾಸನ, ಮೈಸೂರು ಜಿಲ್ಲೆಗಳಿಗ ಮೀಸಲಾಗಿದೆ ಎಂದು ನನ್ನ ಸ್ನೇಹಿತರು ವ್ಯಕ್ತ ಮಾಡಿರುವ ರೀತಿಯಲ್ಲಿ ತಿಳಿಯಿತು. ಏಕೆಂದರೆ ಹುಬ್ಬಳ್ಳಿ, ಧಾರವಾಡ ಅಥವಾ ಬೆಳಗಾಂ ಜಿಲ್ಲೆಯು ಕ್ಷೀರ ಕ್ಷೇತ್ರದಲ್ಲಿ ಹಿಂದುಳಿದಿದೆ ಎಂದು ನಾನು ತಿಳಿದುಕೊಂಡಿಲ್ಲ. ಹೋದ ವರ್ಷದ ಸಂಖ್ಯೆ ನೋಡಿದರೆ 40 ಲಕ್ಷಕ್ಕೂ ಹೆಚ್ಚು ಲೀಟರು ಹಾಲು ಬೆಳಗಾಂಗೆ ಪೂರೈಕೆಯಾಗುತ್ತಿತ್ತು. ಇನ್ನು ಎರಡನೆಯದು ಹುಬ್ಬಳ್ಳಿ, ಧಾರವಾಡದಲ್ಲಿರತಕ್ಕ ಸ್ಲಮ್ಸ್ ಬಗ್ಗೆ ಹೇಳುವುದಾದರೆ ಅವರು ಇರತಕ್ಕ ಸ್ಥಳಗಳು ಬಹಳ ಕೊಳಚೆಯಿಂದ ತುಂಬಿರುತ್ತದೆ, ಅಲ್ಲಿ ಒಂದು ನಿಮಿಷ ಕೂಡ ವಾಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಆ ರೀತಿಯಲ್ಲಿ ಇರುತ್ತದೆ. ಸರ್ಕಾರದವರು ಸ್ಲಮ್ ಕ್ಲಿಯರನ್ಸ್ ಬಗ್ಗೆ 43 ಲಕ್ಷ ರೂಪಾಯಿಗಳವರೆಗೆ ಕೊಟ್ಟರು ಕೂಡ ಇನ್ನು ಸ್ಲಮ್ ಕ್ಲಿಯರನ್ಸ್ ಆಗಿಲ್ಲ. ಕೂಡಲೇ ಅಲ್ಲಿರತಕ್ಕ ಜನಗಳಿಗೆ ವಸತಿ ಸೌಕರ್ಯ ಒದಗಿಸಬೇಕು ಎಂದು ಹೇಳುತ್ತೇನೆ. ಮೊನ್ನೆ ತಾನೇ ಸರ್ಕಾರ ಹುಬ್ಬಳ್ಳಿಯಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಮಾಡಿದೆ, ಅರ್ಬನ್ ಸೀಲಿಂಗ್ ಮಾಡಿದ್ದಾರೆ, ಅದರ ಕಕ್ಷಿಯಲ್ಲಿ ಬರತಕ್ಕದ್ದು ಶ್ರೀಮಂತರ ಭೂಮಿ ಅದು ಪರಭಾರೆಯಾಗದಂತೆ ವಶಪಡಿಸಿಕೊಂಡು ನೋ ಲಾಸ್ ನೋ ಪ್ರಾಫಿಟ್ ಎನ್ನುವ

ಹಾಗೆ ಸಹಾಯ ಮಾಡಿದರೆ ಬಡವರಿಗೆ, ಕೃಷಿಕಾರ್ಮಿಕರಿಗೆ, ದೀನದಲಿತರ ಉದ್ಧಾರಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಇವೊತ್ತಿನ ದಿವಸ ನಮ್ಮ ರಾಜ್ಯಪಾಲರಾದ ದೀಕ್ಷಿತ್ ಅವರು ನಮ್ಮ ಎದುರಿಗೆ ತಮ್ಮ ಭಾಷಣ ಏನು ಮಂಡಿಸಿದ್ದಾರೆ ಅದಕ್ಕೆ ಬೆಂಬಲ ಕೊಟ್ಟು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI B. B. SAYANAK (Belgaum).—Mr. Chairman Sir, I rise to oppose the Motion moved by Mr. K. Puttaswamy on the Governor's address. At the outset, I should say that there is no mention about the Maharashtra-Karnataka border dispute by the Governor. When this Governor was the Home Minister of India he has made a statement in the Parliament that they would solve this border dispute before the next Parliament election. It has been endorsed by the Prime Minister. In addition to this, the present Home Minister Sri K. Brahmananda Reddy has assured in the Paliament that they will solve this border dispute before the Parliament election. But the Parliament election has been postponed by one year. I want to request the Central Government that though they have postponed the parliament Election for one year, they should not postpone the Solution of this border issue. They must solve this issue early. If they solve this issue early there will be national integration. At present there is bitterness between Kannada and Marathi people in border area. So, it must be solved once for all.

MR. DEPUTY SPEAKER (in the Chair.)—Kannada is compulsory in all walks of life. I have no grudge against Kannada language. That is my sister language but the Central Government has given a direction to the State Government that they must maintain the status quo in the border areas until the border dispute is solved. Even in courts, this Kannada language is made compulsory. Therefore, I request the Government to maintain the status quo, in the border areas.

In his address, the Governor has stated as follows :—

> "It is my earnest hope that we shall all work together in a spirit of co-operation and harmony and thus make our contribution to the progress and advancement of Karnataka."

I am of the opinion that the opposition and my party, Maharashtra Ekikarana Samithi are prepared to co-operate with the Government but the Government is not willing to take their co-operation. The Government have constituted so many Committees but they put the same one or two persons to all the Committees. I would like to mention here that there is a State Level Committee Karnataka State Urban Water and Drainage Committee. In that committee, one Mr. Shivaji Kaketkar, who was our man earlier and now he is in Congress, has been nominated. He has studied upto IV standard. He

is in various Committees like R.T.A. Committee the City Improvement Trust Board, the Advisory Committee to Administrator etc., Similarly, one Mr. N.A. Hanamannavar, who has studied upto IV standard in Marathi has been nominated to various Committees and a Chairman of the City Improvement Trust Board.

SRI R. D. KITTUR.—He has got very good experience.

SRI B. B. SAYANAK.—I know better than the Honb'le Minister.

SRI A. A. DESAI.—Mr. Kamaraj has studied upto IV standard.

SRI B. B. SAYANAK.—I know Mr. Kamaraj much better than any other person.

SRI D. B. KALAMALKAR.—That man is an experienced person. Experience counts more than anything else.

SRI B.B.SAYANAK.—You have no right to talk about Mr.Kamaraj. Here, a person who has studied upto IV standerd has been appointed as Chairman of the City Improvement Trust Board. He has been appointed as a Member of the Mat-Maruti Extension Scheme He is in so many Committees. There are so many experienced and highly educated persons in Belgaum. Why did the Government appoint only these two persons to all Committees,

SRI M. S. KRISHNAN.—I think there are number of slums in Belgaum and he is the only person who knows about the slums development. Therefor, they have appointed this person.

SRI B. B. SAYANAK.—The Governor has stated as follows :—

> "Last year, when my predecessore, Shri Mohanlal Sukhadia, addressed you, he expressed the hope that there would be a "change for the better" during 1975. This has come about, chiefly due to the dynamic leadership provided by our Prime Minister in declaring a state of national emergency and announcing the twenty-point economic programme."

I do concede that the Prime Minister is a dynamic personality. She is a woman with guts. She is a great politician and statesman. I do not agree that because of the twenty-point programme and the emergency, there is a change for the better. I would like to say that the nature has come to your rescue. Nature has helped you. We had a very good rains and we got bumper crops. We must not forget the help renderd by the nature.

Regarding emergency, do not say anything because my problem is restricted to the border disputes. I have supported the Twenty-Point Programme. Even before the proclamation of emergency, there were so many twenty-point programmes, but I don't bother about it.

But, I would like to say that the Government has arrested some persons during this emergency under M. I. S. A. Some persons means, some non-Kannada speaking people. The Government has arrested not Kannada speaking peopel in Belgaum under the guise of Matka gambling and Kannada persons who have been doing this matka gambling are not arrested. Why did you discriminate between non-kannada persons and kannada speaking oersons while arresting the matka people.

I would like to bring it to the notice of the House that one Mr. Ram Apte has been arrested under M. I. S. A They have not treated him well in Belgaum. I told the doctor that he had already lost his one eye in his childhood and is going to lose his second eye also if proper treatment is not given. I met the Civil Surgeon, D. I. G and S. P and told them to send this man to Minto Hospital, Bangalore. They told me that they will send him to Bangalore Central Jail for treatment but no treatment has been given uptil now to this gentleman. This is the treatment given to people arrested under M.I.S.A ? I am not defending the people who have been arrested under M. I.S.A, but only requesting the Government to see these persons on humanitarian ground.

As regards procurement of food grains, I would like to say something. This year, we got good crops. Our people are paying the levy willingly but in Vangharade village belgaum Taluk, one person whose name is Ravalu Parsu Gulav had given 2 quintals and 20 K Gs but as against the demand of 3 quintals and 90 K.Gs.but when he had gone to Yellamma Fair, the Tashildar went to this village and broken the door open and took two bags of paddy seeds from his house, Is this a way to harass the agriculturists Not only in this case, in so many cases, the Officers have entered the house of the agriculturists and taken the seeds, Even in 1974-75, in Kadoli, the agriculturists have not paid some quantity of levy say 5 K Gs, 6 K Gs and 2 K Gs In those cases also, the Police Department has booked the cases, Why did you fire cases against these agriculturists who have not given a levy of 3 K.Gs or 5 K Gs I approached the Deputy Commissioner, and the Divisional Commissioner but they told me that they are helpless

It is the duty of the Government not to harass the agriculturists.

4-00 P.M.

Regarding land Reforms, I am very sorry I do not know what are the decisions taken by the land reform tribunals in other areas. But in my area Sri Sardesai and Patil are also theresome persons collecting money. A Congress M.P. has collected signatures and sub-

mitted to the Chief Minister. One doctor of Khanapur was troubling the Khanapur people People demanded that he should be removed. One Vasant Patil was removed from the tribunal and in his place one Angadi, a congressman was taken ; Khanapur in Belgaum a Harijan is dropped and a man against whom there are so many complaints is given a chance. This is the fate of the land tribunals, Regarding the sites you are giving to the siteless persons-weaker sections and scheduled Castef and Scheduled Triblef people, I must congratulate you ; you have even started constructing the houses under the Janatha Housing Scheme But the government is starting the construction late, in the month of March and are not going to complete these buildings before monsoon, ie., April. Last year so many Harijans had constructed buildings with the aid of the Government money. The houses have collapsed in the rainy season. Not only this. There is a colony for persons who are wandering here and there. That colony is not in a good condition. There are no water facilities and while the Government is going to construct houses for the poor and down trodden Harijans and girijans, what are the Municipal authorities doing in Belgaum ? So many have constructed houses without the permission of the municipality. Why have not the municipality taken objection at the beginning. After 4–5 years, municipal authorities are going to demolish the houses. Last month, the municipal authorities have demolished 20 houses. Is this the way to help them ? In Bombay there are so many huts ; they are not going to demolish them but they are going to construct. I request the government to maintain the status quo and see that justice is done to them. Don't harass the poor people by demolishing the buildings.

Regarding the co-operative movement, I know there is an ordinance and any man who applies to the society is deemed to be a member. There are so many factions in Muthsuhalli village. The ruling man is not allowing a person to be a member. There are two societies Muchandi village in Belgaum Taluk, which are not taking sugar to the villages but they are taking money with the consent of the department. The same case with Vaghavade society, which is not taking sugar to the village. This is not the correct policy. Government should take notice of this.

Regarding electricity and green revolution, Mr. H.M Channabasappa is here. Government is very particular about giving connection to pump set You have not given connection to water supply. To Santibastwad Village. You have said they have not paid the amount. They have deposited the amount.

SRI H. M. CHANNABASAPPA —They have not obtained power at all. They have not agreed to pay 350 rupees which is the minimum. Their depositing 10 per cent is different. If electricity has to be supplied, they must agree to pay the line minimum. Why do you mislead the House ?

SRI B. B. SAYANAK.—I am very sorry. Even the Junior Engineer has told me.

SRI H. M. CHANNABASPPA —I am telling you as the Minister and you are depending on the Engineer. I am speaking with authority.

SRI B. B. SAYANAK.—Whatever the case, the Electricity Board has not given connection to this village.

SRI H M CHANNABASAPPA.—How can they give ?

SRI B. B. SAYANAK.—When the electricity has gone to the village, why are they not giving ?

SRI H. M. CHANNABASAPPA.—Giving 10 per cent of the total estimated cost under the N.R.W. scheme is different. Your agreeing to pay 350 rupees as line minimum to the Electricity Board is to get power. We have done our job. If you agree to pay 350 rupees we will give connection.

SRI B. B. SAYANAK.—But last week the Electricity Board has given connection to water supply. Another thing. In that village 10 persons have purchased electricial motors and pump set and they have taken loans from the State Bank of India and from the Revenue Banks ; in the year 1973-74 they paid the loans. But these persons are not getting the electricity. Is this the green revolution ?

SRI H. M. CHANNABASAPPA.—As a responsible member of this House, you must understand the rules connected with the Electricity Board. Without knowing the rules; why do you go on speaking ? They do not conform to the rules. All formalities have to be observed. It cannot be supplied to everybody who has the pump sets and motors. I will give you a copy of the Rules; You please study. If they have completed all formalities and still the Electricity Board has not given, well. I can understand.

SRI B. B. SAYANAK.—The Family Planning programme has been intensified. But according to me it is not working properly in rural areas. There is one case by name Smt Maya Mahadev Kalambale. She was operated. Tubectomy operation was done on 16th November 1972. She was pregnant on 24th August 1975. The same Doctor operated that lady. Again she was pregnant. Third time the Civil Surgeon Shri Deshapande operated her. I do not understand why these things are happening under Family Planning. Why the Government is not taking action against that Doctor.

Regarding Primary School in Belgaum City, the Marathi Schools have no buildings. There was a big school building a Basavangalli, Shahapur. Sangli State has constructed a building and that building has collapsed now. The then Deputy Commissioner has assured the citizens they will construct the building. But they have not constructed it. There are so many cases like this. This is the fate of the Primary School boys and girls. No buildings are there and the children will have to suffer.

SRI H. M. CHANNABASAPPA.—Is this the only case ?

SRI B. B. SAYANAK —There are so many cases like this. There are two Schools for Marathi boys and girls. in Bakani Mandai The Government has asked a Kannada School to run in the same building during morning hours. Not only this, there is a Marathi Training College at Belgaum. The teachers of the Training College have not got salary for the last 8 months. I have given a Calling Attention Notice to-day on this point I have sent a telegram to the Prime Minister bringing to her notice that the salary has not been disbursed for the last 8 months.

SRI H. M. CHANNABASAPPA.—What for ? I can understand sending telegrams to Chief Minister and the Education Minister of the State. There is no need for sending a telegram to the Prime Minister.

SRI B. B. SAYANAK.—I have sent telegram to the Chief Minister. and Education Minister. But nothing has happened. For 8 months the teachers have not been paid. They are starving.

SRI H. M. CHANNABASAPPA.—What exactly happened, we do not know.

SRI B B. SAYANAK.—Regarding books, there are Nationalised Marathi books. But these books are not at all available in market. Hindi Book for VI standard is not available. Kannada teachers are on the text book committee. One Sri Goankar, a kannada man, is the Chairman of one of the Committees for IIIrd standard Marathi Book.

SRI H. M CHANNABASAPPA.—Does he not knew Marathi ?

SRI B. B. SAYANAK.—No. There are so many Marathi people. They have not been put on the Committee. Those who do not know Marathi, have been put on the Committee.

One Mr. Sulage-patil who is the Principal of the Government Junior College Belgaum is also a Kannada man, is on the committee for scrutinising the IV Standard Book.

SRI H. M. CHANNABASAPPA —Does he not know Marathi ? Please confirm my point ?

SRI B. B. SAYANAK.—No. He does not know Marathi. I am repeating that. The books are not available.

Loans taken by the weaker section of the people have been liquidated. These poor people have taken Takavi Loan from Government and the Government is the biggest creditor. Why not the Government take a decision to write off the Takavi loan ? Harijans and Girijans have taken loan from the Bank. I want to ask you why you are not going to write off these loans. It is the foremost duty of the Government to do justice to the weaker section.

Regarding your annual plan for improvement of roads, what has happened to roads in the border areas ? You have not taken up these roads for improvement and construction, What is the fate of Kankumbi-Tamboti Jangoti Road ? What sort of treatment you are giving to these road ? People have no road to go to Khanapur and also to Belgaum.

SRI H. M. CHANNABASAPPA.—I had gone to Khanapur. There is a beautiful road.

SRI B. B. SAYANAK.—At the time of emergency I am sorry to pass a remark about the behavior of Kannada people at the time of celebration of Nadahabba. There was a proccession under the protection of Police. The slogan of the processionists was 'Bolo Bolo Kannada' "Bolo-Nahiton Belgaum chodo" 'Man does not know Kannada must quite Belgaum'. These are the slogans they were shouting emergency. I do not understand why the officers kept quiet. Do they want the non-kannada people to quit the area ? Do they want Sri Sayanaka also to quit. There is a theatre belonging to a Persian Lady. There were posters in Kannada English and Marathi the Kannada boys tarred the English add Marathi and they have written a letter to that lady saying that if you are not going to run Kannada picture on that 1st of November, your theatre will be burnt. This is the attitude of the Kannada People in Belgaum at the time of emergency. When that is the position, think of the fate of the minorities. They are not safe aud they cannot get on with this kind of attitude of Kannada people.

Sir, just now my friend Sri Patil said that members of Minority communities ran away to Maharashtra and the Maharasatra Government is giving protection to them. What does it mean ? When there is an Emergency, when you want co-operation from others, you must give co-operation to others.

SRI H. M. CHANNABASAPPA (Minister for Public Works).—There are so many minority communities in Karnataka. Every Karnataka community is satisfied except Sri Sayanak. all people feel very safe except Sri Sayanak. Anyway, I am glad my friend Sri Sayanak is making hectic efforts to show his existence.

Sri B. B. SAYANAK.—Regarding nationalisation of Contract Carriages, I must congratulate the Government. We tried our level best to persuade the Government to take over the Contract Carriages. At that time, I do not know why the Govrnment was very adamant. According to my knowledge, only in January hundreds of permits have been issued to the Contract Carriages and people were forced to pay the tax. before 20th January 1976, Abruptly on 30th January 1976 the Government issued an Ordinance to take over the Contract Carriages. Is it not an injustice done to them? This is not good.

With these words, I thank the Speaker and conclude my speech.

† ಶ್ರೀ ಬಿ. ಬೈರಪ್ಪಾಜಿ, (ತುರುವೇಕೆರೆ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ನೂತನ ರಾಜ್ಯಪಾಲರು ಮಾಡಿದಂತ ಭಾಷಣದ ಮೇಲೆ ವಂದನೆಯನ್ನು ಅರ್ಪಿಸತಕ್ಕಂಥ ಒಂದು ಕಾರ್ಯವನ್ನು ಶ್ರೀಮಾನ ಪುಟ್ಟಸ್ವಾಮಿಯವರು ಮಾಡಿದ್ದಾರೆ. ಅದಕ್ಕೆ ನಾನು ಬೆಂಬಲವನ್ನು ಸೂಚಿಸುತ್ತಾ ಸರ್ಕಾರದವರು ಇದುವರೆಗೆ ಮಾಡಿರತಕ್ಕಂಥ ಕಾರ್ಯಗಳನ್ನು ಎರಡು ಮಾತುಗಳಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತುರ್ತುಪರಿಸ್ಥಿತಿ ಜಾರಿಗೆ ಬಂದ ನಂತರ ಈ ದೇಶದಲ್ಲಿ ಅನೇಕ ಉತ್ತಮವಾದಂಥ ಕಾರ್ಯಗಳು ಅವ್ಯಾಹತವಾಗಿ ನಡೆಯುತ್ತಿವೆ. ಈ ಮಾತನ್ನು ವಿರೋಧಪಕ್ಷದ ಸದಸ್ಯರು ಸಹ ಒಪ್ಪುತ್ತಾರೆಂದು ನಾನಾದರೂ ಭಾವಿಸುತ್ತೇನೆ. ಇವೊತ್ತು ಸರ್ಕಾರದವರು ಒಳ್ಳೆಯ ಕೆಲಸಗಳನ್ನು ಮಾಡಿದ್ದರೆ ಒಳ್ಳೆಯದನ್ನು ಮಾಡಿದ್ದಾರೆಂದು ಹೇಳತಕ್ಕಂಥ ಕೆಲವು ಸದಸ್ಯರು ವಿರೋಧಪಕ್ಷದಲ್ಲಿದ್ದಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಅಂತಹ ಕೆಲವು ಸದಸ್ಯರು ಒಳ್ಳೆಯ ಮಾತುಗಳನ್ನು ಸಹ ಹೇಳಿದ್ದಾರೆ. ಅವರೆ ಕೆಲವರು ತಮ್ಮ ಮಾಮೂಲು ಧಾಟಿಯಲ್ಲಿಯೇ ಮಾತನಾಡಿದ್ದಾರೆ. ಶ್ರೀಮಾನ ಹನುಮೇಗೌಡರು ಮಾತನಾಡುವಾಗ ಮಾಮೂಲಿನಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಉಪಾಧ್ಯಕ್ಷರು.—ಅವರು ಚೆನ್ನಾಗಿ ಮಾತನಾಡಿದ್ದಾರೆ. ಅವರ ಭಾಷಣವನ್ನು ಎಲ್ಲರೂ ಕೇಳಿದ್ದಾರೆ.

ಶ್ರೀ ಭಿ. ಬೈರಪ್ಪಾಜಿ.—ಈ ದೇಶದಲ್ಲಿ ತುರ್ತುಪರಿಸ್ಥಿತಿ ಜಾರಿಯಲ್ಲಿ ಬಂದನಂತರ ನಮ್ಮ ಪ್ರಧಾನಮಂತ್ರಿಯವರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಎಲ್ಲ ವರ್ಗದ ಜನತೆಯ ಹಿತವನ್ನು ಕಾಪಾಡತಕ್ಕಂಥ ರೀತಿಯಲ್ಲಿ ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಕೈಕೊಂಡಿದ್ದಾರೆ. ಈ ಇಪ್ಪತ್ತು ಅಂಶಗಳ ಕಾರ್ಯಕ್ರಮಗಳ ಪೈಕಿ ನಾನು ಬಹುಮುಖ್ಯವಾದಂಥ ಕೆಲವೊಂದು ಅಂಶಗಳ ಪೈಕಿ ಹೇಳಬಯಸುತ್ತೇನೆ. ಈ ಸಭೆಯಲ್ಲಿ ಕೆಲವು ಮಾನ್ಯ ಸದಸ್ಯರು ಕಳೆದ ಅನೇಕ ವರ್ಷಗಳಿಂದ ಸದಸ್ಯರಾಗಿ ಮುಂದುವರೆದು ಹೆಚ್ಚಿನ ಅನುಭವವನ್ನು ಪಡೆದಿದ್ದಾರೆ. ಅಂತಹವರು ಆ ಕಡೆಯಲ್ಲಿಯೂ ಇದ್ದಾರೆ ಮತ್ತು ಆಡಳಿತ ಪಕ್ಷದ ಕಡೆಯೂ ಇದ್ದಾರೆ. ಅಂತಹವರನ್ನು ನಾನು ಕೇಳುವುದೇನೆಂದರೆ, ಇಂದು ಏನೂ ಇಲ್ಲದಿರತಕ್ಕಂಥ ಒಬ್ಬ ಸಂಸಾರಿಕ ಭಿಕಾರಿಯಾಗಿ ಸಾಯಬಾರದು, ಅವನಿಗೆ ತನ್ನದೇ ಆದಂಥ ಒಂದು ಮನೆ ಇರಬೇಕು ಎಂದು ಸರ್ಕಾರ ನಿರ್ಧಾರಮಾಡಿ ಅವರಿಗೆ ಉಚಿತವಾಗಿ ನಿವೇಶನಗಳನ್ನು ಕೊಟ್ಟು, ತನ್ಮೂಲಕ ಅವರೆಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ಏನು ಹಾಕಿಕೊಂಡಿದೆ ಇಂತಹ ಒಂದು ಕಾರ್ಯಕ್ರಮವನ್ನು ಈ ಹಿಂದಿನ ಸರ್ಕಾರಗಳು ಜಾರಿಗೆ ತರಲು

ಏನಾದರು ಯೋಜನೆ ಮಾಡಿದ್ದಾರೇ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಈಗಿನ ಸರ್ಕಾರದವರು ಇಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವುದರ ಮೂಲಕ ಈಗಾಗಲೇ 5 ಲಕ್ಷ ಜನರಿಗೆ ಸೈಟುಗಳನ್ನು ಹಂಚಿದ್ದಾರೆ. ಇನ್ನೂ ಎರಡು ಲಕ್ಷ ಸೈಟಗಳನ್ನು ಹಂಚುವವರಿದ್ದಾರೆ. ಇಂತಹ ಒಂದು ಕಾರ್ಯಕ್ರಮ ಜಾರಿಗೆ ಬಂದಿರುವುದಕ್ಕಾಗಿ ನಾವೆಲ್ಲರೂ ಸಂತೋಷಪಡಬೇಕು. ಇವೊತ್ತು ಏನೂ ಇಲ್ಲದಿರತಕ್ಕಂಥ ಸಂಸಾರಿಕನಿಗೆ ಅವನದೇ ಆದಂಥ ಮನೆಯಲ್ಲಿ ವಾಸ ಮಾಡಲು ಅವಕಾಶ ಮಾಡಿ ಕೊಡುತ್ತಿರುವುದರಿಂದ, ಆದರಿಂದ ಅವನಿಗೆ ಆಗುವಂತಹ ಸಂತೋಷ ಅಷ್ಟಿಷ್ಟಲ್ಲ, ಇಂತಹ ಒಂದು ಸನ್ನಿವೇಶವನ್ನು ನಾವುಗಳು ಅನೇಕ ಕಡೆಗಳಲ್ಲಿ ನೋಡುತ್ತಿದ್ದೇವೆ. ಇಂದು ಪ್ರತಿಯೊಂದು ತಾಲ್ಲೂಕಿನಲ್ಲಿಯೂ 200—300 ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ನಡೆದಿದೆ. ಕೆಲವು ಕಡೆಗಳಲ್ಲಿ ಮನೆಗಳನ್ನು ಕಟ್ಟಿಸುವ ಕೆಲಸ ಪೂರ್ತಿಯಾಗಿದೆ. ಅಂತಹ ಮನೆಗಳಲ್ಲಿ ಅನೇಕ ಸಂಸಾರಗಳು ವಾಸ ಮಾಡುತ್ತಿವೆ. ಇಂತಹ ಒಂದು ಮಹತ್ತರವಾದಂಥ ಕಾರ್ಯ ಈ ದೇಶದಲ್ಲಿ ನಡೆದಿದೆ. ಇಂತಹ ಒಂದು ಕಾರ್ಯಕಾಗಿ ಎಲ್ಲ ಸದಸ್ಯರೂ ತಮ್ಮ ಬೆಂಬಲವನ್ನು ಕೊಡುವುದು ಒಳ್ಳೆಯದಲ್ಲವೇ ಎಂದು ನಾನಾದರೂ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿಯೇ ಪ್ರಥಮವಾಗಿ ಭೂ ಕಾಯಿದೆಯನ್ನು ಜಾರಿಗೆ ತರುವುದರ ಮೂಲಕ ಸರ್ಕಾರದವರು ಉಳುವವನೇ ಭೂಮಿಯ ಒಡೆಯನನ್ನಾಗಿ ಮಾಡುತ್ತಿದ್ದಾರೆ. ಆದರಂತೆ ಇಲ್ಲಿಯವರೆಗೆ 80 ಸಾವಿರ ಸಂಸಾರಗಳು ಭೂಮಿಯ ಒಡೆತನವನ್ನು ಪಡೆದುಕೊಳ್ಳಲು ಸರ್ಕಾರದವರು ಎಂದು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಈ ವಿಚಾರದಲ್ಲ ಈ ಹಿಂದಿನ ಸರ್ಕಾರ ಶ್ರೀಮಾನ ಜತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿತ್ತು, ಆ ಸಮಿತಿಯವರು ಇಡೀ ರಾಜ್ಯದಲ್ಲಿ ಸಂಚಾರ ಮಾಡಿ ಒಂದು ವರದಿಯನ್ನು ಕೊಟ್ಟರು. ಅದರ ನಂತರ ಅಧಿಕಾರಕ್ಕೆ ಬಂದಂಥ ಸರ್ಕಾರಗಳು ಭೂಕಾಯಿದೆಯನ್ನು ಜಾರಿಗೆ ತರುವುದಕ್ಕೆ ಬದಲು ಕೇವಲ ಮಾತಿನಲ್ಲಿ ತಮ್ಮ ಕಾರ್ಯ ಮಾಡಿದರೇ ಹೊರತು, ಅದನ್ನು ಅನುಷ್ಠಾನದಲ್ಲಿ ತರಲಿಲ್ಲ, ಅವರುಗಳು ಕೇವಲ ಬರೀ ಮಾತಿನಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾಗಬೇಕೆಂದು ಪ್ರಯತ್ನ ಮಾಡಿದರು. ಆದರೆ ಈಗಿನ ಸರ್ಕಾರದವರು ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತಿರುವುದಲ್ಲದೆ. ಉಳುವವನೇ ಭೂಮಿಯ ಒಡೆಯನಾಗಬೇಕೆಂಬ ತತ್ವವನ್ನು ಜಾರಿಗೆ ತರುತ್ತಿದ್ದಾರೆ. ಈ ಹಿಂದಿನ ಸರ್ಕಾರಗಳು ಮಾಡದಿರತಕ್ಕಂಥ ಮಹತ್ಕಾರ್ಯವನ್ನು ಈಗಿನ ಸರ್ಕಾರ ಮಾಡುತ್ತಿದೆ. ಇಲ್ಲಿಯವರೆಗೆ ಲಕ್ಷಾಂತರ ಎಕರೆ ಭೂಮಿಯಲ್ಲಿ ಅಂದರೆ ಯಾರದೋ ಶ್ರೀಮಂತರ ಜಮೀನಿನಲಿ ಸಾವಿರಾರು ಮಂದಿ ಬಡವರು ತಮ್ಮ ಬೆವರನ್ನು ಸುರಿಸಿ ಹಗಲಿರುಳು ದುಡಿಯುತ್ತಿದ್ದರು, ಆದರೆ ಇಂದು ಅದೇ ಬಡವರು ಆ ಜಮೀನುಗಳ ಒಡೆಯರಾಗತಕ್ಕಂಥ ಒಂದು ಅವಕಾಶವನ್ನು ನಮ್ಮ ಸರ್ಕಾರ ಕಲ್ಪಿಸಿಕೊಟ್ಟಿದೆ. ಈ ಒಂದು ಕೆಲಸವನ್ನು ಮಾಡಿದ್ದು ತಪ್ಪೇ ಎಂದು ನಾನು ಕೇಳುತ್ತೇನೆ.

ಇದಕ್ಕೆ ಹಿಂದಿನ ಸರ್ಕಾರಗಳು ಯಾವು ಮಾಡಿರಲಿಲ್ಲ. ಅಂಥ ಒಂದು ಕಾನೂನನ್ನು ಈ ರಾಜ್ಯದಲ್ಲಿ ಜಾರಿಗೆ ತಂದಿದ್ದೇವೆ. ಆದುದರಿಂದ ನಾನಾದರೂ ಕೂಡ ಮಾನ್ಯ ಸದಸ್ಯರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

4–30 P. M.

ಶ್ರೀ ಕೋಣಂದೂರು ಲಿಂಗಪ್ಪ.—ಯಾವುದು ಒಳ್ಳೆಯ ಕೆಲಸ ನಡೆದಿದೆ ಅದನ್ನು ನಾವು ಒಪ್ಪುತ್ತೇವೆ. ಯಾವ ಒಳ್ಳೆಯ ಕಾರ್ಯ ಮಾಡಿ ಅದು ಮಾಡಿಲ್ಲವೆಂದು ಹೇಳಿದ್ದೇವೆ. ನೀವು ಹೇಳುವ ರೀತಿಯನ್ನು ನೋಡಿದರೆ ನಾವು ನೀವು ನಿಮ್ಮ ಸರ್ಕಾರ ಒಳ್ಳೆಯ ಕೆಲಸ ಮಾಡಿ ನಾವು ಅದನ್ನು ಹೇಳುತ್ತಿಲ್ಲವೆಂದು ಹೇಳುವ ರೀತಿಯಲ್ಲಿ ತಾವು ಹೇಳುತ್ತಿದ್ದೀರಿ ?

ಶ್ರೀ ಬಿ. ಬೈರಪ್ಪಾಜಿ.—ನಮ್ಮ ಸರ್ಕಾರ ಏನು ಒಳ್ಳೆಯ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಸರಿಯಾಗಿ ನಮಗೆ ಜನತೆಯ ಬೆಂಬಲ ಸಿಕ್ಕುತ್ತಿದೆ. ನಮ್ಮ ಸರ್ಕಾರ ಸರ್ವತೋಮುಖವಾದ ಏಳಿಗೆಯನ್ನು ಸಾಧಿಸುತ್ತಾ ಇದೆಯೆಂದು ತಮ್ಮ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಸಾವಿರಾರು ಜನ ಸಾಹುಕಾರರ ಹಿಡಿತದಿಂದ ವಿಮುಕ್ತಿಯನ್ನು ಹೊಂದುವಂತಾದ್ದು ಈ 20 ಅಂಶದ ಕಾರ್ಯಕ್ರಮದಿಂದ ಜಾರಿಗೆ ತಂದಿದ್ದೇವೆ. ಹತ್ತಾರು ವರ್ಷಗಳಿಂದ ಯಾವ

ಬಡವ ತನ್ನ ಸರ್ವಸ್ವವನ್ನು ಕಳೆದು ಕೊಂಡು ತನ್ನ ಸರ್ವಸ್ವವನ್ನು ಒತ್ತೆ ಇಡುತ್ತಾ ಇದ್ದ ಅಂಥ ಒಬ್ಬ ರೈತ, ಕೂಲಿಗಾರ ಮತ್ತು ಸಣ್ಣ ಹಿಡುವಳಿದಾರ ಇವತ್ತು ಅದರಿಂದ ವಿಮುಕ್ತಿ ಪಡೆಯುತ್ತಿದ್ದಾರೆ. ಇಂಥ ಒಂದು ಯೋಜನೆಯನ್ನು ಹಿಂದಿನ ಯಾವ ಸರ್ಕಾರ ಮಾಡಿತ್ತು ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಣ್ಣಪುಟ್ಟ ವ್ಯಾಪಾರ ಮಾಡುವವನು 10 ರೂಪಾಯಿ ಸಾಲ ತೆಗೆದುಕೊಂಡರೆ ಅವನಿಗೆ ೯ ರೂಪಾಯಿ ಕೈಗೆ ಕೊಡುವುದು. ಅದೇ ದಿನ ಸಂಜೆಗೆ ವಾಪಸ 10 ರೂಪಾಯಿಗಳನ್ನು ಕೊಡಬೇಕು. ಈ ರೀತಿ ಒಂದು ವರ್ಷಕ್ಕೆ 10 ರೂಪಾಯಿ ಬಂಡವಾಳಕ್ಕೆ 365 ರೂಪಾಯಿ ಬಡ್ಡಿ ಕೊಡುತ್ತಿದ್ದರು. ಆ ಪದ್ಧತಿಯನ್ನು ನಿರ್ಮೂಲನ ಮಾಡಿ ಲಕ್ಷಾಂತರ ಜನ ತಮ್ಮ ಜಮೀನು ಮತ್ತು ಆಸ್ತಿಗಳನ್ನು ಕಳೆದುಕೊಳ್ಳುತ್ತಿದ್ದರು. ಇದೇ ರೀತಿಯಾದ ಸಾವಿರಾರು ನಿದರ್ಶನಗಳು ಇವೆ. ಈ ಕಟುಕರಿಂದ ತಪ್ಪಿಸುವುದಕ್ಕೆ ನಮ್ಮ 20 ಅಂಶಗಳ ಕಾರ್ಯಕ್ರಮದಲ್ಲಿ ಅವಕಾಶವಿದೆ. ಎಂಥ ಅಪೂರ್ವವಾದ ಕಾರ್ಯ ನಡೆದಿದೆ ಇಂಥ ಕಾರ್ಯಕ್ರಮ ಅವ್ಯಾಹತವಾಗಿ ನಡೆಯಬೇಕಾದ್ದು ಇದೆ. ಇದಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬ್ಯಾಂಡೆಡ್ ಲೇಬರರ್ ಬಗ್ಗೆ ಹೇಳುವುದಾದರೆ ಯಾವ ನಾಗರೀಕ ಒಂದು ನಾಗರೀಕತೆಯ ಜೀವನವನ್ನು ನಡೆಸಲು ಎಲ್ಲರೂ ಕೂಡ ಸಹಕರಿಸಬೇಕೆಂದು ಹೇಳುತ್ತೇನೆ. ಇದಕ್ಕೆ ಎಲ್ಲಾ ಜನತೆ ಸಹಕರಿಸಬೇಕು ಅದನ್ನು ಪ್ರತಿಯೊಬ್ಬ ಪ್ರಜೆಗೂ ದೊರಕುವಂತೆ ಮಾಡುವುದು ನಮ್ಮ ಮತ್ತು ಸರ್ಕಾರದ ಕರ್ತವ್ಯ. ಇದರಿಂದ ಸಾವಿರಾರು ಜನರು ವಿಮುಕ್ತರಾಗಿದ್ದಾರೆ. ಎಲ್ಲಾ ಜನತೆಗೂ ಸರಿಸಮಾನವಾದ ಹಕ್ಕುಭಾದ್ಯತೆಗಳು ದೊರೆಯಲಿದೆಯೆಂದು ಸರ್ಕಾರ ಸರ್ವ ಪ್ರಯತ್ನ ಮಾಡುತ್ತಾ ಇದೆ, ಸರ್ಕಾರ ಮಾಡತಕ್ಕಂಥ ಇಂಥ ಮಹತ್ ಕಾರ್ಯಗಳಿಗೆ ಎಲ್ಲರೂ ಹಾಗೂ ವಿರೋಧಪಕ್ಷದವರೂ ಕೂಡ ಸಹಕರಿಸಿದರೆ ಜನತೆಯ ಕಲ್ಯಾಣವನ್ನು ಸರ್ಕಾರ ಮಾಡುವುದಕ್ಕೆ ಸಹಾಯಕವಾಗುತ್ತದೆ.

ಇನ್ನು ಶ್ರೀಮಾನ್ ಹನುಮೇಗೌಡರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇವತ್ತು ಹಾಸನ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರವತಿಯಿಂದ ಒಂದು ಯೋಜನೆ ಬಂದಿದೆ ಆ ಯೋಜನೆಯಲ್ಲಿ ಸಣ್ಣಪುಟ್ಟ ರೈತರಿಗೆ ಸಾಲ ಕೊಟ್ಟು ಅದರಿಂದ ಉತ್ಪತ್ತಿ ಪಡೆದು 8 ವರ್ಷಗಳನಂತರ ಆ ಹಣವನ್ನು ಸರ್ಕಾರ ವಸೂಲು ಮಾಡತಕ್ಕಂಥಾದ್ದು. ಸಾಮಾನ್ಯ ರೈತ ಹಣ ತೆಗೆದುಕೊಂಡು ತೆಂಗಿನ ಸಸಿ ನೆಡೆಸಿ ಆದರಿಂದ ಕಾಯಿ ಬಿಟ್ಟು ಅದನ್ನು ಮಾರಿ ಸಂಪಾದನೆ ಮಾಡಿ ಈ ಯೋಜನೆಯಿಂದ ಪಡೆದ ಹಣವನ್ನು ವಾಪಸ್ ಮಾಡಬಹುದು. ಅವನಿಗೆ ಮುಫತ್ತಾಗಿ 300 ರೂಪಾಯಿಗಳನ್ನು ಸಬ್ಸಿಡಿಯಾಗಿ ಸರ್ಕಾರ ಕೊಡುತ್ತದೆ. ಆ ಮನುಷ್ಯ ಒಂದು ಸೊಸೈಟಿಗೆ ಸದಸ್ಯನಾಗಬೇಕು. ಇಂಥ ಸೌಲಭ್ಯವನ್ನು ಯಾರ ಕಾಲದಲ್ಲಿ ಮಾಡಿದ್ದರು? ಯಾರಿಂದಲೂ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕಂಥ ಕೆಲಸ ಇವತ್ತು ನಮ್ಮ ಸರ್ಕಾರ ಮಾಡುತ್ತಿದೆ, ಅದಕ್ಕೆ ಕೇಂದ್ರ ಸರ್ಕಾರ ಸತತ ಪ್ರಯತ್ನ ಮಾಡಿ ಸಹಾಯ ನೀಡುತ್ತಿದೆ. ಇಂಥ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಾ ಇದೆ. ಒಂದು ವಿಷಯವನ್ನು ತಮ್ಮೆಲ್ಲರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದು ಏನೆಂದರೆ ಯಾವ ಕಾರ್ಯವನ್ನು ಮಾಡಬೇಕಾದರೂ ಹಣಬೇಕು. ಹಣ ಬೇಕಾದರೆ ಅದು ಬೆಳೆಯುವಂತ ವಸ್ತುವಲ್ಲ. ತೆರಿಗೆ ಹಾಕಲೇಬೇಕಾಗುತ್ತದ. ತೆರಿಗೆ ಹಾಕದೆ ಇಂತ ಮಹತ್ ಕಾರ್ಯಗಳನ್ನು ಮಾಡವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಸಣ್ಣ ಹಿಡುವಳಿದಾರರು ಸಾಲದ ಯೋಜನೆಗೆ ಸುಮಾರು 5 ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರ ಒದಗಿಸುತ್ತದೆ. ಅದರಲ್ಲಿ ಸುಮಾರು 1 ಕೋಟಿ ರೂಪಾಯಿಯನ್ನು ಸಬ್ಸಿಡಿ ರೂಪದಲ್ಲಿ ಮುಪ್ಪತ್ತಾಗಿ ನಮ್ಮ ಜನರಿಗೆ ಕೊಡುತ್ತಾ ಇದೆ. ಇದು ಹಾಸನ ಒಂದೇ ಜಿಲ್ಲೆಯಲ್ಲೇ ಅಲ್ಲ ಇನ್ನು ಅನೇಕ ಜಿಲ್ಲೆಗಳಲ್ಲಿ ನಡೆಯುತ್ತಾ ಇದೆ. ನಮ್ಮ ಜಿಲ್ಲೆಯಲ್ಲೂ ಕೂಡ ನಡೆಯುತಾ ಇದೆ. ಇಂಥ ಎಲ್ಲಾ ಕೆಲಸಕಾರ್ಯಗಳು ಸುಗಮವಾಗಿ ನಡೆಯಬೇಕಾದರೆ ಯಾವ ಅಡೆತಡೆಗಳು ಇಲ್ಲದೆ ಸುಗಮವಾಗಿ ನಡೆಯಲಿದೆಯೆಂದು ನಮ್ಮ ಪ್ರಧಾನಿಯವರು ತುರ್ತು ಪರಿಸ್ಥಿತಿ ಜಾರಿಗೆ ತಂದರು. ಇದನ್ನು ಜಾರಿಗೆ ತರದೆ ಇದ್ದರೆ ಯಾವಾಗ ನೋಡಿದರೂ ಎಲ್ಲ ನೋಡಿದರೂ ಮುಷ್ಕರ ಸರ್ವೆ ಸಾಮಾನ್ಯವಾಗಿ ಹೋಗಿ ವಿದ್ಯಾರ್ಥಿಗಳಲ್ಲಿ ಒಂದು ಶಿಸ್ತು ಸಂಯಮ ಇರಲಿಲ್ಲ. ಅದರಿಂದಾಗಿ ಅವರ ಪಾಠಪ್ರವಚನಗಳು ಸರಿಯಾಗಿ

ನಡೆಯುತ್ತಿರಲಿಲ್ಲ. ಮತ್ತೆ ಮಿಲ್ಲುಗಳಲ್ಲಿ, ಕಾರ್ಖಾನೆಗಳಲ್ಲಿ ಯಾವಾಗ ನೋಡಿದರೂ ಮುಷ್ಕರ ಯಾವಾಗ ನೋಡಿದರೂ ಎಲ್ಲಿ ನೋಡಿದರೂ ಕೆಂಪು ಭಾವುಟ ಇದರಿಂದಾಗಿ ಉತ್ಪಾದನೆ ಕಡಿಮೆಯಾಗಿ ಅದರಿಂದ ಅವರಿಗೂ ಸುಖವಿಲ್ಲ ಮತ್ತು ಮಾಲಿಕರಿಗೂ ಸುಖವಿಲ್ಲ. ಈಗ ಈ ತುರ್ತು ಪರಿಸ್ಥಿತಿ ಘೋಷಣೆಯಿಂದಾಗಿ ಜನರಿಗೆ ನೆಮ್ಮದಿಯನ್ನು ತಂದಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಈ ತುರ್ತು ಪರಿಸ್ಥಿತಿ ಘೋಷಣೆಯಾದ ಮೇಲೆ ಮಂತ್ರಿಗಳ ಬಿಳಿ ಟೋಪಿ ಹೋಗಿ ಫರ್ ಕ್ಯಾಪ್‌ಗಳು ಬಂದಿವೆ. ಇದು ಒಂದು ತುರ್ತು ಪರಿಸ್ಥಿತಿಯ ಕಾರ್ಯಕ್ರಮದಲ್ಲಿ ಬಂದಿರಬಹುದು ?

ಶ್ರೀ ಬಿ. ಬೈರಪ್ಪಾಜಿ.— ಈಗ ಮಿಲ್ಲಿನಲ್ಲಿಯಾಗಲೀ, ಕಾರ್ಖಾನೆಗಳಲ್ಲಾಗಲೀ ವಿದ್ಯಾರ್ಥಿ ವೃಂದದಲ್ಲಾಗಲಿ ಮತ್ತು ಸರಕಾರಿ ನೌಕರರಲ್ಲಾಗಲಿ ಒಂದು ಶಿಸ್ತು ಸಂಯಮ ಬಂದಿದೆ. ಅದರಿಂದ ಅವರವರ ಕೆಲಸಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಇದರಿಂದ ದೇಶಕ್ಕೆ ಎಷ್ಟು ಲಾಭ ಎಂಬುದನ್ನು ತಾವೇ ಯೋಚನೆ ಮಾಡಿ ನೋಡಿ. ನೌಕರರು ಕಾಲಕ್ಕೆ ಸರಿಯಾಗಿ ಕಚೇರಿಗೆ ಬಂದು ಅವರವರ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ದೇಶದ ಅಭಿವೃದ್ಧಿಯಾಗುತ್ತಿದೆ. ಅನೇಕ ಒಳ್ಳೆಯ ಮಾರ್ಪಾಡುಗಳು ಆಗುತ್ತಾ ಇವೆ. ಆದ್ದರಿಂದ ನಾವು ಎಲ್ಲರೂ ಸರ್ಕಾರಕ್ಕೆ ಬೆಂಬಲ ಕೊಡಬೇಕು. ಕೇಂದ್ರ ಸರ್ಕಾರ ಯಾವ ಆದೇಶ ಕೊಡುತ್ತದೆ ಅದನ್ನು ಅವರು ಹೇಳಿದ ಅವಧಿಗಿಂತ ಮುನ್ನವೇ ಕೆಲಸಕಾರ್ಯಗಳು ನಡೆಯುತ್ತಿದೆ. ಇನ್ನು ಕಾಮಗಾರಿಯ ವಿಚಾರದಲ್ಲಿ ಮಾನ್ಯ ಚೆನ್ನಬಸಪ್ಪನವರು ಇಲ್ಲಿಯೇ ಇದ್ದಾರೆ. ರಸ್ತೆ ಕಾಮಗಾರಿ ಕೆಲಸಗಳು ಹೆಚ್ಚು ಹೆಚ್ಚು ಮಾಡುತ್ತಿದ್ದಾರೆ ಹಿಂದೆ ಯಾವ ರೀತಿ ಇತ್ತೋ ಇವತ್ತು ರಸ್ತೆ ಕಾಮಗಾರಿ ಕೆಲಸಗಳು ಆ ರೀತಿಯಲ್ಲಿ ಬಹಳ ಸಮರ್ಪಕವಾದ ಕೆಲಸಗಳು ನಡೆಯುತ್ತಾ ಇವೆ. ಅದಕ್ಕೆ ಮಾನ್ಯ ಚೆನ್ನಬಸಪ್ಪನವರನ್ನು ಅಭಿನಂದಿಸುತ್ತೇನೆ. ಆರೋಗ್ಯ ಇಲಾಖೆಯಲ್ಲಿ ಕೇವಲ ಒಂದು ವರ್ಷದಲ್ಲಿ ಸುಮಾರು 10 ಆಸ್ಪತ್ರೆಗಳನ್ನು ಈ ದೇಶದಲ್ಲಿ ಪ್ರಾರಂಭಮಾಡಿದ್ದಾರೆ. ಈ ವರ್ಷದಲ್ಲ ಮತ್ತೆ 100 ಆಸ್ಪತ್ರೆಗಳನ್ನು ಪ್ರಾರಂಭಮಾಡುತ್ತಿದ್ದಾರೆ. ಸಮಾಜಕಲ್ಯಾಣ ಇಲಾಖೆಯಲ್ಲಿಯೂ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಾ ಇವೆ.

ಶ್ರೀ ಬಿ. ಪುಟ್ಟಸ್ವಾಮಪ್ಪ.— ಅಲ್ಲಿ ಈಗ ಹಡಗಿನ ವ್ಯಾಪಾರ ನಡೆಯುತ್ತಿದೆಯೆಂದು ಆತ್ಮಸಾಕ್ಷಿಯಾಗಿ ಒಪ್ಪಿಕೊಳ್ಳಿ.

ಶ್ರೀ ಬಿ. ಬೈರಪ್ಪಾಜಿ.— ಲೋಪದೋಷಗಳು ಎಲ್ಲಿಯೂ ಇಲ್ಲದೇ ಇರುವುದಿಲ್ಲ. ಯಾರೇ ಸರ್ಕಾರ ನಡೆಸಿದರೂ ಕೂಡ ಸ್ವಲ್ಪ ಸ್ವಲ್ಪ ಲೋಪದೋಷಗಳು ಇದ್ದೇ ಇರುತ್ತವೆ. ವಿರೋಧ ಪಕ್ಷದ ಸದಸ್ಯರು ಅಂತಹ ಲೋಪದೋಷಗಳನ್ನು ತಿದ್ದಿಕೊಳ್ಳುವ ರೀತಿಯಲ್ಲಿ ಹೇಳಿದ್ದಾರೆ ನಾವು ಅವನ್ನು ತಿದ್ದಿಕೊಳ್ಳುತ್ತೇವೆ. ಎಲ್ಲಾ ಕಡೆಯೂ ಲೋಪದೋಷಗಳು ಇರುವುದಕ್ಕೆ ಸಾಧ್ಯವಿಲ್ಲ

ಶ್ರೀ ಕೋಣಂದೂರು ಲಿಂಗಪ್ಪ.— ಹಾಗಾದರೆ ಬದಲಾವಣೆ ಮಾಡಿ.

ಶ್ರೀ ಬಿ. ಬೈರಪ್ಪಾಜಿ.— ನಮ್ಮಲ್ಲಿ ದಕ್ಷತೆಯಿಂದ ಕೆಲಸಮಾಡುವ ಮಂತ್ರಿಗಳು ಇದ್ದಾರೆ. ದಕ್ಷತೆಯಿಂದ ಕೆಲಸಮಾಡುವ ಮುಖ್ಯಮಂತ್ರಿಗಳೂ ಇದ್ದಾರೆ. ಈ ದೇಶದಲ್ಲಿ ಕೇಂದ್ರ ಸರ್ಕಾರದಲ್ಲಿರುವ ಶ್ರೀಮತಿ ಇಂದಿರಾಜಿಯವರು ಏನು ನಿರ್ದೇಶನ ಕೊಡುತ್ತಾರೋ ಆ ನಿರ್ದೇಶನದ ಪ್ರಕಾರ ಹಾಗೂ ಅವರ 20 ಅಂಶಗಳ ಕಾರ್ಯಕ್ರಮದ ಪ್ರಕಾರ ಅನೇಕ ಕೆಲಸಕಾರ್ಯಗಳನ್ನು ಈಗಾಗಲೇ ತೆಗೆದುಕೊಳ್ಳುತ್ತಿದ್ದೇವೆ. ಅಂದಮೇಲೆ ಎಲ್ಲರೂ ಕೂಡ ಸಂಬಾ ವಿವೇಚನೆಯಿಂದ ಹಾಗೂ ದಕ್ಷತೆಯಿಂದ ಕೆಲಸಮಾಡುತ್ತ ಇದ್ದಾರೆ. ಈ ದೇಶದಲ್ಲಿ ಎಲ್ಲ ವರ್ಗಗಳೂ ಕೂಡ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಮುಂದುವರಿಯಬೇಕು. ಈಗ ಏನು 20 ಅಂಶಗಳ ಕಾರ್ಯಕ್ರಮ ಇದೆಯೋ ಅವುಗಳ ಬಗ್ಗೆ ಅನೇಕ ಕೆಲಸಕಾರ್ಯಗಳನ್ನು ಸರ್ಕಾರದವರು ಕೈಗೊಳ್ಳುತ್ತಿರುವಾಗ ನಾವೆಲ್ಲರೂ ಅವಕ್ಕೆಲ್ಲಾ ಸಂಪೂರ್ಣ ಬೆಂಬಲ ಕೊಡುತ್ತಾ ಇರುವಂತೆ ವಿರೋಧಪಕ್ಷದ ಎಲ್ಲ ಸದಸ್ಯರೂ ಬೆಂಬಲವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ನಮ್ಮ ನೂತನ ರಾಜ್ಯಪಾಲರು ನಮ್ಮ ಮುಂದೆ ಮಂಡಿಸಿರತಕ್ಕ ಅವರ ಭಾಷಣಕ್ಕೆ ನಾನು ಸಂಪೂರ್ಣ ಬೆಂಬಲವನ್ನು ಕೊಡುತ್ತಾ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್).— ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ರಾಜ್ಯಪಾಲರು ಈ ಸದನವನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಅದಕ್ಕೆ ಅನುಗುಣವಾಗಿ ಈ ಸದನದ ಸದಸ್ಯರು ಅನುಮೋದನೆ ಮಾಡಿ ಈ ಸಭೆಯ ಒಪ್ಪಿಗೆಗಾಗಿ ಅದನ್ನು ಇವತ್ತು ನಮ್ಮ ಮುಂದೆ ಇಟ್ಟಿದ್ದಾರೆ. ರಾಜ್ಯಪಾಲರು ಮಾಡಿರತಕ್ಕ ಭಾಷಣದ ಮೊದಲನೆಯ ಪುಟದ ಕೆಲವು ವಾಕ್ಯಗಳನ್ನು ಇಲ್ಲಿ ನಾನು ಹೇಳಬೇಕೆಂದಿಚ್ಛಿಸುತ್ತೇನೆ. ಅದು ಈ ರೀತಿ ಇದೆ.—

"Last year, when my predecessor, Shri Mohanlal Sukhadia, addressed you, he expressed the hope that there would be a 'change for the better' during 1975. This has come about, chiefly due to the dynamic leadership provided by our Prime Minister in declaring a state of national emergency and announcing the twenty-point economic programme". ಇದು ಬಹುಶಃ ಭಾಷಣದ ಮುಖ್ಯ ಸಾರಾಂಶ. ಅವರ ಭಾಷಣದ ಎಲ್ಲ ಅಂಶಗಳೂ ಇದೊಂದು ವಾಕ್ಯದಲ್ಲಿ ಅಡಗಿದೆಯೆಂದು ಹೇಳಬಹುದು. ಇದರಲ್ಲಿ "change for the better" ಎಂಬುದಾಗಿ ಹೇಳಿದ್ದಾರೆ. ಇದು ನನಗೆ ಹೇಳುವುದಕ್ಕೆ ಶೋಚನೀಯವಾಗುತ್ತದೆ. ಅವರು "change for the worst" ಎಂಬುದಾಗಿ ಹೇಳಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಈ ಭಾಷಣವನ್ನು ನಮ್ಮ ಮುಂದಿಟ್ಟು ಅನೇಕ ಉದಾಹರಣೆಗಳ ಮೂಲಕ ಕೆಲವು ಅಂಶಗಳನ್ನು ಹೇಳಿಕೊಂಡಿದ್ದಾರೆ. ಕಳೆದ ಅಧಿವೇಶನದಲ್ಲಿ ನಮ್ಮ ದೇಶದ ಪರಿಸ್ಥಿತಿ ಬಗ್ಗೆ ಅನೇಕ ರೀತಿಯಲ್ಲಿ ವಿರೋಧ ಮಾಡಿದ್ದೇವೆ. ಆಗ್ಗೆ ನಮ್ಮಲ್ಲಿ ಏನು ಅನುಮಾನ ಇತ್ತೋ ಹಾಗೂ ಏನೊಂದು ಶಂಕೆ ಇತ್ತೋ ಅವನ್ನೆಲ್ಲಾ ಹೋದಸಾರಿಯೇ ವ್ಯಕ್ತಪಡಿಸಿದ್ದೇವೆ. ಆದರೆ ಅವುಗಳ ಬಗ್ಗೆ ಸರ್ಕಾರದವರು ಯಾವೊಂದು ಕ್ರಮವನ್ನು ತೆಗೆದುಕೊಳ್ಳದೇ ಇರುವುದರಿಂದ ಇವತ್ತೂ ಸಹ ಆ ಒಂದು ಶಂಕೆಯನ್ನು ಕಣ್ಣಾರೆ ನಾವು ಕಾಣುತ್ತಿದ್ದೇವೆ. ಅದನ್ನು ಇಡೀ ಕರ್ನಾಟಕ ಜನತೆ ಇವತ್ತೂ ಕೂಡ ಅನುಭವಿಸುತ್ತಿದಾರೆ. ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೆಂದು ಹೇಳುತ್ತಿದ್ದಾರೆ. ಆ ರೀತಿಯಾಗಿ ನಾವು ಪ್ರಜಾಪ್ರಭುತ್ವದಲ್ಲಿ ಇರಬೇಕಾಗಿದ್ದರೆ...

ಶ್ರೀ ಎಚ್. ಟಿ. ಕೃಷ್ಣಪ್ಪ.— ನಮ್ಮ ಸುದೈವಕ್ಕೆ ರಾಜ್ಯಪಾಲರ ಭಾಷಣದಲ್ಲಿ ಪ್ರಜಾಪ್ರಭುತ್ವ ಎಂಬ ಹೆಸರನ್ನೇ ಹೇಳಿಲ್ಲ.

ಶ್ರೀ ಸಿ. ಬೈರೇಗೌಡ.— ಈ ಪ್ರಜಾಪ್ರಭುತ್ವದಲ್ಲಿ ನಾವು ಪ್ರಜೆಗಳ ಪ್ರತಿನಿಧಿಗಳಾಗಿ ಕೆಲಸಮಾಡುತ್ತಿದ್ದೇವೆ. ನಾವು ಯಾವರೀತಿ ಕೆಲಸಮಾಡಬೇಕೆಂದರೆ, ನಮ್ಮ ದೇಶದಲ್ಲಿರತಕ್ಕ ಎಲ್ಲಾ ಜನರು ಮಾಡತಕ್ಕ ಕೆಲಸಕಾರ್ಯಗಳನ್ನು ನೋಡಿ ಅವರ ಕಲ್ಯಾಣಕ್ಕೆ ಯಾವ ರೀತಿ ದುಡಿಯಬೇಕೆಂಬುದನ್ನು ಇಲ್ಲಿ ಇರತಕ್ಕ 216 ಜನ ಪ್ರತಿನಿಧಿಗಳು ಮುಖ್ಯವಾಗಿ ಗಮನಿಸಬೇಕು. ಈ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದೇ ಪ್ರಜಾಪ್ರತಿನಿಧಿಗಳಾದ ನಮಗೆ ಇರತಕ್ಕ ಆದ್ಯ ಕರ್ತವ್ಯ. ಅದೇ ಪ್ರಜಾಪ್ರಭುತ್ವದಲ್ಲಿ ಮೊದಲನೆಯ ಅಧ್ಯಾಯ. ಇವತ್ತಿನದಿವಸ ನಡೆದಿರತಕ್ಕದ್ದು ಸರ್ಕಾರವನ್ನು ಯಾರಾದರೂ ಹೊಗಳಿದರೆ, ಅದು ದಪ್ಪ ದಪ್ಪ ಅಕ್ಷರಗಳಲ್ಲಿ ಪತ್ರಿಕೆಗಳಲ್ಲಿ ಬರುತ್ತದೆ. ಆದರೆ ಸರ್ಕಾರದಲ್ಲಿರತಕ್ಕ ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ನಾನು ನಿಜವಾಗಿ ಹೇಳುವುದಾದರೆ ಅಂತಹ ವಿಚಾರ ಪತ್ರಿಕೆಗಳಲ್ಲಿ ಬರುವುದೇ ಇಲ್ಲ, ಅದು ಇನ್ನೊಬ್ಬರ ಕಿವಿಗೂ ಸಹ ಬೀಳುವುದಿಲ್ಲ. ವಿಧಾನಸಭೆಯಲ್ಲಿ ಈಗ ನನ್ನಿಂದ ಭಾಷಣ ನಡೆದಿದೆಯೆಂದೂ ಸಹ ಪತ್ರಿಕೆಗಳಲ್ಲಿ ಬರುವುದಿಲ್ಲ. ನನ್ನ ಕ್ಷೇತ್ರದಲ್ಲಿ ಹೋಗಿ ಅಲ್ಲಿನ ಜನತೆಗೆ ಇಂತಹ ಭ್ರಷ್ಟಾಚಾರಗಳು ನಡೆಯುತ್ತಾ ಇವೆಯೆಂದು ಹೇಳಿದರೆ, ಈಗಿನ ಒಂದು ಸನ್ನಿವೇಶದಲ್ಲಿ ನಾನು ಸೆಂಟ್ರಲ್ ಜೈಲ್ ನೋಡಬೇಕಾಗುತ್ತದೆ. ಇದು ಪ್ರಜಾಪ್ರಭುತ್ವವೇ ? ನಾಚಿಕೆಗೇಡು ಪ್ರಸಂಗ. ಇವರಿಗೆ ನಾಚಿಕೆಯಾಗುವುದಿಲ್ಲವೇ ? ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷ ಅನುಸರಿಸುವ ಕ್ರಮ ಇದಾಗಿದೆ. ಪ್ರಜಾಪ್ರಭುತ್ವದಲ್ಲಿ ಸ್ವೇಚ್ಛಾಚಾರದಿಂದ ನಡೆಯುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಂದಕ್ಕೂ ಕಾನೂನುಗಳಿವೆ. ಕಾನೂನುಗಳ ರೀತ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಜಾಪ್ರಭುತ್ವದಲ್ಲಿ ಅವಕಾಶವಿದೆ. ಇಂದು ಅಧಿಕಾರ ಗದ್ದುಗೆಯಲ್ಲಿರತಕ್ಕವರು ಸ್ವೇಚ್ಛಾಚಾರದಿಂದ ಕೆಲಸಮಾಡಿದ್ದರಿಂದ ವಿರೋಧ ಪಕ್ಷಗಳವರು ಪ್ರಜಾಪ್ರಭುತ್ವ ರೀತಿಯಲ್ಲಿ ಪ್ರಶ್ನಿಸಿದ್ದರಿಂದ ಎಮರ್ಜೆನ್ಸಿ ತರಲಾಗಿದೆ. ಈಗ

ಇಷ್ಟೊಂದು ಅವ್ಯವಸ್ಥೆಗೆ ಬಂದಿರತಕ್ಕದ್ದಕ್ಕೆ ಕಾರಣ ಅಧಿಕಾರಗದ್ದುಗೆಯಲ್ಲಿರತಕ್ಕವರ ಸ್ವೇಚ್ಛಾವೃತ್ತಿಯೇ ಕಾರಣವೆಂದು ಹೇಳಬಹುದು. ವಿರೋಧಪಕ್ಷದವರ ಸ್ವೇಚ್ಛಾಚಾರದಿಂದೇನೂ ಅಲ್ಲ. ಯಾವುದೇ ಪಕ್ಷವಾಗಲೀ ಸ್ವೇಚ್ಛಾವೃತ್ತಿಯಿಂದ ನಡೆದಿದ್ದರೆ ಇವರು ನಡೆಸುತ್ತಿರುವ ಅಧಿಕಾರ ದುರುಪಯೋಗವೇ ಮುಖ್ಯ ಕಾರಣವೆಂದು ನಾನು ಹೇಳುತ್ತೇನೆ. ಅದಕ್ಕೆ ತಕ್ಕ ಕಾನೂನುಗಳಿದ್ದರೂ ಸಹ ಅದನ್ನು ಉಪಯೋಗಿಸುವುದರಲ್ಲಿ ಇವರು ವಿಫಲರಾಗಿದ್ದಾರೆ ಎಂಬದಾಗಿ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ 27-28 ವರ್ಷಗಳ ಇತಿಹಾಸದಲ್ಲಿ ಇವರು ನಡೆಸಿರತಕ್ಕ ಆಡಳಿತ, ಇವರ ಒಂದು ಆರ್ಥಿಕ ನೀತಿ ಏನಿವೆಯೋ ಅದೆಲ್ಲವೂ ಸಂಪೂರ್ಣವಾಗಿ ವಿಫಲವಾಗಿದೆ. ನನ್ನ ಮಾನ್ಯ ಮಿತ್ರರು ಆ ಪಕ್ಷದವರು ಹೇಳಿದಹಾಗೆ ನಾವು ಸಾಧಿಸಬೇಕಾದಂಥ ಕೆಲಸಗಳು ಅನೇಕವಿದ್ದರೂ, ಅವು ಈಗ ಯಾವ ದಿಕ್ಕಿನಲ್ಲಿ ಹೋಗುತ್ತಿದೆಯೆಂದು ನೋಡಿದರೆ ಅದರ ಒಂದು ಫಲ ನಿಷ್ಫಲವಾಗುವ ಸ್ಥಿತಿಗೆ ಬರುತ್ತಿದೆ. ಅರ್ಥಿಕ ವ್ಯವಸ್ಥೆಯೂ ಸಹ ಹದಗೆಡುತ್ತಿದೆ. ನನಗೆ ಈಗ ವೇಳೆ ಅಭಾವವಿರುವುದರಿಂದ ಅನೇಕ ವಿಚಾರಗಳನ್ನು ಈಗ ದೀರ್ಘವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮುಖ್ಯವಾಗಿ ಇವರ ಒಂದು ಆರ್ಥಿಕ ನೀತಿಯು ವಿಫಲತೆಯಿಂದ ಇಂತಹ ಒಂದು ತುರ್ತು ಪರಿಸ್ಥಿತಿಗೆ ಬಂದಿದ್ದಾರೆಂದು ನಾನು ಮೊಟ್ಟಮೊದಲನೆಯದಾಗಿ ಹೇಳಬೇಕಾಗಿದೆ. 1951-52ನೇ ಇಸವಿಯಲ್ಲಿ ''ಪಂಚವಾರ್ಷಿಕ ಯೋಜನೆಯ ಯುಗ'' ವೆಂಬ ಸಂಕೇತವನ್ನು ಇಟ್ಟುಕೊಂಡು ಆಡಳಿತ ನಡೆಸುತ್ತೇವೆಂದು ಹೇಳಿದಿರಿ. ಆ ಪಂಚವಾರ್ಷಿಕ ಯೋಜನೆ ಈಗ ಎಲ್ಲಿದೆ ? ನಾನು ನೋಡಿದ ಹಾಗೆ ರಾಜ್ಯಪಾಲರ ಭಾಷಣದಲ್ಲಿ ಏನಾದರೂ 5ನೇ ಪಂಚವಾರ್ಷಿಕಯೋಜನೆಯ ವಿಚಾರವನ್ನು ಹೇಳಿದ್ದಾರೆಯೋ ಎಂದರೆ ಆ ವಿಷಯ ರಾಜ್ಯಪಾಲರ ಭಾಷಣದಲ್ಲಿ ಒಂದು ಕಡೆಯೂ ಇಲ್ಲ.

ಒಂದು ಮಾತನ್ನು ಮಾತ್ರ ಹೇಳಿದ್ದಾರೆ ಅದು ಏನೆಂದರೆ ಅನ್ಯುಯಲ್ ಪ್ಲಾನ್‌ನಲ್ಲಿ ಕಾಳಿ ನದಿಗೆ ಇಷ್ಟು ಬರುತ್ತದೆಂದು ಮಾತ್ರ ಹೇಳಿದ್ದಾರೆ. ಇವತ್ತಿನ ದಿವಸ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಏನು ಮಾಡುತ್ತಾರೆ ಎನ್ನುವುದನ್ನಾದರೂ ಕೂಡ ಹೇಳುವುದಕ್ಕೆ ಸರ್ಕಾರ ತಯಾರಾಗಿಲ್ಲ. ಹಿಂದೆ ಒಂದು ಮಾತನ್ನು ಹೇಳಿದ್ದರು, ಗರೀಭಿ ಹಟಾವೋ ಎಂದು. ಈಗ ಯಾವುದೂ ಇಲ್ಲ. ಆದರೆ ಇವತ್ತಿನ ದಿವಸ ನಾವು ಸರ್ವಾಧಿಕಾರದ ಪರಮಾಧಿಕಾರವನ್ನು ಕಾಣುತ್ತಿದ್ದೇವೆ. ಸರ್ಕಾರದ ಅಟಾರ್ನಿ ಜನರಲ್ ರವರೊಬ್ಬರು ಸುಪ್ರಿಂ ಕೋರ್ಟ್‌ನಲ್ಲಿ ಒಂದು ವಾದವನ್ನು ಮಂಡಿಸಿದ್ದಾರೆ. ಅದು ಬಹುಶಃ ಜನತೆಗೆ ಏನಾದರೂ ಗೊತ್ತಾದರೆ ಅಧಿಕಾರವನ್ನು ನಡೆಸತಕ್ಕಂಥವರ ಗತಿ ಏನಾಗುತ್ತದೆಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಈಗಿರತಕ್ಕಂಥ ತುರ್ತು ಪರಿಸ್ಥಿತಿಯಲ್ಲಿ ಯಾರೋ ಒಬ್ಬ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ತನ್ನ ಸ್ವಂತ ವೈಯಕ್ತಿಕ ದ್ವೇಷದಿಂದ ಯಾರನ್ನಾದರೂ ಕೊಂದರೂ ಅದನ್ನು ಯಾವ ಕೋರ್ಟಿನಲ್ಲಾಗಲೀ ಪ್ರಶ್ನಿಸುವಂತಿಲ್ಲ. ನಮ್ಮ ಈ ದೇಶದ ಅಟಾರ್ನಿ ಜನರಲ್‌ರವರು ತಮ್ಮ ಈ ವಾದವನ್ನು ಸುಪ್ರಿಂ ಕೋರ್ಟಿನ ಮುಂದೆ ಮಂಡಿಸಿದ್ದಾರೆ. ಇದು ಸರ್ವಾಧಿಕಾರದ ಪರಮಾವಧಿ. ಇವತ್ತಿನ ದಿವಸ ಯಾರನ್ನು ಬೇಕಾದರೂ ಯಾವ ನಿಮಿಷದಲ್ಲಾದರೂ ಜೈಲಿಗೆ ಹಾಕಿ ಅವರ ಪ್ರಾಣವನ್ನು ತೆಗೆಯಬಹುದು. ವಿರೋಧ ಪಕ್ಷದವರನ್ನು ಒಂದೇ ಗುಂಡಿನಲ್ಲಿ ಸಾಯಿಸುತ್ತಿರುವ ಬಗ್ಗೆ ಕೇಳಲೂ ವ್ಯವಧಾನವಿಲ್ಲದಂಥ ಪರಿಸ್ಥಿತಿಯನ್ನು ತಂದಿಟ್ಟಿದ್ದಾರೆ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಸಪ್ತ ಸ್ವಾತಂತ್ರ್ಯಗಳು ಮಾಯವಾಗಿವೆ, ಅದು ಎಲ್ಲಿದೆ ? ಅದು ಸಂವಿಧಾನದ ಪುಸ್ತಕದಲ್ಲಿಯೂ ಇಲ್ಲವಾಗಿದೆ. ಅದನ್ನು ಯಾರಾದರೂ ಪ್ರಿಂಟ್ ಮಾಡಬೇಕಾಗಿದ್ದರೆ ಆ ಸಪ್ತ ಸ್ವಾತಂತ್ರ್ಯಗಳು ಮಾಯವಾಗಿವೆ. ಸ್ವಾತಂತ್ರ್ಯಕ್ಕೆ ಅತ್ಯಂತ ಅವಶ್ಯಕವಾಗಿ ಬೇಕಾಗಿರತಕ್ಕಂಥ ಸಪ್ತ ಸ್ವಾತಂತ್ರ್ಯಗಳಲ್ಲಿ ಒಂದೂ ಇಲ್ಲ. ಎಲ್ಲಾ ಸತ್ತು ಹೋಗಿವೆ. ಸ್ವಾತಂತ್ರ್ಯಕ್ಕೆ ಮೂಲಭೂತವಾಗಿರತಕ್ಕಂಥ ಹಕ್ಕುಗಳನ್ನು ತೆಗೆದು ಹಾಕಿದ್ದಾರೆ. ಸರ್ಕಾರದವರು ತಮ್ಮ ದಾರಿ ಎಷ್ಟು ಸುಗಮವಾಗಿ ನಡೆಯಬೇಕೋ ಅಷ್ಟು ಸುಗಮವಾಗಿ ನಡೆಯಲು ಅನುಕೂಲಕರವಾದ ನೀತಿಯನ್ನು ಅನುಸರಿಸಿ ಆಡಳಿವನ್ನು ನಡೆಸುತ್ತಿದ್ದಾರೆ. ಇವತ್ತು ಸ್ವಾತಂತ್ರ್ಯವಿಲ್ಲ. ನಾವು ಮಾತನಾಡುವಾಗ ಹಾಗೆ ಇಲ್ಲ. ಮತ್ತು ಶಾಂತಿಯುತವಾಗಿ ಒಂದು ಕಾರ್ಮಿಕ ವರ್ಗವೇ ಆಗಲೀ, ಶ್ರಮಜೀವಿ ವರ್ಗವೇ ಆಗಲೀ ಅಥವಾ ರೈತವರ್ಗವೇ ಆಗಲೀ ಒಂದೆಡೆ ಸೇರಿ ಸಭೆ ನಡೆಸುವ ಹಾಗೆ ಇಲ್ಲ. ಒಂದು ಕಡೆಯಿಂದ ಮತ್ತೊಂದು ಕಡೆಗೆ ನಾವು ಸಂಚಾರ ಮಾಡುವ ಹಾಗೆಯೂ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಯಾವುದನ್ನೂ ಕೂಡ ಲಿಮಿಟ್ ಬಿಟ್ಟು ಹೋಗಕೂಡದು. ಸರಿಯಾದ ರೀತಿಯಲ್ಲಿ ಸ್ವಾತಂತ್ರ್ಯವನ್ನು ಉಪಯೋಗ ಮಾಡಿಕೊಂಡರೆ ಅದರ ಉಪಯೋಗ ಸರಿಯಾಗಿರುತ್ತದೆಯೇ ವಿನಹಃ ಹತೋಟಿ ಬಿಟ್ಟು ಹೋದರೆ ಅದರಿಂದ ಬಹಳ ತೊಂದರೆಯಾಗುತ್ತದೆ, ಇದನ್ನು ತಾವು ಒಪ್ಪಬಹುದು.

ಶ್ರೀ ಎಚ್. ಟಿ. ಕೃಷ್ಣಪ್ಪ .—ಸ್ವಾಮಿ, ಮಾನ್ಯ ಚನ್ನಬಸಪ್ಪನವರು ಮಧ್ಯೆ ಪ್ರವೇಶಮಾಡಿ ಹೇಳಿದ್ದರಿಂದ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಇವತ್ತಿನ ದಿವಸ ಮಾನ್ಯ ದೇವೇಗೌಡರವರಿಗೆ ಶಸ್ತ್ರಚಿಕಿತ್ಸೆಯಾಗಿದೆ. ಅವರನ್ನು ನೋಡಲು ಅವರ ಮಕ್ಕಳಿಗೇ ಅವಕಾಶ ಕೊಡುತ್ತಿಲ್ಲ. ಇದನ್ನು ತಾವು ತಮ್ಮ ಅಂತಃಕರಣದಿಂದ ಒಪ್ಪುತ್ತೀರಾ ? ಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳ ವ್ಯಾಖ್ಯಾನ ಏತಕ್ಕೆ ಬೇಕು ? ವಾಸ್ತವವಾಗಿ ಕಾಣುತ್ತಿರತಕ್ಕಂಥ ವಿಷಯಗಳಿಗೆ ?

ಶ್ರೀ ಸಿ. ಬೈರೇಗೌಡ.— ಇವತ್ತಿನ ದಿನ ರೈತರಿಗೇ ಆಗಲೀ, ಶ್ರಮಜೀವಿ ವರ್ಗಕ್ಕೇ ಆಗಲೀ ಒಂದು ಕಡೆ ಸೇರಿ ಅವರ ಮೇಲೆ ನಡೆಯುತ್ತಿರತಕ್ಕಂಥ ದಬ್ಬಾಳಿಕೆಯನ್ನು ಖಂಡಿಸ ಲಿಕ್ಕೆ ಸ್ವಾತಂತ್ರ್ಯವಿಲ್ಲ. ಈ ದೇಶದಲ್ಲಿ ಗುತ್ತೇದಾರಿ ಬಂಡವಾಳ ಶಾಹಿಗಳು ಸ್ವಾತಂತ್ರ್ಯರಾಗಿ ಸ್ವೇಚ್ಛೆಯಿಂದ ಇದ್ದಾರೆ. ಅಂಥವರ ಮೇಲೆ ಕ್ರಮ ತೆಗೆದಕೊಳ್ಳದೇ ಹಾಗೇ ಬಿಟ್ಟಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಸುಮ್ಮನೇ ಅಪಪ್ರಚಾರ ಮಾಡುವುದು ಸರಿಯಲ್ಲ. ಅವರು ಹೆಚ್ಚು ಇವರು ಕಡಿಮೆ ಎಂದು ಹೇಳತಕ್ಕಂಥದ್ದು ಸರಿಯಲ್ಲ. ಅವರಲ್ಲಿ ಅರ್ಥವಿಲ್ಲ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಒಂದೇ.

ಶ್ರೀ ಸಿ. ಬೈರೇಗೌಡ.— ಈಗ ತಾವು 8.1/3 ಪರ್ಸೆಂಟ್ ಬೋನಸ್ ಕೊಡುತ್ತಿದ್ದನ್ನು 4 ಪರ್ಸೆಂಟ್‌ಗೆ ಇಳಿಸಿದ್ದೀರಿ. ಅದನ್ನು ಪ್ರಶ್ನೆಮಾಡುವ ಹಕ್ಕು ಇವತ್ತಿನ ದಿವಸ ಕಾರ್ಮಿಕ ವರ್ಗದವರಿಗೆ, ಶ್ರಮ ಜೀವಿ ವರ್ಗದವರಿಗೆ ಇಲ್ಲ. ಇವತ್ತಿನ ದಿವಸ ಅವರಿಗೆ ಕೊಡಬೇಕಾಗಿದ್ದಂಥ ಬೋನಸ್ ಏನಿದೆ ಈ ಆರ್ಡಿನೆನ್ಸ್ ಬಂದಾಗಿನಿಂದ ಈಚೆಗೆ ಸುಮಾರು 250 ಕೋಟಿ ರೂಪಾಯಿ ಗಳಷ್ಟು ಹಣ ಈ ದೇಶದಲ್ಲಿರತಕ್ಕಂಥ ಗುತ್ತೇದಾರಿ ಬಂಡವಾಳ ಶಾಹಿಗಳ ಕೈಯಲ್ಲಿ ಸೇರಿಹೋಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಕಾರ್ಮಿಕರಿಗೆ ಬೋನಸ್ ಕಡಿಮೆ ಮಾಡಿದ್ದರಿಂದ ಬಾಕಿ ಹಣ ಅವರಿಗೇ ಸೇರಿ ಹೋಯಿತು ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಸಿ. ಬೈರೇಗೌಡ.— ಅದು ಸರ್ಕಾರಕ್ಕೆ ಬಂದಿದ್ದರೆ ನಾನು ಸಂತೋಷಪಡುತ್ತಿದ್ದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಅವರಿಗೆ ಬೋನಸ್ ಕೊಡುವುದು ಉತ್ಪಾದನೆಯನ್ನು ಅವಲಂಬಿಸಿರುತ್ತದೆ. ಅದು ಉತ್ಪಾದನೆಗೆ ಅನುಗುಣವಾಗಿರಬೇಕು ಎನ್ನುವುದೇ ತತ್ವ. ನಷ್ಟ ಹೊಂದುತ್ತಿದ್ದರೂ ಅವರಿಗೆ ಹೆಚ್ಚಿನ ಬೋನಸ್ ಕೊಡಬೇಕು ಎನ್ನುವುದು ಸರಿಯಲ್ಲ. ಸರಿಯಾದ ವಿಷಯಗಳನ್ನು ಹೇಳಿದರೆ ನಾವು ಒಪ್ಪುತ್ತೇವೆ. ಸತ್ಯಾಂಶಗಳನ್ನು ಹೊರಗೆಡುವುದರಲ್ಲಿ ತಪ್ಪಿಲ್ಲ.

ಶ್ರೀ ಸಿ. ಬೈರೇಗೌಡ.— ಇವತ್ತಿನ ದಿವಸ ಸಕ್ಕರೆಯನ್ನು ಉತ್ಪಾದನೆ ಮಾಡತಕ್ಕಂಥವರು ಪಾಪ ಬಹಳ ಬಡವರೇ ಆಗಿರತಕ್ಕಂಥವರು, ಅವರಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದೆ. ಸಿಗುತ್ತಿಲ್ಲ. ಇವತ್ತು ಕಂಟ್ರೋಲ್ ಬಟ್ಟೆಯ ಬೆಲೆಯನ್ನು ಜಾಸ್ತಿ ಮಾಡಿದ್ದೀರಿ ಮತ್ತು ಅದರ ಗುಣ ಮಟ್ಟವೂ ಕಡಿಮೆಯಾಗಿದೆ. ಅದನ್ನು ಸರ್ಕಾರದರೇ ಒಪ್ಪಿಕೊಂಡಿದ್ದಾರೆ ಒಂದು ಕಡೆ ಬೆಲೆಯನ್ನು ಹೆಚ್ಚು ಮಾಡಿ ಅವರಿಗೆ ಹೆಚ್ಚಿನ ಲಾಭವನ್ನು ಬರುವ ಹಾಗೆ ಮಾಡಿದ್ದೀರಿ. ಮತ್ತೊಂದು ಕಡೆ ಜನತೆಗೆ ಒಳ್ಳೆಯ ಗುಣ ಮಟ್ಟ ಹೊಂದಿರತಕ್ಕಂಥ ಬಟ್ಟೆ ಸಿಗುತಿಲ್ಲ. ಇದನ್ನು ಯಾರೂ ಕೇಳುವವರೇ ಇಲ್ಲ. ಇಷ್ಟೇ ಅಲ್ಲಾ ಇವತ್ತು ಉತ್ಪಾದನೆ ಕೂಡ ಹೆಚ್ಚಾಗಿದೆ ಎಂದು ಹೇಳುತ್ತಿದ್ದೀರಿ. ಅವರೆ ನಾನು ಒಂದೆರಡು ಉದಾಹರಣೆಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಸುಮಾರು 105 ಮಿನಿ ಸ್ಟೀಲ್ ಪ್ಲಾಂಟ್‌ಗಳನ್ನು ಮುಚ್ಚಿದ್ದಾರೆ. ಕಾರಣ ಉತ್ಪಾದನೆಯಾಗಿಂತಕ್ಕಂಥ ವಸ್ತುಗಳು ಖರ್ಚಾಗುತ್ತಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ.— ಅವುಗಳ ಗುಣಮಟ್ಟ ಚೆನ್ನಾಗಿರಲಿಲ್ಲ. ಅದಕ್ಕೆ ಅವು ಮುಚ್ಚಿವೆ. ಅದಕ್ಕೆ ನಾವೇನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ.— ಅಷ್ಟೇ ಅಲ್ಲ ಅಲ್ಯೂಮಿನಿಯಂ ಫ್ಯಾಕ್ಟರಿಯಲ್ಲಿ 25 ಸಾವಿರ ಟನ್‌ಗಳಷ್ಟು ಅಲ್ಯುಮಿನಿಯಂ ಓವರ್ ಸ್ಟಾಕ್ ಆಗಿದೆ. ಮೋಟಾರ್ ವಾಹನಗಳ ಟೈರ್‌ಗಳ ಉತ್ಪಾದನೆ ಜಾಸ್ತಿಯಾಗಿದೆ. ಅವು ಕೂಡ ಖರ್ಚಾಗುತ್ತಿಲ್ಲ. ಇವತ್ತಿನ ದಿವಸ ಆ ಕಾರ್ಖಾನೆಗಳನ್ನು ಕೂಡ ಮುಚ್ಚಿಬಿಟ್ಟರೆ ಅಲ್ಲಿ ಕೆಲಸಮಾಡುತ್ತಿರತಕ್ಕಂಥ ಕಾರ್ಮಿಕರು ಬೀದಿ ಪಾಲು ಆಗುವಂಥ ಪರಿಸ್ಥಿತಿ ಕಾಣುತ್ತಿದೆ.

ಶ್ರೀ ಬಿ. ವಿ. ಕಕ್ಕಿಲಾಯ.— ಸ್ವಾಮಿ, ಅಲ್ಯುಮಿನಿಯಂ, ಉಕ್ಕು ಒಂದೇ ಅಲ್ಲ, ನಾನು ಹಂಚನ್ನು ತಯಾರು ಮಾಡತಕ್ಕಂಥ ಊರಿನಿಂದ ಬರುವವನಾದ್ದರಿಂದ ಒಂದು ಮಾತನ್ನು ಹೇಳಬಯಸುತ್ತೇನೆ. ಹಂಚುಗಳು ಸ್ಟಾಕ್ ಇದೆ ಎಂದು ಹೇಳುತ್ತಾರೆ. ಆದರೆ ಅಲ್ಲಿ ಸಾಕಷ್ಟು ಸ್ಟಾಕ್ ಇಲ್ಲ. ಕಾರ್ಖಾನೆಯನ್ನು ಮುಚ್ಚುವುದಕ್ಕೋಸ್ಕರ ಯಾವುದೋ ಒಂದು ಕಾರಣವನ್ನು ಹೇಳುತ್ತಿದ್ದಾರೆ. ದಯವಿಟ್ಟು ತಾವು ಅದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

5-00 P. M.

ಶ್ರೀ ಸಿ. ಬೈರೇಗೌಡ.—ಇವೊತ್ತಿನ ದಿವಸ ನಾನು ಸೆಲ್ಫ್ ರಿಲೆಯನ್ಸ್ ಎಂಬ ಪದವನ್ನು ಕೇಳುತ್ತಿದ್ದೇನೆ. ಅದು ಏನೆಂದರೆ ನಮ್ಮ ದೇಶದಲ್ಲಿ ಎಲ್ಲ ತರಹ ಉತ್ಪಾದನೆಯನ್ನು ನಾವು ಮಾಡಬೇಕಾಗುತ್ತದೆ. ಇವೊತ್ತಿನ ದಿವಸ ನಮ್ಮಲ್ಲಿರತಕ್ಕ ಬಂಡವಾಳ ಏನಾಗಿದೆ ಎಂದರೆ ಹೊರದೇಶದಿಂದ ಸಾಲವನ್ನು ತರದೇ ಇದ್ದರೆ ಕಾಳಿ ನದಿ ಯೋಜನೆಯಾಗಲಿ ಅಥವಾ ಯಾವ ಒಂದು ಯೋಜನೆಯೋ ಆಗಲೀ ನಮ್ಮ ಹಣದಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ದೇಶದ ಪರಿಸ್ಥಿತಿ ಏನಾಗಿದೆ ಎಂದು ನೋಡಿದರೆ 1973ರಲ್ಲಿ ಹೊರದೇಶ ಬಂಡವಾಳ ಹೂಡಿದ್ದು 254 ಕೋಟಿ ರೂಪಾಯಿಗಳು ಮಾತ್ರ. ಆದರೆ ಈ ಒಂದು ತುರ್ತು ಪರಿಸ್ಥಿತಿ ಬಂದಮೇಲೆ ಏನಾಗಿದೆ ಎಂದರೆ ಒಂದು ಸಾವಿರ ಕೋಟಿ ರೂಪಾಯಿಗಳು ಹೊರದೇಶದಿಂದ ವಿದೇಶಿ ನೆರವು ಬಂದಿದೆ. ನಮ್ಮ ಸ್ಥಿತಿ ವಿದೇಶದ ನೆರವಿನ ಸಹಾಯದಿಂದ ಮಾತ್ರವಾಗಿದೆ. ಇಲ್ಲಿ ಸೆಲ್ಫ್ ರೆಲಿಯನ್ಸ್‌ಗೆ ಸ್ಥಾನವೇ ಇಲ್ಲ.

ಶ್ರೀ ಬಿ. ವಿ. ಕಕಿಲಾಯ.—ಈಗ ಕುದುರೆಮುಖ ಯೋಜನೆಗೆ ಬರುವ ಹಣ ಯಾರು ದಾನವಾಗಿ ಕೊಡುತ್ತಾರೆ ಇಲ್ಲ.

ಶ್ರೀ ಸಿ. ಬೈರೇಗೌಡ.—ಇನ್ನು ರಾಜ್ಯಪಾಲರ ಭಾಷಣದಲ್ಲಿ ಕಮ್ಯುನಲ್ ರೈಟ್ಸ್ ಎಂಬ ಬಗ್ಗೆ ಹೇಳಿದ್ದಾರೆ ಅದು ಬಹಳ ಸ್ವಾಗತಾರ್ಹ, ಇದನ್ನು ಹಿಂದೆ ಯಾರು ಮಾಡುತ್ತಿದ್ದರು? ಅದು ಬಹಳ ಮುಖ್ಯ, ಮೊದಲು ಬೊಂಬಾಯಿಗೆ ಹೋದರೆ ಶಿವಸೇನೆಯನ್ನು ಕಂಕುಳಲ್ಲಿ ಎತ್ತಿಕೊಳ್ಳುತ್ತಿದ್ದರು. ಅವರು ಯಾರು ಎಂದು ಕೇಳುತ್ತೇನೆ. ನೀವೆ ಅಲ್ಲವೆ?.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ರಾಜ್ಯಪಾಲರು ಭಾಷಣದಲ್ಲಿ ಹೇಳಿರುವುದು ಕರ್ನಾಟಕದ ವಿಷಯ. ಬೊಂಬಾಯಿಯಲ್ಲಿ ಏನು ನಡೆದಿದೆ ಎನ್ನುವುದನ್ನು ಅವರು ಇಲ್ಲಿ ಹೇಳಿಲ್ಲ; ಮಹಾರಾಷ್ಟ್ರದ ಪರಿಸ್ಥಿತಿ ಹೇಳಲಿಲ್ಲ, ಕರ್ನಾಟಕದ ಪರಿಸ್ಥಿತಿ ಹೇಳಿದ್ದಾರೆ, ಅದರಲ್ಲಿ ಏನಾದರೂ ತಪ್ಪಿದ್ದರೆ ತಾವು ಹೇಳಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಚನ್ನಬಸಪ್ಪನವರ ವಾದ ಒಪ್ಪುವುದಾದರೆ ತುರ್ತು ಪರಿಸ್ಥಿತಿಗೆ ಅವಕಾಶ ಇಲ್ಲ ಇದೆಯೇ? ಅಥವಾ ಇಲ್ಲವೇ ?.

ಶ್ರೀ ಕೊಣಂದೂರು ಲಿಂಗಪ್ಪ.—ತಮ್ಮ ಕಡೆಯ ಮಾನ್ಯ ಸದಸ್ಯರು ಜಯಪ್ರಕಾಶ್‌ನಾರಾಯಣ್ ಅವರ ಸುದ್ದಿಯನ್ನು ಏತಕ್ಕೆ ಹೇಳಬೇಕು ಎಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಇನ್ನು ನಮ್ಮ ದೇಶಕ್ಕೆ ಸಂಬಂಧಪಟ್ಟ ಹಾಗೆ ಭೂ ಸುಧಾರಣೆ ವಿಷಯ ಹೇಳುವುದಾದರೆ, ಇದನ್ನು ಮೆಚ್ಚತಕ್ಕವರೂ, ಇದು ಆಗಲೇಬೇಕು ಎಂದು ನಿರ್ದಿಷ್ಟವಾದ ಧೋರಣೆಯನ್ನು ಇಟ್ಟುಕೊಂಡಿರುವವರು ಬಹಳ ಜನ ಇದ್ದಾರೆ. ಆದರೆ ಇದು ಇವೊತ್ತಿನ ದಿವಸ ಏನಾಗಿದೆ ಎಂದರೆ ಅನೇಕ ಕಡೆಗಳಲ್ಲಿ ಭೂ ಮಾಲೀಕರ ಅಧಿಕಾರಿಗಳು ಶಾಮೀಲಾಗಿ ಜಮೀನಿಗೆ ಸಂಬಂಧಪಟ್ಟ ಡಿಕ್ಲರೇಷನ್ ಕೊಡುವ ಬಗ್ಗೆ ಕಾಲವನ್ನು ಮುಂದುವರಿಸಿದ್ದಾರೆ. ಇದಕ್ಕೆ ಕಾರಣ ಏನೆಂದರೆ ಅನೇಕ ಕಡೆ ಫಾರಂ ನಂ. 7 ಬರಬೇಕಾದ್ದು ಬರಲಿಲ್ಲ ಎಂದು ಹೇಳಿ ಕಾಲಾವಕಾಶವನ್ನು ಮುಂದುವರಿಸಿದ್ದಾರೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಬಲಯುತ ಶಕ್ತಿಗಳು ಜನತೆಗಳ

ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ ಎನ್ನುವುದು ಸರ್ಕಾರಕ್ಕೆ ವೇದ್ಯವಾಗಿದೆ. ಈ ಡಿಕ್ಲರೇಷನ್ ಬಾರದೇ ಇರುವ ಕಡೆ ಹೋಗಿ, ನೀವು ಇಂತಹ ಕಾನೂನು ಪ್ರಕಾರ ಡಿಕ್ಲರೇಷನ್ ತೆಗೆದುಕೊಂಡು ಕೊಡಬೇಕು ಎಂದು ಹೇಳತಕ್ಕ ಪರಿಸ್ಥಿತಿ ಇರುವಾಗ, ಆ ಜನಗಳ ಸಂಘಟನೆ ಮಾಡತಕ್ಕವರು ಜೈಲಿಗೆ ಹೋಗುವ ಪರಿಸ್ಥಿತಿ ಬಂದಿದೆ. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿ ಭೂ ನ್ಯಾಯ ಮಂಡಲಿಗೆ ಅರ್ಜಿ ಹಾಕಿದ್ದ ರೈತರ ಪರವಾಗಿ ಬಂದ ಇಬ್ಬರು ಕಾರ್ಯಕರ್ತರನ್ನು ಭೂ ಮಾಲಿಕರ ಚಿತಾವಣೆಯಿಂದ ಘೋಷಣೆ ಕೂಗಿದರು ಎಂಬ ನೆಪದ ಮೇಲೆ ಡಿ. ಐ. ಆರ್. ನಲ್ಲಿ ಅರೆಸ್ಟ್ ಮಾಡಿದ್ದಾರೆ, ಇದು ಯಾವ ನ್ಯಾಯ ಎಂದು ಕೇಳುತ್ತೇನೆ. ಬೇಕಾದರೆ ಇದರ ಬಗ್ಗೆ ನನ್ನ ಹತ್ತಿರ ಪೂರ್ತಿ ಮಾಹಿತಿ ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಪಕ್ಷದ ಕಾರ್ಯಕರ್ತರ ಬಗ್ಗೆಯೂ ಹೀಗೆ ಆಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರನ್ನು ಏತಕ್ಕೋಸ್ಕರ ಅರೆಸ್ಟ್ ಮಾಡಿದ್ದಾರೆ ದಲನ್ನು ವಿಚಾರ ಮಾಡದೆ ತೀರ್ಮಾನ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಇವೊತ್ತಿನ ದಿವಸ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಒಂದೆರಡು ಗುರುತರವಾದ ವಿಷಯವನ್ನು ಪ್ರಶ್ನೆ ಮಾಡುತ್ತೇನೆ. ನಮ್ಮ ಮಾನ್ಯ ಸದಸ್ಯರಾದ ನಾಯನಾಕ ಅವರು ಬೆಳಗಾಂನಲ್ಲಿರತಕ್ಕ ಅಲ್ಯೂಮಿನಿಯಂ ಫ್ಯಾಕ್ಟರಿಗೆ ವಿದ್ಯುಚ್ಛಕ್ತಿಯನ್ನು ಯಾವ ದರದಲ್ಲಿ ಸರಬರಾಜು ಮಾಡುತ್ತಿದ್ದೀರಾ ಎಂದು ಕೇಳಿದರು, ಇದರ ಬಗ್ಗೆ ಮಾನ್ಯ ಚನ್ನಬಸಪ್ಪನವರು ಹಿಂದೆಯೇ ಇದರಿಂದ ಸರ್ಕಾರಕ್ಕೆ ಎರಡು ಕೋಟಿ ರೂಪಾಯಿ ನಷ್ಟವಾಗುತ್ತಿದೆ ಎಂದು ಹೇಳಿದ್ದರು. ಇವೊತ್ತಿನ ದಿವಸ ಅನೇಕ ಬ್ಯಾಂಕುಗಳ ರಾಷ್ಟ್ರೀಕರಣವಾಯಿತು, ಈ ರಾಜ್ಯದ ಬೊಕ್ಕಸಕ್ಕೆ ಬರತಕ್ಕ ಎರಡು ಕೋಟಿ ರೂಪಾಯಿಗಳ ನಷ್ಟವಾಗುತ್ತಿದ್ದರೂ ಕೂಡ ಇವರಿಗೆ ಇನ್ನು ಆ ಕಡೆ ಕಣ್ಣು ಕಾಣಲಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಒಂದು ರೂಪಾಯಿ ತೊಂಭತ್ತೈದು ಪೈಸೆ ಅಂತ ಕೊಡುತ್ತಿದ್ದುದು ತಪ್ಪು ಅದು ಯಾವುದೋ ಒಂದು ಅಗ್ರಿಮೆಂಟ್ ಆಗಿತ್ತು, ಅದನ್ನು ಈಗಾಗಲೇ ಸರಿಪಡಿಸಿ ಸರಿಯಾದ ರೀತಿಯಲ್ಲಿ ಹಣ ವಸೂಲ್ ಮಾಡುತ್ತಿದೆ, ಆದ್ದರಿಂದ ಸರ್ಕಾರಕ್ಕೆ ತಾವು ಶಹಭಾಸಗಿರಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, 12 ಪೈಸೆ ಪರ್ ಯೂನಿಟಿನಂತೆ ತಮಿಳುನಾಡು ಸರ್ಕಾರ ಕೇರಳಕ್ಕೆ ಸಪ್ಲೈ ಮಾಡುತ್ತಿದ್ದಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ತಾವು ಸುಮ್ಮನೆ ಮಾತನಾಡಬೇಡಿ. ತಮಗೆ ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್ ಕೊಡುತ್ತೇನೆ. ಅದನ್ನು ನೋಡಿ ಅನಂತರ ಮಾತನಾಡಿ.

ಶ್ರೀ ಸಿ. ಬೈರೇಗೌಡ.—ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಮತ್ತು ಹರಿಹರದ ಫಾಲಿಫೈಬರ್ ಕಂಪನಿಗೆ ಅರಣ್ಯ ಇಲಾಖೆಯಿಂದ ಕಚ್ಚಾ ಪದಾರ್ಥಗಳನ್ನು ಒದಗಿಸುತ್ತಿದ್ದಾರೆ. ಹರಿಹರದ ಫಾಲಫೈಬರ್ ಕಂಪನಿಗೆ ಒಂದು ಟನ್ನಿಗೆ 24 ರೂಪಾಯಿನಂತೆ ನೀಲಗಿರಿ ಮರವನ್ನು ಒದಗಿಸುತ್ತಿದ್ದಾರೆ. ಆದರೆ, ಇವತ್ತು ತುರ್ತು ಪರಿಸ್ಥಿತಿಯಲ್ಲಿ ರಾಜ್ಯಕ್ಕೆ ಬರಬೇಕಾಗಿರತಕ್ಕ ಆದಾಯ ಮತ್ತು ರಾಜ್ಯದ ಉತ್ಪನ್ನವನ್ನು ಹೆಚ್ಚಿಸುವ ಕಾರ್ಯಕ್ಕೆ ಉಪಯೋಗಿಸದೆ, ರಾಜಕೀಯ ಮುಖಂಡರನ್ನು ಜೈಲಿನಲ್ಲಿ ಇಡುವುದಕ್ಕೆ ಉಪಯೋಗಿಸುತ್ತಿದ್ದಾರೆ ಎಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಸಿದ್ದಯ್ಯ.—(ಸಂತೆಮಾರಹಳ್ಳಿ) ಸನ್ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ಅನುಮೋದಿಸುತ್ತಾ ಮತ್ತು ಬೆಂಬಲಿಸುತ್ತಾ, ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿಯವರು ವ್ಯಕ್ತಪಡಿಸಿದಂಥ ಅಭಿಪ್ರಾಯಗಳನ್ನು ಸಮರ್ಥನೆ ಮಾಡುತ್ತಾ, ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಬಹಳ ಪ್ರಾಮುಖ್ಯವಾಗಿ, ಇತ್ತೀಚೆಗೆ ನಮ್ಮ ಪ್ರಧಾನಿಯವರು ಬಡ ಜನತೆಯ ಏಳಿಗೆ ವಿಚಾರದಲ್ಲಿ ಪ್ರಾಧಾನ್ಯತೆ ಕೊಟ್ಟು, ಕೆಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಸ್ವಾಗತಾರ್ಹವಾದುದು. ಈ ಕಾರ್ಯಕ್ರಮಗಳನ್ನು ಜಾರಿಗೆ ಕೊಡುವ ದಿಶೆಯಲ್ಲಿ ನಾನು ಕೆಲವೊಂದು ಸಲಹೆಗಳನ್ನು ಸರ್ಕಾರದ

ಮುಂದಿಡುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಇದರಿಂದ ಬಡಜನತೆಗೆ ಹೆಚ್ಚು ಸೌಲಭ್ಯಗಳು ಸಿಗುವುದೆಂಬ ಆಶಾಭಾವನೆಯೂ ನನಗೆ ಇದೆ. 20 ಅಂಶದ ಕಾರ್ಯಕ್ರಮಗಳು, ಅದರಲ್ಲೂ ಜೀತ ಪದ್ಧತಿಯನ್ನು ರದ್ದು ಮಾಡಿರತಕ್ಕ ಕಾರ್ಯ ಅತಿಶ್ಲಾಘನೀಯವಾದದು. ಬಹಳ ಕಾಲದಿಂದಲೂ ಜಾರಿಯಲ್ಲಿದ್ದ ಈ ಸ್ಥಿತಿಯನ್ನು ನಾವು ಗುಲಾಮಗಿರಿ ಎಂದು ಕರೆದರೂ ಅದು ತಪ್ಪಾಗುವುದಿಲ್ಲವೆಂದು ತಿಳಿದಿದ್ದೇನೆ. ಮೊಟ್ಟ ಮೊದಲನೆಯದಾಗಿ, ಬಡವರು ಅಪಾರವಾಗಿ ಶೋಷಣೆಯಾಗತಕ್ಕದನ್ನು ತಪ್ಪಿಸಿದ್ದಾರೆ. ಬಡವರಲ್ಲಿ, ಅದರಲ್ಲೂ ಹರಿಜನ ಗಿರಿಜನರ ಜೀವನದಲ್ಲಿ ಈ ಒಂದು ಕ್ರಮ ಹೊಸ ಜೀವನವನ್ನೇ ಶುರು ಮಾಡಿದೆ ಎಂದೇ ನಾನಾದರೂ ಭಾವಿಸಿದ್ದೇನೆ.

ಇನ್ನು ಎರಡನೆಯದಾಗಿ, ಹಳ್ಳಿಗಾಡುಗಳಲ್ಲಿ ಋಣಭಾರದಿಂದ ನರಳುತ್ತಿದ್ದ ಬಡವರನ್ನು ಸರ್ಕಾರ ರುಣದಿಂದ ವಿಮುಕ್ತಗೊಳಿಸಿದ್ದಾರೆ. ಇದನ್ನು ನಾನು ಸ್ವಾಗತ ಮಾಡುವುದರ ಜೊತೆಗೆ, ಇದರಲ್ಲಿರುವ ನ್ಯೂನತೆಯನ್ನೂ ಹೇಳುತ್ತೇನೆ. ಈ ದೇಶದಲ್ಲಿ ಜೀತ ಪದ್ಧತಿಯಿಂದ ಮತ್ತು ಋಣಭಾರದಿಂದ ವಿಮುಕ್ತಗೊಳಿಸಿದ ನಂತರ, ಅವರಿಗೆ ಜೀವನ ಮಾಡಲಿಕ್ಕೆ ಅನೇಕ ನ್ಯೂನತೆಗಳು ಬಂದಿವೆ, ಕೆಲವರಿಗಂತೂ ಜೀವನೋಪಾಯಕ್ಕೇ ಕಷ್ಟ ಇದೆ ಎಂದು ಹೇಳುತ್ತೇನೆ. ಇದು ನಿಜವೂ ಹೌದು; ಮತ್ತು ಈ ಮನೆಯ ಸದಸ್ಯರೂ ಒಪ್ಪುತ್ತಾರೆಂದು ನಾನೂ ಭಾವಿಸಿದ್ದೇನೆ. ಆದುದರಿಂದ, ಇವುಗಳಿಂದ ಬಿಡುಗಡೆ ಹೊಂದಿದ ಜನರು ಪುನಃ ಇನ್ನೊಮ್ಮೆ ಶೋಷಣೆಗೆ ಒಳಗಾಗದೆ, ಜೀವನ ಮಾಡಲು ಅನುಕೂಲವಾಗುವಂಥ ಕೆಲವು ಸಲಹೆಗಳನ್ನು ತಮ್ಮ ಮೂಲಕ ಸರ್ಕಾರದ ಪರಿಶೀಲನೆಗೆ ಇಡಬಯಸುತ್ತೇನೆ.

ಪ್ರಧಾನಮಂತ್ರಿಯವರು ಘೋಷಿಸಿರುವ 20 ಅಂಶದ ಕಾರ್ಯಕ್ರಮಗಳಲ್ಲಿ ಒಂದಾಗಿ ಜನಗಳಿಗೆ ಹೆಚ್ಚು ನೌಕರಿಗಳನ್ನು ಒದಗಿಸಿಕೊಡುವ ಯೋಜನೆಯನ್ನೂ ಇಟ್ಟುಕೊಂಡಿದ್ದಾರೆ. ಈಗ ಜೀತದಿಂದ ಬಿಡುಗಡೆ ಹೊಂದಿದಂಥ ಜನರಲ್ಲಿ ಕೆಲವರು ವಿದ್ಯಾವಂತರಿದ್ದಾರೆ; ಮತ್ತೆ ಕೆಲವರು ಅವಿದ್ಯಾವಂತರೂ ಇದ್ದಾರೆ. ಅಂತಹವರಿಗೆ ಸರ್ಕಾರದಲ್ಲಿ ಜವಾನನ ಹುದ್ದೆಯಾಗಲಿ, ಡ್ರೈವರ್ ಹುದ್ದೆಯಾಗಲೀ ತೆಗೆದುಕೊಳ್ಳುವಂಥ ಅವಕಾಶಗಳು ಇವೆ. ಆದುದರಿಂದ, ಜೀತದಿಂದ ವಿಮುಕ್ತಗೊಂಡಂಥ ಜನರಿಗೆ ಸರ್ಕಾರದವರು ಕೊಡುವ ಹುದ್ದೆಯ ಸಂಬಂಧವಾಗಿ ಟ್ರೈನಿಂಗ್ ವಗೈರೆ ಕೊಟ್ಟರೆ ಅವರ ಜೀವನೋಪಾಯಕ್ಕೆ ಮಾರ್ಗ ಮಾಡಿಕೊಟ್ಟಂತಾಗುತ್ತದೆ. ನಮ್ಮ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಸಾರಿಗೆಯನ್ನು ರಾಷ್ಟ್ರೀಕರಣ ಮಾಡುವುದು ಜಾಸ್ತಿಯಾಗುತ್ತಾ ಇರುವುದರಿಂದ, ಡ್ರೈವರುಗಳ ಅವಶ್ಯಕತೆ ಜಾಸ್ತಿ ಇರುತ್ತದೆ. ಅಂತಹ ಹುದ್ದೆಗಳಿಗೆ ನಾನು ಈ ಮೇಲೆ ಹೇಳಿದ ಜನರನ್ನೂ ಮತ್ತು ಹಿಂದುಳಿದಿರತಕ್ಕ ಇತರ ಜನಗಳಿಗೂ, ಅವರಿಗೆ ಟ್ರೈನಿಂಗ್ ಕೊಟ್ಟು, ಸರ್ಕಾರಿ ಸೇವೆಗೆ ತೆಗೆದುಕೊಳ್ಳುವುದರ ಬಗ್ಗೆ ಸರ್ಕಾರದವರು ಅತಿ ಜರೂರಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಹಿಂದೆ, ಸರ್ಕಾರದವರು ಪರಿಶೀಲನೆ ಮಾಡುತ್ತೇವೆ, ಟ್ರೈನಿಂಗ್ ಸ್ಕೂಲ್ ಕಟ್ಟಿದ್ದೇವೆ ಎಂದು ಹೇಳಿದರೂ ಸಹ ಟ್ರೈನಿಂಗ್ ಸ್ಕೂಲ್ ಇನ್ನೂ ಆಗಿಲ್ಲ. ಆದರೆ. ಕಂಡಕ್ಟರ್ ಹುದ್ದೆಗೆ ಸಂಬಂಧಪಟ್ಟಂತೆ ಟ್ರೈನಿಂಗ್‌ನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಆದರೆ, ಈಗಾಗಲೇ ಕಂಡಕ್ಟರ್ ಟ್ರೈನಿಂಗ್ ಆದವರಿಗೂ ಇನ್ನೂ ಕೆಲಸಗಳು ಸಿಗದೇ ಇರುವಂಥ ಪರಿಸ್ಥಿತಿ ಇರುವಾಗ, ಡ್ರೈವರುಗಳಿಗೆ ಟ್ರೈನಿಂಗ್ ಕೊಡುವ ವ್ಯವಸ್ಥೆ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡುತ್ತಾರೆಂದು ನಾನು ಆಶಿಸುತ್ತೇನೆ.

ಉದ್ಯೋಗಾವಕಾಶಗಳ ಬಗ್ಗೆ ಸರ್ಕಾರ ಮತ್ತು ಶ್ರೇಷ್ಠ ನ್ಯಾಯಾಲಯದವರು ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಅದರಲ್ಲಿ, ಸರ್ಕಾರಿ ಉದ್ಯೋಗಗಳಲ್ಲಿ ಮೀಸಲು ಸ್ಥಾನ ಮಾಡುವಾಗ, ಹಿಂದುಳಿದ ವರ್ಗಗಳಿಗೆ ಶೇಕಡ 50 ಭಾಗಕ್ಕಿಂತಲೂ ಹೆಚ್ಚು ಮಾಡಬಾರದು ಎಂದು ಇದೆ. ಆ ರೀತಿ ಮಾಡಿದ ಪಕ್ಷದಲ್ಲಿ ಯಾವುದೋ ಒಂದು ವರ್ಗದ ಜನರಿಗೆ ಮಾತ್ರ ಉದ್ಯೋಗಾವಕಾಶಗಳು ಹೆಚ್ಚು ಹೋಗುತ್ತವೆ. ಮತ್ತು ಅವರಲ್ಲಿ ಮನೋಪಲಿಯ ವರ್ತನೆ ಬರುತ್ತದೆ. ಆ ದೃಷ್ಟಿಯಿಂದ ಒಂದು ಮಿತಿ ಇಡಬೇಕೆಂದು ಅದರಲ್ಲಿ ಇದೆ. ಅದೇ ರೀತಿ ನಾವು ವಿಚಾರ ಮಾಡುವುದಾದರೆ, ಸರ್ಕಾರಿ ನೌಕರರನ್ನೂ ಸಹ ಒಂದು ವರ್ಗ ಎಂದು ಪರಿಗಣಿಸಬೇಕಾಗುತ್ತದೆ. ಜಾತಿ ಎಂದರೆ ಒಂದು ವರ್ಗವಾಗಬಹುದು; ಒಂದು ಗುಂಪಾಗಬಹುದು, ಅಥವಾ ಒಂದು ಕೋಮು ಆಗಬಹುದು. ಈ ದೃಷ್ಟಿಯಿಂದ ಸರ್ಕಾರಿ ನೌಕರರನ್ನೂ ಒಂದು ವರ್ಗ ಎಂದು ಪರಿಗಣಿಸಬೇಕಾಗುತ್ತದೆ. ಆ ರೀತಿ ಪರಿಗಣಿಸಿದರೆ ಏನೂ ತಪ್ಪಾಗುವುದಿಲ್ಲ ಎಂದು ತಿಳಿದಿದ್ದೇನೆ.

ಸರ್ಕಾರಿ ನೌಕರರನ್ನು ಒಂದು ವರ್ಗ ಎಂದು ತೀರ್ಮಾನಿಸಿದ ಮೇಲೆ ಹುದ್ದೆಗಳ ಪ್ರಮಾಣದಲ್ಲಿ ಕೆಲವೇ ಜನಗಳಿಗೆ ಹೆಚ್ಚು ಮೀಸಲಿಟ್ಟರೆ, ಅದು ಸಿಂಹಪಾಲಿನ ರೀತಿಯದಾಗಬಹುದು. ಇದರಿಂದ ಏನಾಗುತ್ತದೆ ಎಂದರೆ, ಅವರ ಮಕ್ಕಳಿಗೂ ತೆರವಿದ್ದ ಸ್ಥಾನ ಸಿಕ್ಕಿ, ಇದು ಒಂದು ರೀತಿಯ ಅನುವಂಶಿಕ ಪದ್ಧತಿಯಂತಾಗುವ ಅವಕಾಶವೂ ಇದೆ. ಆದುದರಿಂದ ಸರ್ಕಾರದವರು ಈ ಬಗ್ಗೆ ಪರಿಶೀಲನೆ ಮಾಡಿ, ಏತಕ್ಕೆ ವಾಲಂಟರಿ ಸಿಸ್ಟಂ ತರಬಾರದು ಎಂದು ಕೇಳುತ್ತೇನೆ. ಹೀಗೆ ಮಾಡಿದರೆ, ಕರ್ನಾಟಕಕ್ಕೆ ಒಂದು ಹೆಸರು ಬರುತ್ತದೆ, ಮತ್ತು ಪ್ರಪಂಚದಲ್ಲೇ ಮೊಟ್ಟ ಮೊದಲು ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯದ ತತ್ವವನ್ನು ಅನುಷ್ಠಾನಕ್ಕೆ ತಂದಂತಾಗುತ್ತದೆ. ಆದುದರಿಂದ, ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು, ಅನೇಕ ಹಿಂದುಳಿದ ವರ್ಗಗಳಿಗೆ ಮತ್ತು ಬಡವರಿಗೆ ಮೀಸಲಿಟ್ಟಿದ್ದ ಕೆಲವು ಸ್ಥಾನಗಳಿಗೆ ಅಭ್ಯರ್ಥಿಗಳು ದೊರೆಯುತ್ತಾ ಇಲ್ಲದಿರುವುದು ಕಂಡುಬಂದಿದೆ. ಇದಕ್ಕೆ ಕಾರಣ, ಆ ಹುದ್ದೆಗೆ ಸಂಬಂಧಪಟ್ಟಂತೆ ಟ್ರೈನಿಂಗ್ ಆಗಲೀ, ಅಥವಾ ಶಿಕ್ಷಣದ ಅರ್ಹತೆಯಾಗಲೀ ಇರುವುದಿಲ್ಲ ಎಂಬುದು ತಿಳಿದು ಬಂದಿದೆ. ಆದುದರಿಂದ, ಇಂಥಾ ಸಂದರ್ಭಗಳಲ್ಲಿ ಹಿಂದುಳಿದ ವರ್ಗದವರಿಗೆ ಅವಶ್ಯಕ ಟ್ರೈನಿಂಗ್‌ಗಳನ್ನು ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಎಂಪ್ಲಾಯಮೆಂಟ್ ಅಂಡ್ ಟ್ರೈನಿಂಗ್ ಎಂದು ಒಂದು ಖಾತೆ ಇದ್ದರೂ ಅದರ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಟ್ಟಿಲ್ಲ. ಇದರಿಂದ ಏನಾಗುತ್ತದೆ ಎಂದರೆ, ಹಿಂದುಳಿದ ವರ್ಗದ ಜನರಿಗೆ ಮೀಸಲಿಟ್ಟಿದ್ದ ಹುದ್ದೆಗಳು ಉಳಿದುಹೋಗತಕ್ಕ ಸಂದರ್ಭಗಳು ಇವೆ. ಆದುದರಿಂದ, ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು, ಸೂಕ್ತ ಕ್ರಮವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಎಂಪ್ಲಾಯಿಮೆಂಟ್ ಮತು ಟ್ರೈನಿಂಗ್ ಸೆಲೆಕ್ಷನ್ ಕಮಿಟಿಯಲ್ಲಿ ಹಿಂದುಳಿದಿರತಕ್ಕವರನ್ನು ಹಾಕಿದ್ದೀರಿ, ಆದರೆ ಸ್ವಲ್ಪ ತಿಳುವಳಿಕೆ ಇರತಕ್ಕ ವಿದ್ಯಾವಂತರಾಗಿರತಕ್ಕವರನ್ನು ಮತ್ತು ಯೋಗ್ಯರಾಗಿರತಕ್ಕವರನ್ನು ಹಾಕಿದರೆ ಬಡವರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಈಗ ಇರತಕ್ಕವರಿಗೆ ರೆಕ್ರೂಟ್‌ಮೆಂಟ್ ರೂಲ್ಸ್ ತಿಳಿದುಕೊಳ್ಳುವುದಕ್ಕೂ ಶಕ್ತಿ ಇಲ್ಲ ಅಂತಹವರನ್ನು ಹಾಕಿದ್ದೀರಿ. 20 ಅಂಶಗಳ ಕಾರ್ಯಕ್ರಮದ ಮೇರೆಗೆ ಹಿಂದುಳಿದಿರತಕ್ಕವರಿಗೆ ಜಮೀನು ಕೊಡುತ್ತಿದ್ದಾರೆ. ಇದು ಒಳ್ಳೆಯ ಕೆಲಸ. ಆದರೆ, ಅವರಿಗೆ ಆರ್ಥಿಕ ಸೌಕರ್ಯಗಳನ್ನು ಒದಗಿಸಿಕೊಡುವ ಏರ್ಪಾಡು ಮಾಡಬೇಕು. ಇದರ ಜೊತೆಗೆ ಷೆಡ್ಯೂಲ್ಡ್ ಕ್ಯಾಸ್ಟ್ ಫೈನಾನ್ಸ್ ಕಾರ್ಪೊರೇಷನ್ನಿನಿಂದಲೂ ಧನಸಹಾಯ ದೊರಕುವಂತೆ ವ್ಯವಸ್ಥೆ ಮಾಡಬೇಕು. ಸರ್ಕಾರದವರು ಕೊಟ್ಟಿರತಕ್ಕ ಜಮೀನನ್ನು ಆಬಾದು ಮಾಡಿಕೊಳ್ಳಲಿಕ್ಕೂ ಅವನಲ್ಲಿ ಆರ್ಥಿಕ ಶಕ್ತಿ ಇಲ್ಲ, ಷೆಡ್ಯೂಲ್ಡ್ ಕ್ಯಾಸ್ಟ್ ಫೈನಾನ್ಸ್ ಕಾರ್ಪೊರೇಷನ್ ಬೇಕಾದಷ್ಟು ಬಾಬಂಗಳಿಗೆ ಸಾಲ ಕೊಡುವ ಯೋಜನೆ ಹಾಕಿಕೊಂಡಿದೆ, ಅದರಲ್ಲಿ ಈ ಉದ್ದೇಶಕ್ಕೂ ಅವಕಾಶ ಮಾಡಿ ಕೊಟ್ಟರೆ ಅದರಿಂದ ಹಿಂದುಳಿದಿರತಕ್ಕವರಿಗೆ ಹೆಚ್ಚಿನ ಫಲ ದೊರೆಯುತ್ತದೆ. ಸರ್ಕಾರದವರು ಲ್ಯಾಂಡ್ ಗ್ರ್ಯಾಂಟ ಕೂಡ ಕೊಡುತ್ತಿದ್ದಾರೆ ಬುಲ್ಡೋಜರ ಮೂಲಕ ಬಡವನಿಗೆ ಕೊಡತಕ್ಕ ಜಮೀನನ್ನು ಸಮ ಮಾಡಿಸಿಕೊಟ್ಟರೆ ಒಳ್ಳೆಯದೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಕಮ್ಯೂನಿಟಿ ವೆಲ್ಸ್ ಬಗ್ಗೆ ಒಂದು ಮಾತು ಹೇಳುತ್ತೇನೆ, ಇದರಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಎಲ್ಲರಿಗೂ ಅಂದರೆ ಸಣ್ಣಪುಟ್ಟ ಹಿಡುವಳಿದಾರರಿಗೆ ತುಂಬಾ ಅನುಕೂಲವಾಗುತ್ತದೆ. ಕುರಿ ಮತ್ತು ಕೋಳಿ ಕೊಡುವುದಕ್ಕೆ ಬದಲಾಗಿ ಇಂಥ ಸಾಮೂಹಿಕ ಭಾವಿಗಳನ್ನು ತೆಗೆಸಿದರೆ ಹಿಂದುಳಿದ ಹಾಗೂ ಬಡವರಿಗೆ ತುಂಬಾ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಲ್ಯಾಂಡ್ ಗ್ರ್ಯಾಂಟ್ ಕಮಿಟಿಯವರು ಜಮೀನನ್ನು ಮಂಜೂರು ಮಾಡುತ್ತಾರೆ, ನಿಜವಾಗಿಯೂ ಎಷ್ಟೋ ಜನಗಳಿಗೆ ಸಾಗುವಳಿ ಚೀಟಿ ಸೇರುವುದಿಲ್ಲ. ನ್ಯಾಯವಾಗಿ ಸಾಗುವಳಿ ಚೀಟಿ ಬಡವನಿಗೆ ಸೇರದೆ ಹೋದರೆ ಅದರಿಂದ ಏನು ಪ್ರಯೋಜನವಾಗುವುದಿಲ್ಲ.

ಇನ್ನು ಮನೆಗಳನ್ನು ಕಟ್ಟಿಸಿ ಕೊಡುವ ಬಗ್ಗೆ ಒಂದು ಮನೆಗೆ 2,500 ರೂ. ಗಳಂತೆ ಸರ್ಕಾರದವರು ಕೊಡುತ್ತಿದ್ದಾರೆ, ಇದು ಸ್ವಾಗತಾರ್ಹವಾದುದು. ಆದರೆ 500 ರೂ. ಗಳನ್ನು ಕಾಂಟ್ರಿಬ್ಯೂಷನ್ ಕೊಡುವ ಶಕ್ತಿ ನಿಜವಾಗಿಯೂ ಅವನಲ್ಲಿ ಇಲ್ಲ. ಸರ್ಕಾರ ಈ ವಿಚಾರವಾಗಿ ಮತ್ತೆ ಪರಿಶೀಲನೆ ಮಾಡುವುದು ಮಾನವೀಯ ದೃಷ್ಟಿಯಿಂದ ಒಳ್ಳೆಯದೆಂದು ಕೇಳಿಕೊಳ್ಳುತ್ತೇನೆ. ಕೋ-ಆಪರೇಟಿವ್ ಬ್ಯಾಂಕುಗಳ ಮುಖಾಂತರ ಹಿಂದುಳಿದಿರತಕ್ಕವರಿಗೆ ಸಾಲ ಸೌಲಭ್ಯಗಳನ್ನು

ಒದಗಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಇದರಿಂದ ಪ್ರತಿಯೊಬ್ಬ ಬಡವನಿಗೂ ಧನ ಸಹಾಯ ಸಿಕ್ಕುವ ಹಾಗೆ ಮಾಡಬೇಕು. ಈಗ ಸಿಕ್ಕಿಸಿಕ್ಕಿದವರಿಗೆ ಅಂದರೆ, ಪ್ರಭಾವಶಾಲಿಯಾಗಿ ರುವವರೂ ಒಂದೇ ಸಂಸಾರದಲ್ಲಿ ಗಂಡ ಹೆಂಡತಿಗೆ ಜಾಮೀನಾಗಿ, ಹೆಂಡತಿ ಗಂಡನಿಗೆ ಜಾಮೀ ನಾಗಿ ಸಾಲ ಪಡೆಯುತ್ತಿದ್ದಾರೆ. ಆದ್ದರಿಂದ ಅದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಸರ್ಕಾರ ದಲ್ಲಿ ಕೇಳುತ್ತೇನೆ. ಅನೇಕರೂ ಡಿಫಾಲ್ಟರ್ಸ್‌ಗಳು ಇದ್ದಾರೆ, ಇದರ ಕಡೆಗೂ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಹಳ್ಳಿಗಳಿಗೆ ಹೆಚ್ಚಿನ ವಿದ್ಯುತ್‌ನ್ನು ಸರಬರಾಜು ಮಾಡುವುದು ನಮ್ಮ ಸರ್ಕಾರದ ನೀತಿಯಾಗಿದೆ. ಆದರೆ, ಸಾವಿರಾರು ಹಳ್ಳಿಗಳಲ್ಲಿ ಲೈಟ್ ಚಾರ್ಜು ಕಟ್ಟದೇ, ದೀಪಗಳು ಉರಿಯುತ್ತಿಲ್ಲ. ಕಲವು ಜನಗಳು ತಮ್ಮ ಮನೆಗಳಿಗೆ ಹಾಕಿಸಿಕೊಳ್ಳುವ ದುರುದ್ದೇಶ ದಿಂದ ಸರ್ಕಾರಕ್ಕೆ ಅಪಾರವಾದ ನಷ್ಟವನ್ನು ಉಂಟು ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ಡೆವಲಪ್‌ಮೆಂಟ್ ಸ್ಕೀಮಿಗೆ ಇದನ್ನು ಹಾಕಿದರೆ, ಕೋಟ್ಯಾಂತರ ರೂಪಾಯಿಗಳ ನಷ್ಟವಾಗುವುದು ತಪ್ಪುತ್ತದೆ. ಇನ್ನು ಬೇಕಾದಷ್ಟು ವಿಚಾರಗಳಿದ್ದರೂ ಸಮಯ ಇಲ್ಲದೇ ಇರುವುದರಿಂದ ಅಧ್ಯಕ್ಷ ರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎನ್ ಎಸ್. ಗುರುಸಿದ್ದಪ್ಪ (ಬಳಿಗೆರೆ).—ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ವಂದನಾ ನಿರ್ಣಯ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಬೇಕೆಂದು ಇದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಸುಗ್ಗಿಯಿಂದ ಆಹಾರ ಪದಾರ್ಥಗಳ ಬೆಲೆ ಇಳಿದಿದೆಯೆಂದು ಹೇಳಿದ್ದಾರೆ. ನಿಜ ವಾಗಿಯೂ ಕೂಡ ರೈತರಲ್ಲಿ ತುಂಬಾ ಕಳವಳ ಉಂಟಾಗಿದೆ. ಏತಕ್ಕೆಂದರೆ, ಆಹಾರ ಧಾನ್ಯ ಗಳ ಬೆಲೆ ಇಳಿಮುಖವಾಗಿದ್ದರೂ ರೈತರಿಗೆ ದೊಡ್ಡ ಯೋಚನೆಯಾಗಿದೆ. ಈಗ ಸರ್ಕಾರದವರು ಲೆವಿ ಫಿಕ್ಸ್ ಮಾಡಿ ರೈತರಿಂದ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುತ್ತಿರುವುದು ಸರಿಯಷ್ಟೆ. ಆದರೆ, ತಾವು ಕೊಂಡುಕೊಳ್ಳತಕ್ಕ ಪದಾರ್ಥಗಳಿಗೆ ಮಾರುಕಟ್ಟೆ ಬೆಲೆ ಕೊಡಬೇಕು, ಗೊಬ್ಬರ ಗಳ ಬೆಲೆ ಮಾಮೂಲು ಇದೆ, ಮಾರಮುಟ್ಟುಗಳ ಬೆಲೆ ಮಾಮೂಲು ಇದೆ, ಜೊತೆಗೆ ಲೇಬರ್ಸ್ ವೇಜಸ್ ಕೂಡ ಜಾಸ್ತಿಯಾಗಿದೆ. ಇದರ ಜೊತೆಗೆ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್ ಇಂಟರ್ ಡ್ಯೂಸ್ ಮಾಡಿದ್ದೀರಿ, ವಾಟರ್‌ರೇಟ್ ಜಾಸ್ತಿಯಾಗಿದೆ. ಇದನ್ನೆಲ್ಲಾ ಲೆಕ್ಕಹಾಕಿದರೆ ನಿಜವಾಗಿಯೂ ಹೇಗೆ ವ್ಯವಸಾಯ ಮಾಡಬೇಕು, ವ್ಯವಸಾಯವನ್ನು ಮಾಡುವುದೇ ಬಿಡುವುದೇ ಎನ್ನುವ ಪ್ರಸಂಗ ಈಗ ರೈತರಲ್ಲಿ ಬಂದಿದೆ. ಆದುದರಿಂದ ನಾನು ಸರ್ಕಾರಕ್ಕೆ ಕೇಳಿಕೊಳ್ಳು ವುದೇನೆಂದರೆ, ಸರ್ಕಾರದವರು ರೈತರಿಗೆ ಸಕಾಲಕ್ಕೆ ಸರಿಯಾಗಿ ಹಣ ಒದಗಿಸಿ, ಕಡಿಮೆ ಬಡ್ಡಿ ಯಲ್ಲಿ ಸಾಲ ಕೊಟ್ಟು ಅನುಕೂಲ ಮಾಡಿಕೊಡಬೇಕು.

ಈಗ ವ್ಯವಸಾಯಗಾರರು ಸಾಲಕ್ಕಾಗಿ ಬ್ಯಾಂಕ್‌ಗೆ ಹೋದರೆ 18 ಪರ್ಸೆಂಟ್ ಬಡ್ಡಿ ಹಾಕುತ್ತಿದ್ದಾರೆ. ಅದೂ ಅಲ್ಲದೆ ಅವರು ಸಕಾಲದಲ್ಲಿ ಹಣ ಕಟ್ಟದೇಹೋದರೆ ಸುಸ್ತಿ ಬಡ್ಡಿ, ಅಂಥಾ ಬಡ್ಡಿ, ಇಂಥಾ ಬಡ್ಡಿ ಹಾಕಿ ಅವರಿಂದ ಸುಲಿಗೆ ಮಾಡುತ್ತಿದ್ದಾರೆ. ಆದುದರಿಂದ ನಾನು ತಮ್ಮಲ್ಲಿ ಕೇಳುವುದು ಅವರಿಗೆ ರಿಯಾಯಿತಿ ಬಡ್ಡಿ ಮೇಲೆ ಸಾಲವನ್ನು ಒದಗಿಸಿಕೊಡ ಬೇಕು ಎಂದು. ಮತ್ತು ಈಗ ಗೊಬ್ಬರದ ರೇಟೂ ಕೂಡ ಕಡಿಮೆ ಮಾಡಬೇಕು ಎಂದು ಹೇಳ್ತೇನೆ. ಸರ್ಕಾರದ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿರುವಾಗ ರೈತರಿಗಾಗಿ ಸ್ವಲ್ಪ ಹಣ ವ್ಯಯ ಮಾಡಿದರೆ ಅದರಿಂದೇನೂ ಸರ್ಕಾರಕ್ಕೆ ತೊಂದರೆಯಾಗುವುದಿಲ್ಲ.

5-30 P.M.

ಇನ್ನು ಕೆಲವು ಔಷಧಗಳ ಬೆಲೆ ನೋಡಿದರೆ ಬಹಳ ಹೆಚ್ಚಾಗಿದೆ. ಯಾವ ಟೈಂನಲ್ಲಿ ಯಾವ ಬೆಳೆಗೆ ಏನು ರೋಗ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆ ಸಮಯದಲ್ಲಿ ಅವರ ಹತ್ತಿರ ದುಡ್ಡು ಇಲ್ಲದೆ ಔಷಧಿಗಳನ್ನು ತರದೆ ಆ ಬೆಳೆಯಲ್ಲಿ ನಷ್ಟ ಹೊಂದಿದ್ದಾರೆ. ಅಂಥಾ ಸಂದರ್ಭದಲ್ಲಿ ಸರ್ಕಾರ ದೊಡ್ಡ ಮನಸ್ಸು ಮಾಡಿ ಈ ಔಷಧಿಗಳನು ರೈತರಿಗೆ ಒಂದು ಸಬ್ಸಿಡಿ ರೇಟಿನಲ್ಲಿ ಒದಗಿಸಿದರೆ ಅವರಿಗೆ ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ. ಆಹಾರದ ಬೆಲೆಯೇನೋ ಈಗ ಕೆಳಮುಖಕ್ಕೆ ಬಂದಿದೆ. ಇದರಿಂದ ರೈತರಿಗೇನೋ ಸ್ವಲ್ಪಮಟ್ಟಿಗೆ ಕಷ್ಟ ವಾಗುತ್ತದೆ. ಆದುದರಿಂದ ಈ ರೈತರಿಗೆ ಯಾವ್ಯಾವುದರಲ್ಲಿ ಸಹಾಯ ಮಾಡಬೇಕೋ ಆ ರೀತಿ ಯಲ್ಲಿ ಸಹಾಯ ಮಾಡಿದರೆ ಅವನಿಗೆ ಅನುಕೂಲವಾಗುತ್ತದೆ. ಆಹಾರದ ಬೆಲೆಯೇನೋ ಇಳಿದಿರುವುದು

ಒಳ್ಳೆಯದು. ಅನೇಕ ಬಡ ಜನರು ಈಗ ಸುಖವಾಗಿ ಊಟ ಮಾಡುತ್ತಿದ್ದಾರೆ. ಹಿಂದೆ ಜೋಳ, ರಾಗಿ, ಅಕ್ಕಿ ಒಂದು ಕೆ.ಜಿ.ಗೆ 2–3 ರೂಪಾಯಿ ಆಗಿದ್ದಾಗ ಎಷ್ಟೋ ಜನ ಒಂದೊಂದು ಹೊತ್ತು ಊಟ ಮಾಡುವ ಸಂದರ್ಭ ಇತ್ತು. ಆಹಾರಧಾನ್ಯದ ಬೆಲೆ ಇಳಿದಿರುವುದರಿಂದ ಈಗಲಾದರೂ ರೈತರಿಗೆ ಏನಾದರೂ ಸಹಾಯ ಮಾಡಿ ಅವರಿಗೆ ಭದ್ರವಾಗುವ ಹಾಗೆ ಒಂದು ವ್ಯವಸ್ಥೆ ಮಾಡಿ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಋಣಭಾರದ ವಿಷಯದ ಬಗ್ಗೆ ಹೇಳುವುದಾದರೆ ಋಣಭಾರದ ಕಾಯಿದೆ ಏನೋ ಮಾಡಿರುವುದು ಒಳ್ಳೆಯದು. ಆದರೆ ಹಳ್ಳಿಗಳಲ್ಲಿ ಈ ಹಿಂದೆ ಇದ್ದುದು ಸಕಾಲದಲ್ಲಿ ರೈತನಲ್ಲಿ ಹಣ ಇರದೆ ಅವನು ಕೇವಲ ನಾಟಿ ಟೈಂನಲ್ಲಿ ಸಾಲ ಮಾಡಬೇಕಾಗಿತ್ತು. ಆ ಸಂದರ್ಭದಲ್ಲಿ ಅವನು 50 ರೂಪಾಯಿ ಸಾಲ ತೆಗೆದುಕೊಳ್ಳಬೇಕಾದರೆ ಸುಗ್ಗಿ ಕಾಲದಲ್ಲಿ ಆ ಸಾಲಕ್ಕೆ ಒಂದು ಪಲ್ಲ ಭತ್ತ ಕೊಡುತ್ತೇನೆಂತ ಹೇಳಿ, ಅದರಂತೆ ಕೊಡುತ್ತಿದ್ದ ಸಂದರ್ಭವೂ ಉಂಟು. ಇನ್ನು ಕೆಲವು ವೇಳೆ 100 ರೂಪಾಯಿಗೆ 6 ತಿಂಗಳಿಗೆ 10–15 ರೂಪಾಯಿ ಬಡ್ಡಿ ಕೊಡುತ್ತಿದ್ದ ಸಂದರ್ಭವೂ ಉಂಟು. ಎಷ್ಟೋ ರೈತರು ಸಾಲ ಸೋಲ ಮಾಡಿ ಸುಗ್ಗಿ ಕಾಲದಲ್ಲಿ ಬಂದ ಭತ್ತವನ್ನು ಅಳೆದುಬಿಟ್ಟು ಹೊಟ್ಟೆ ಮೇಲೆ ಒದ್ದೆ ಬಟ್ಟೆ ಹಾಕಕೊಳ್ಳತಕ್ಕಂಥಾ ಸಂದರ್ಭವೂ ಉಂಟಾಗಿತ್ತು. ಈ ಋಣಭಾರದ ಕಾಯಿದೆ ಈವಾಗ ಏನೂ ಹೊಸದಲ್ಲ. ಹಿಂದೆ ಮದ್ರಾಸ್‌ನಲ್ಲಿ ರಾಜಗೋಪಾಲಚಾರಿಯವರು ಮುಖ್ಯಮಂತ್ರಿಗಳಾಗಿದ್ದಾಗ ಇದನ್ನು ಜಾರಿ ಮಾಡಿದರು. ಅವರು ಏನು ಮಾಡಿದ್ದರು ಎಂದರೆ ಯಾವುದಾದರೂ ಒಬ್ಬ ಸರ್ಕಾರಿ ನೌಕರ 200 ರೂಪಾಯಿ ಸಂಬಳ ಬರತಕ್ಕಂಥಾವನಾಗಿದ್ದರೆ ಅವನು ಸಾಲ ಮಾಡಿದ್ದರೆ ಅವನ ಸಂಬಳದಲ್ಲಿ ಅಟ್ಯಾಚ್ ಮಾಡ ಬಾರದು ಅಂತ ಮಾಡಿದ್ದರು. ಅಷ್ಟೇ ಅಲ್ಲದೆ ಅವನು ನೋ ಮೀನ್ಸ್ ಆಫ್ ಲೈವ್‌ಲಿಹುಡ್ ಎಂದು ಹೇಳಿಕೊಂಡರೂ ಸಹ ಅವನನ್ನು ಬಿಟ್ಟು ಬಿಡಬೇಕು ಅಂತ ಇತ್ತು. ಅದರಿಂದ ಅನೇಕ ಜನರಿಗೆ ಅನುಕೂಲವಾಗಿದೆ. ಈಗ ಇದರಿಂದ ಏನಾಗಿದೆ ಎಂದರೆ ನಮ್ಮ ದೇಶದ ಜನರಿಗೆ ಸಾಲ ಹುಟ್ಟದೆ ಮನೆ ಸಂಸಾರ ಎಲ್ಲಿ ನಿಂತುಹೋಗುತ್ತದೋ ಎಂದು ಯೋಚನೆ ಮಾಡ ಬೇಕಾದ ಪ್ರಸಂಗ ಬಂದಿದೆ. ಈಗ ರೈತರಿಗೆ 10 ರೂಪಾಯಿ ಸಾಲವೂ ಕೂಡ ಹುಟುವುದಿಲ್ಲ. ಅಲ್ಲದೆ ಚಿನ್ನ ತೆಗದುಕೊಂಡು ಹೋದರೂ ಸಾಲ ಹುಟ್ಟುವುದಿಲ್ಲ. ಈ ಸಂದರ್ಭದಲ್ಲಿ ಸಹಕಾರ ಸಂಘಗಳು, ಬ್ಯಾಂಕುಗಳು ಮುಂದೆ ಬರದೇಹೋದರೆ ಬಹಳ ಶೋಚನೀಯವಾದ ಪ್ರಸಂಗ ಬರುತ್ತದೆ; ಎಂದು ನಾನು ಈ ಸಂದರ್ಭದಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಇನ್ನು ಈ ಸಾಲಗಳನ್ನು ಕೊಡುತ್ತಿದ್ದ ಮಾರ್ವಾಡಿಗಳ ವಿಚಾರ ಬಗ್ಗೆ ಹೇಳುವುದಾದರೆ ಅವರನ್ನು ಸರ್ಕಾರ ಬಲಿ ಹಾಕಿದ್ದು ಒಳ್ಳೆಯದು. ಒಳ್ಳೆಯ ಕೆಲಸ ಸರ್ಕಾರ ಮಾಡಿದೆ. ಮಾರ್ವಾಡಿಗಳು ಬ್ಲಡ್ ಸಕ್ಕರ್ಸ್ ಆಗಿದ್ದರು. ಅವರು ಬಡ ಜನರು ತೊಡತಕ್ಕಂಥ ಬಟ್ಟೆಗಳನ್ನೂ ಇಟ್ಟುಕೊಂಡು ಸಾಲ ಕೊಡುತ್ತಿದ್ದರು. ಇದರಿಂದ ಆ ಬಡ ಜನರ ಊಟ ಬಟ್ಟೆಗೆ ಎಷ್ಟು ತೊಂದರೆ ಕೊಡುತ್ತಿದ್ದರು ಎಂದರೆ ಅದನ್ನು ವರ್ಣಿಸುವುದಕ್ಕೆ ಸಾಧ್ಯವಿಲ್ಲ. ಅಂಥಾ ದೇಶದ್ರೋಹಿಗಳನ್ನು ಬಲ ಹಾಕಿರುವುದು ಒಳ್ಳೆಯದೇ ಆಗಿದೆ. ಅವರಿಗೆ ಯಾವ ಪನಿಷಮೆಂಟ್ ಕೊಟ್ಟರೂ ಧರ್ಮವಾಗಿದೆ, ಅವರು ಗಲ್ಲಿ ಗಲ್ಲಿಗಳಲ್ಲ ನಾಯಿಕೊಡೆಗಳಂತೆ ಹಬ್ಬಿದ್ದರು. ಸರ್ಕಾರ ಅವರನ್ನು ಬಲಹಾಕಿದ್ದು ನಿಜವಾಗಿಯೂ ಶ್ಲಾಘನೀಯವಾದದ್ದು ಎಂದು ನಾನು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಆ ಬಡ ಜನಕ್ಕೆ ಹಣ ಕೊಡುವುದಕ್ಕೆ ಬ್ಯಾಂಕ್ ಮುಂದೆ ಬಾರದೇಹೋದರೆ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗುತ್ತದೆ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಬ್ಯಾಂಕ್ ಏನೂ ರಾಷ್ಟ್ರೀಕರಣವಾಗಿದೆ. ನಿಜವಾಗಿಯೂ ಅದು ಒಳ್ಳೆಯ ಕೆಲಸ. ಇದರಲ್ಲಿ ಸ್ವಲ್ಪಮಟ್ಟಿಗೆ ಪ್ರಗತಿ ಸಾಧಿಸಿದೆ ಎಂದು ಹೇಳುತ್ತಿದ್ದಾರೆ. ಈಗಲೂ ಕೂಡ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಳ್ಳ ಬೇಕಾದರೆ ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಬೇಕು, ಆರ್. ಆರ್. ಸಿ ಬೇಕು, ಅದು ಬೇಕು, ಇದು ಬೇಕು ಎಂದು ಕೇಳುತ್ತಾರೆ. ಅವರಿಗೆ ಬೇಕಾದಂಥ ಸರ್ಟಿಫಿಕೇಟ್‌ಗಳನ್ನು ಕೊಟ್ಟರೇನೇ ಆ ರೈತರಿಗೆ ಸಾಲ ಸಿಕ್ಕುತ್ತದೆ. ಈ ಒಂದು ಪದ್ಧತಿ ಹೋಗಬೇಕು ಎಂದು ಹೇಳುತ್ತೇನೆ ಬಡ ಜನರಿಗೆ ಸುಲಭವಾಗಿ ಸಾಲ ಸುಲಭವಾಗಿ ಸಿಗುವಂಥ ಒಂದು ವ್ಯವಸ್ಥೆ ಮಾಡಬೇಕು, ಆ ಬಗ್ಗೆ ಈಗ ಇರತಕ್ಕಂಥಾ ಕಾನೂನನ್ನು ಸಡಿಲ ಮಾಡಬೇಕು. ಎಂದು ನಾನು ಈ ಸಂದರ್ಭ ದಲ್ಲಿ ಹೇಳಬಯಸುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಜನತಾ ವಸತಿ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ 7.1 ಲಕ್ಷ ಕುಟುಂಬಗಳಿಗೆ ಕಟ್ಟಡ ನಿವೇಶನಗಳಿಲ್ಲವೆಂದು ಕಂಡುಬಂದಿದೆ. ಇವರಲ್ಲಿ 5.1 ಲ ಕುಟುಂಬಗಳಿಗೆ ಪ್ರಸ್ತುತ ವರ್ಷದಲ್ಲಿ ನಿವೇಶನ ಕೊಡಲಾಗಿದೆ ಎಂದು ಹೇಳಿದ್ದಾರೆ. ಬರೇ ಸೈಟುಗಳನ್ನು ಅವರಿಗೆ ಹಂಚಿದರೆ ಇದರಿಂದ ಏನು ಪ್ರಯೋಜನ ? ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಆ ಬಡ ಜನರಿಗೆ ಹೊಟ್ಟೆ ಹೊರೆಯಲು ಹಣವೇ ಇಲ್ಲದೇ ಇರುವಾಗ ಇನ್ನು ನೀವು ಕೊಟ್ಟ ಸೈಟುಗಳನ್ನು ಕಟ್ಟಿಕೊಂಡು ಅವರಿಗೇನು ಆಗಬೇಕಾಗಿದೆ ? ಆದುದರಿಂದ ಈ ಬಗ್ಗೆ ನನ್ನ ಸಲಹೆ ಏನೆಂದರೆ ಅವರಿಗೆ ಸೈಟುಗಳನ್ನು ಹಂಚುವ ಬದಲು ಮನೆಗಳನ್ನು ಕಟ್ಟಿಸಿಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಜನತಾ ವಸತಿ ಯೋಜನೆ ಬಗ್ಗೆ ಇನ್ನೊಂದು ಮಾತು ಹೇಳಿದ್ದಾರೆ. ಹಿಂದಿನ ವರ್ಷದ ಕಾರ್ಯಕ್ರಮಗಳ ಮೇರೆಗೆ ಕೈಕೊಂಡಿರುವ 35,398 ಮನೆಗಳು ಮುಕ್ತಾಯದ ವಿವಿಧ ಹಂತಗಳಲ್ಲಿದ್ದು 1975–76ರಲ್ಲಿ ಮತ್ತೆ 17,500 ಮನೆಗಳನ್ನು ಕಟ್ಟುವ ಕೆಲಸವನ್ನು ಪ್ರಾರಂಭಿಸಿದ್ದಾಗಿದೆ. ಈ ವರ್ಷದ ಮಾರ್ಚ್ ತಿಂಗಳೊಳಗಾಗಿ 35,000 ಮನೆಗಳು ಸಿದ್ಧವಾಗುವುವೆಂದು ನಿರೀಕ್ಷಿಸಲಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ಮನೆಗಳು ಸಿದ್ಧವಾಗುವುದರೊಳಗೆ ನಿಮ್ಮ ಅಧಿಕಾರವೇ ಮುಗಿಯುತ್ತದೋ ಏನೋ ಎಂದು ನನ್ನ ಅಭಿಪ್ರಾಯವಾಗಿದೆ. ಈಗ ಕಟ್ಟಿದಂಥ ಮನೆಗಳಲ್ಲಿ ಯಾರು ವಾಸ ಮಾಡುತ್ತಾರೋ ಗೊತ್ತಿಲ್ಲ, ಆ ಮನೆಗಳ ಗೋಡೆಗಳು ಯಾವೊತ್ತು ಬೀಳುತ್ತವೋ ? ಆ ಮನೆಗಳನ್ನು ತೆಗೆದುಕೊಂಡವರು ಸ್ವಲ್ಪದಿವಸವಾದರೂ ಬದುಕಲಿ ಎಂದು ನನ್ನ ಅಭಿಪ್ರಾಯ,

ಇನ್ನು ಜೀತಪದ್ಧತಿ ವಿಷಯ ಹೇಳಬೇಕಾದರೆ ಹಳ್ಳಿಗಳಲ್ಲಿ ಇದರ ಅರ್ಥ ಇನ್ನೂ ತಿಳಿದುಕೊಂಡಿಲ್ಲ. ನಮ್ಮ ಹಳ್ಳಿಗಳಲ್ಲಿ ಏನು ಪದ್ಧತಿ ಇದೆ ಎಂದರೆ ವರ್ಷಕ್ಕೆ 500, 600 ರೂಪಾಯಿ ಕೊಟ್ಟು ಅವನಿಗೆ ಅದು ವರ್ಷದ ಸಂಬಳ ಎಂದು ಫಿಕ್ಸ್ ಮಾಡಿ ಅವನಿಂದ ಕೆಲಸ ಮಾಡಿಸುತ್ತಿದ್ದಾರೆ. ಹೀಗಾದರೆ ಇದರಿಂದ ಬಹಳ ಅನ್ಯಾಯವಾಗುತ್ತದೆ. ಮಧ್ಯವರ್ತಿಗಳು ಈ ರೀತಿ ಮಾಡುತ್ತಿದ್ದಾರೆ. ಆದುದರಿಂದ ಈ ವಿಚಾರದಲ್ಲಿ ನಾನು ಹೇಳುವುದುಏನೆಂದರೆ ಈ ಜೀತ ಪದ್ಧತಿ ಏನು ಇದೆ ಅವರಿಗೆ ಏನು ಸಂಬಳ ಕೊಡಬೇಕು ಎನ್ನುವುದನ್ನು ಸರ್ಕಾರ ಸ್ಪಷ್ಟ ಪಡಿಸಬೇಕು, ಹಾಗೆ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ, ಇಲ್ಲದೇ ಹೋದರೆ ಹಳ್ಳಿಗಳಲ್ಲಿ ಅವರುಗಳು ಕೆಲಸ ಮಾಡಲು ಕಷ್ಟವಾಗುತ್ತದೆ.

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಮೊನ್ನೆ ನಂಜನಗೂಡಿನಲ್ಲಿ ಸ್ಪಷ್ಟಪಡಿಸಲಿಲ್ಲವೋ ?

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ನೀವು ನಂಜನಗೂಡಿನಲ್ಲಿ ಒಂದು ಭಾಗದಲ್ಲಿ ವಿವರಿಸಿದರೆ ಸಾಕಾಗುವುದಿಲ್ಲ. ಎಲ್ಲಾ ಹಳ್ಳಿಗಳಲ್ಲೂ ತಿಳಿಯುವಂತೆ ಮಾಡಬೇಕು. ನನ್ನ ಅಭಿಪ್ರಾಯದಲ್ಲಿ ಈ ಜೀತ ಪದ್ಧತಿ ಹೋಗುವುದು ಒಳ್ಳೆಯದು. ಆದರೆ ಅವರಿಗೆ ಹೇಗೆ ಸಂಬಳ ಕೊಡಬೇಕು ಎನ್ನುವುದನ್ನು ಸ್ಪಷ್ಟಪಡಿಸಬೇಕು ಎಂದು ಹೇಳುತ್ತೇನೆ.

ಇನ್ನು ನಿರುದ್ಯೋಗ ವಿಚಾರ ಹೇಳುವುದಾದರೆ ಸರ್ಕಾರ ಅದಕ್ಕೆ ಅಷ್ಟರಮಟ್ಟಿಗೆ ಗಮನ ಕೊಟ್ಟಿಲ್ಲ. ಎಂದು ಹೇಳಬಹುದು ರಾಜ್ಯಪಾಲರ ಭಾಷಣದಲ್ಲಿ ನೋಡಿದರೆ ಅಲ್ಲಲ್ಲಿ ನಿರುದ್ಯೋಗ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದಿದೆ. ಅದನ್ನು ಹೋಗಲಾಡಿಸುವುದಕ್ಕೆ ಯಾವ ಒಂದು ಯೋಚನೆಯನ್ನೂ ಇಟ್ಟುಕೊಂಡಿರುವುದು ಕಂಡುಬಂದಿಲ್ಲ.

ಇನ್ನು ವಿದ್ಯಾಭ್ಯಾಸದ ವಿಚಾರ ತೆಗೆದುಕೊಂಡರೆ ಬ್ರಿಟಿಷರ ಕಾಲದಲ್ಲಿ ಹೇಗೆ ಇತ್ತೋ ಈಗಲೂ ಕೂಡ ಹಾಗೆಯೇ ಹೊಂದಿಕೊಂಡಿದೆ. ಈ ವಿದ್ಯಾಭ್ಯಾಸದ ರೀತಿನೀತಿಗಳನ್ನು ಬದಲಾಯಿಸಬೇಕು ಎಂದು ಹೇಳುತ್ತೇನೆ.

ಇನ್ನು ಸೆರಿಕಲ್ಚರ್ ವಿಷಯ ತೆಗೆದುಕೊಂಡರೆ ಇದನ್ನು ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್‌ಗೆ ಸೇರಿಸಿದ್ದೀರಿ. ಇದಕ್ಕೆ ಸ್ಪೆಷಲ್ ಅಸೆಸೀ ಅಂತ ಮಾಡಿದ್ದೀರಿ. ಇದು ಬಹಳ ಅನ್ಯಾಯ. ಈ ರೇಷ್ಮೆ ಬೆಳೆಯಲ್ಲಿ ನ್ಯಾಯವಾದ ಬೆಳೆ ಬರುವುದಿಲ್ಲ. 4 ಬೆಳೆ ಸರಿಯಾಗಿ ಬಂದರೆ ಒಂದು ಬೆಳೆ ಹೋಗುತ್ತದೆ. ಈ ರೇಷ್ಮೆ ಬೆಳೆ ಹೀಗಿರುವಾಗ ಇದನ್ನು ದ್ರಾಕ್ಷಿ ಬೆಳೆ ಜೊತೆಗೆ ಸೇರಿಸುವುದು ಬಹಳ ಅನ್ಯಾಯ ಎಂದು ಹೇಳುತ್ತೇನೆ.

ಇನ್ನು ತುರ್ತು ಪರಿಸ್ಥಿತಿ ಘೋಷಣೆ ಬಗ್ಗೆ ಹೇಳುವುದಾದರೆ ಇದರಲ್ಲಿ ಜಾತಿ ಭಾವನೆ ಕೆರಳಿಸುವಂಥ ವಿಷಯವಾಗಿದೆ. ಇದಕ್ಕೆ ಏನು ಕಾರಣ ಕೊಟ್ಟಿದ್ದೀರಿ ಎಂದರೆ ದೇಶದಲ್ಲಿ ಸಿವಿಲ್ ಡಿಸೊಬಿಡಿಯನ್ಸ್ ಜಾಸ್ತಿಯಾಯಿತು, ಅವರು ಮಿಲಿಟರಿಗೆ ಪೋಲೀಸಿನವರಿಗೆ ಎತ್ತಿ ಕಟ್ಟುತ್ತಾ ಇದ್ದರು ಅವರಿಂದ ಈ ತುರ್ತು ಪರಿಸ್ಥಿತಿ ಬಂತು ಅಂತ ಹೇಳಿದ್ದೀರಿ. ಇದನ್ನು ಹೇಳುವವರು ದಡ್ಡರಾವರೆ ಕೇಳುವವರು ದಡ್ಡರೇ, ಎಂದು ನಾನು ಕೇಳಬೇಕಾಗಿದೆ. ಯಾರು ಭಾಷಣ ಮಾಡಿದರೂ ಕೂಡ ಅವರ ಮಾತಿಗೆ ಬೆಲೆ ಕೊಡುತ್ತಾರೆಯೇ ? ಯಾರಿಗೆ ಯಾವ ರೀತಿ ಬೆಲೆ ಕೊಡಬೇಕು ಎನ್ನುವುದು ಜನತೆಗೆ ಗೊತ್ತಿದೆ. ನಮ್ಮಲ್ಲಿ ದಕ್ಷತೆ ಇಲ್ಲವೋ, ಯಾರಲ್ಲಿ ದಕ್ಷತೆ ಇಲ್ಲವೋ ಅದು ಜನತೆಗೆ ಗೊತ್ತು. ಯಾರಲ್ಲಿ ಏನು ನ್ಯೂನ್ಯತೆಇದೆಯೋ ಅದನ್ನು ನೋಡಿ ಅವರ ಭಾಷಣಕ್ಕೆ ಓ ಗೊಡುತ್ತಾರೆ. ಈ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದರಿಂದ, ಅಧಿಕಾರ ನಮಗೆ ಇದ್ದುದರಿಂದ ದೇಶದಲ್ಲಿ 1000 ಕೋಟಿ ರೂಪಾಯಿನಷ್ಟು ಬ್ಲಾಕ್ ಮಾರ್ಕೆಟ್ ಹಣ ಬಂದಿದೆ, ಇನ್ನೂ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಬ್ಲಾಕ್ ಮಾರ್ಕೆಟ್ ಹಣ ಬರುತ್ತದೆ ಎಂದು ಹೇಳುತ್ತೀರಿ. ಈ ಬಗ್ಗೆ ತಮ್ಮಲ್ಲಿ ನಾನು ಒಂದು ವಿಚಾರ ಪ್ರಸ್ತಾಪ ಮಾಡಬೇಕಾಗಿದೆ. ಇಷ್ಟು ದಿವಸ ಅವರುಗಳನ್ನು ಘೋಷಣೆ ಮಾಡಿದವರು ಯಾರು ? ಒಂದು ಸಾವಿರ ಕೋಟಿ ರೂಪಾಯಿನಷ್ಟು ಬ್ಲಾಕ್ ಮಾರ್ಕೆಟ್ ಹಣವನ್ನು ಬೆಳೆಸಿಕೊಳ್ಳುವುದಕ್ಕೆ ಪ್ರೋತ್ಸಾಹ ಕೊಟ್ಟವರು ಯಾರು ? ಇದುವರೆಗೆ ಅಧಿಕಾರ ಯಾರು ಮಾಡುತ್ತಾ ಇದ್ದರು ? ಇದುವರೆಗೂ ಅವರಿಗೆ ಪ್ರೋತ್ಸಾಹ ಕೊಟ್ಟು ತಕ್ಷಣ ಬಲಿ ಹಾಕಿದ್ದು; ಅವರ ಬೆನ್ನುಮೂಳೆ ಮುರಿಯುವಷ್ಟು ಏಟು ಕೊಟ್ಟವರು ಯಾರು ?

ಇನ್ನು ಕಾಂಟ್ರಾಕ್ಟ್ ಬಸ್ ಬಗ್ಗೆ ಒಂದೇ ವಿಚಾರ ಹೇಳುತ್ತೇನೆ. ಕಾಂಟ್ರಾಕ್ಟು ಬಸ್ಸಿಗೆ ಲೈಸನ್ಸ್ ಕೊಟ್ಟವರು ಯಾರು ? ನೀವೇ ಅವಕ್ಕೆ ಪ್ರೋತ್ಸಾಹ ಕೊಟ್ಟು ಈವೊತ್ತು ನೀವೇ ಅವರನ್ನು ಅವಮಾನ ಮಾಡಿದ್ದೀರಿ. ಈವೊತ್ತಿನ ದಿವಸ ಇಷ್ಟು ಜಾಗ್ರತೆಯಾಗಿ ಈ ಅನ್ ಕಾಂಟ್ರಾಕ್ಟ್ ಬಸ್‌ಗಳ ಮೇಲೆ ಕ್ರಮ ತೆಗೆದುಕೊಂಡಿರುವುದರಿಂದ ನಿಮ್ಮ ದಕ್ಷತೆ ತೋರಿಸುವುದಿಲ್ಲ. ಹೊರಗಡೆ ಜನ ನಗುತ್ತಾ ಇದ್ದಾರೆ. ಆವೊತ್ತಿನ ದಿವಸ ಅವರಿಗೆ ಲೈಸನ್ಸ್ ಕೊಟ್ಟು ಇದಕ್ಕೆ ಪ್ರೋತ್ಸಾಹ ಕೊಟ್ಟವರು ನೀವೇ, ಈವೊತ್ತಿನ ದಿವಸ ಅವರನ್ನು ಬಲಿ ಹಾಕುವವರು ನೀವೇ. ಒಟ್ಟಿನಲ್ಲಿ ಈವೊತ್ತಿನ ಒಂದು ತುರ್ತು ಪರಿಸ್ಥಿತಿಯಲ್ಲಿ ವಾಕ್ ಸ್ವಾತಂತ್ರ್ಯವಿಲ್ಲ ; ಪತ್ರಿಕಾ ಸ್ವಾತಂತ್ರ್ಯವಿಲ್ಲ, ನ್ಯಾಯಾಲಯಗಳಿಗೆ ಹೋಗುವ ಅಧಿಕಾರವನ್ನೂ ಕೂಡ ತಪ್ಪಿಸಿದ್ದೀರಿ, ಇದು ನ್ಯಾಯವೇ ಎಂದು ಕೇಳುತ್ತೇನೆ.

ಇನ್ನು ಲ್ಯಾಂಡ್ ರೀಫಾರಂಸ್ ಬಗ್ಗೆ ಒಂದೆರಡು ಮಾತು ಮಾತ್ರ ಹೇಳುತ್ತೇನೆ. ಈವೊತ್ತಿನ ದಿವಸ ಇದರಲ್ಲಿ ಇಂಜಂಕ್ಷನ್ ಮತ್ತು ರಿಸೀವರ್‌ನ್ನು ವಜಾ ಮಾಡಿದಿರಿ. ಏತಕ್ಕೆಂದರೆ ಅದರಲ್ಲಿ ಪಹಣಿ ರಿಕಾರ್ಡ್ ಆಗಲಿ, ಆರ್. ಆರ್ ಆಗಲಿ ಇಲ್ಲ. ಅದರಲ್ಲಿ ಎಲ್ಲವನ್ನೂ ಮಾಲೀಕ ಬರೆಸಿಕೊಂಡಿದ್ದಾನೆ. ಅವನಿಗೆ ಅನುಕೂಲವಾಗುತ್ತದೆ ಎಂದು ತಾವು ಈ ರೀತಿ ಮಾಡಿದಿರಿ. ಆ ರೀತಿ ಪಹಣಿ ತಿದ್ದಿದ ಎಷ್ಟು ಜನ ಅಧಿಕಾರಿಗಳನ್ನು ಬಲಿ ಹಾಕಿದ್ದೀರಿ ? ವಿಲೇಜ್ ಅಕೌಂಟೆಂಟ್ ಆ ರೀತಿ ಏನಾದರೂ ತಪ್ಪು ಮಾಡಿದರೆ ಅವನ ಮೇಲೆ ಕ್ರಮ ತೆಗೆದುಕೊಳ್ಳಲು ತಹಶೀಲ್‌ದಾರರಿದ್ದಾರೆ ; ಮತ್ತು ಅವರ ಮೇಲೆ ಸಬ್-ಡಿವಿಜನ್ ಆಫೀಸರ್ ಇದ್ದಾರೆ ; ಆದಕಾರಣ ತಪ್ಪು ಮಾಡಿದವರನ್ನು ಬಲಿ ಹಾಕದೆ ಈ ವಿಚಾರದಲ್ಲಿ ನ್ಯಾಯಾಲಯಕ್ಕೆ ಅವಮಾನ ಮಾಡಿದ್ದು ಸರಿಯಲ್ಲ ಎಂಬುದು ನನ್ನ ಭಾವನೆ ;

ಉಪಾಧ್ಯಕ್ಷರು.—ಸಿವಿಲ್ ಕೋರ್ಟಿಗೆ ಇದ್ದ ಅಧಿಕಾರವನ್ನು ಮಾತ್ರ ವಜಾ ಮಾಡಿದರು ಅಷ್ಟೇ ; ಈಗ ಲ್ಯಾಂಡ್ ಟ್ರಿಬ್ಯುನಲ್‌ಗಳು ಕೋರ್ಟ್ ತರಹ ಕೆಲಸ ಮಾಡುತ್ತಿವೆ ;

ಶ್ರೀ ಎನ್. ಎಚ್. ಗುರುಸಿದ್ದಪ್ಪ.—ನಾನು ಹೇಳುವುದೇನೆಂದರೆ, ಸರ್ಕಾರದವರು ಅಧಿಕಾರಿಗಳ ಮೇಲೆ ಸರಿಯಾದ ಹಿಡಿತವನ್ನು ಇಟ್ಟುಕೊಳ್ಳದಿದ್ದರೆ ಯಾವ ಒಂದು ಯೋಜನೆಯನ್ನೂ ಸಹ ಯಶಸ್ವಿಯಾಗಿ ಕಾರ್ಯರೂಪದಲ್ಲಿ ತರಲು ಸಾಧ್ಯವಾಗುವುದಿಲ್ಲ. ಎಂದು ; ಇವೊತ್ತಿನ ದಿವಸ ಸರ್ಕಾರದ ಯೋಜನೆಗಳೆಲ್ಲಾ ತಲೆಕೆಳಕಾಗುತ್ತಿರುವುದಕ್ಕೆ ಕಾರಣ ದಕ್ಷವಾದಂಥ ಆಡಳಿತ ಇಲ್ಲದಿರುವುದು ; ತಮ್ಮ ಒಂದು ತಪ್ಪುಗಳನ್ನು ಮುಚ್ಚಿಕೊಳ್ಳಲು ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡುವುದರ ಮೂಲಕ ಮೀಸಾ, ಡಿ. ಐ. ಆರ್. ಮುಂತಾದ ಬಾಣಗಳನ್ನು ವಿರೋಧಪಕ್ಷದವರ ಮೇಲೆ ಬಿಡುತ್ತಿದ್ದಾರೆ. ನಾಳೇ ದಿವಸ ಇದೇ ವಿರೋಧಪಕ್ಷದವರು ಏನಾದರೂ ಆಡಳಿತ ವಹಿಸಿಕೊಂಡಾಗ, ನೀವು ಬಿಟ್ಟ ಬಾಣ

ಗಳನ್ನೇ ಅವರು ನಿಮ್ಮ ಮೇಲೆ ಬಿಟ್ಟರೆ ಆಗ ಪ್ರಜಾಪ್ರಭುತ್ವ ಉಳಿಯುತ್ತದಯೇ ಎಂಬುದನ್ನು ತಾವು ಯೋಚನೆ ಮಾಡಬೇಕು. ಈ ಹಿಂದೆ ಅಧಿಕಾರ ನಡೆಸಿದವರು ಏನೂ ಪೆದ್ದರಾಗಿರಲಿಲ್ಲ.; ಅವರು ವಿರೋಧಪಕ್ಷದವರ ಮೇಲೆ ಈ ರೀತಿಯ ಬಾಣಗಳನ್ನು ಪ್ರಯೋಗ ಮಾಡಲಿಲ್ಲ ಅವರು ಕಾನೂನಿನ ಪ್ರಕಾರ ಕೈಕೊಳ್ಳುತ್ತಿದ್ದರು ; ಮತ್ತು ಪ್ರಜಾಪ್ರಭುತ್ವಕ್ಕೆ ಪ್ರೋತ್ಸಾಹ ಕೊಟ್ಟರು. ಆದರೆ ತಾವು ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡುವುದರ ಮೂಲಕ ಅಧಿಕಾರವನ್ನು ದುರುಪಯೋಗಪಡಿಸಿ ಕೊಳ್ಳುತ್ತಿದ್ದೀರಿ ; ಇದರಿಂದ ಪ್ರಜಾಪ್ರಭುತ್ವಕ್ಕೆ ತಾವು ಪ್ರೋತ್ಸಾಹ ಕೊಟ್ಟಂತೆ ಆಗುವುದಿಲ್ಲವೆಂದು ಮಾತ್ರ ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ (ವರ್ತೂರು):—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿರ ತಕ್ಕಂಥ ಭಾಷಣದ ಮೇಲೆ ವಿಪುಲವಾದಂಥ ಚರ್ಚೆ ಇಲ್ಲಿಯವರೆಗೆ ನಡೆದಿದೆ. ಇವೊತ್ತಿನ ದಿವಸ ನಮ್ಮ ಇಡೀದೇಶ ಎರಡು ಮೂರು ದೃಷ್ಟಿಗಳಿಂದ ಒಂದು ವಿಚಿತ್ರವಾದಂಥ ರೀತಿಯಲ್ಲಿ ಸಾಗುತ್ತಿದೆ. ವಿಚಿತ್ರ ಎನ್ನುವುದರಲ್ಲಿ ಹೊಸದಾದಂಥ ವಿಚಾರಗಳು ಏನಿವೆ ಎಂಬುದನ್ನು ತಮಗೆ ನಾನು ತಿಳಿಸಿದರೆ ವಿಷಯ ತಮಗೆ ಸ್ವಾರಸ್ಯವಾಗಿ ಅರ್ಥವಾಗುತ್ತದೆ. ಇವೊತ್ತು ನಾವು ನ್ಯಾಷನಲ್ ಎಮರ್ಜೆನ್ಸಿ ಎನ್ನತಕ್ಕಂಥ ಕಾಲದಲ್ಲಿ ಇದ್ದೇವೆ. ಇದರ ಅರ್ಥವನ್ನು ನಾವು ಮೊದಲು ತಿಳಿದು ಕೊಳ್ಳಬೇಕು. ಎಕ್ಸ್‌ಟರ್‌ನಲ್ ಡೇಂಜರ್ ಇರುವಾಗ ಮತ್ತು ಇಂಟರ್‌ನಲ್ ಸೆಕ್ಯುರಿಟಿ ಇಲ್ಲದಿರು ವಾಗ ಈ ಒಂದು ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡಬೇಕಾಗಿ ಬರುತ್ತದೆ. ನಮಗೆ ಸ್ವರಾಜ್ಯ ಬಂದು ಸುಮಾರು 28 ವರ್ಷಗಳಾಯಿತು; ಈ 28 ವರ್ಷಗಳಲ್ಲಿ ನಮ್ಮ ಇಡೀ ರಾಷ್ಟ್ರ ದಲ್ಲಿರತಕ್ಕಂಥ ದೀನದಲಿತರ ಉದ್ಧಾರ ಎಷ್ಟರಮಟ್ಟಿಗೆ ಆಗಿದೆ, ಬಡವಬಲ್ಲಿದರ ಮಧ್ಯೆ ಇರತಕ್ಕಂಥ ಅಂತರ ಎಷ್ಟರಮಟ್ಟಿಗೆ ಕಡಿಮೆಯಾಗಿದೆ ಎಂಬುದನ್ನು ನಾವು ನೋಡಬೇಕಾಗಿದೆ. ಈ ಒಂದು ಅಂತರ ಕಡಿಮೆಯಾಗದಿರುವುದಕ್ಕೆ ಕಾರಣರು ಯಾರು ಎಂಬತಕ್ಕಂಥ ಪ್ರಶ್ನೆಯನ್ನು ನಾವು ಮನಸ್ಸಿ ನಲ್ಲಿಟ್ಟುಕೊಂಡು ವಿಚಾರಮಾಡಬೇಕಾಗುತ್ತದೆ. ಅವರೇನು ಮಾಡಿದ್ದಾರೆ, ಇವರೇನು ಮಾಡಿದ್ದಾ ರೆಂದು ಹೇಳುವುದರಿಂದ ಮಾತ್ರ ಬಡ ಜನರಿಗೆ ಅನುಕೂಲವಾಗುವುದಿಲ್ಲ; ಯಾವುದನ್ನೂ ಕಾರ್ಯತಃ ಮಾಡಿತೋರಿಸಬೇಕು. ಮಂತ್ರ ಹಾಕಿದರೆ ಮಾವಿನಕಾಯಿ ಬೀಳುವುದಿಲ್ಲ; ಕೆಲವು ಸಲ ತೊಟ್ಟು ಮಾಗಿದಾಗ, ಇಲ್ಲವೇ ಜೋರಾಗಿ ಗಾಳಿ ಬೀಸಿದಾಗ ಕೆಲವು ಕಾಯಿಗಳು ಬೀಳಬಹುದೇ ಹೊರತು, ಮಂತ್ರ ಹಾಕಿಬಿಟ್ಟರೆ ಮಾವಿನಕಾಯಿ ಬೀಳುವುದಿಲ್ಲ; ಈ ಕಾರಣದಿಂದ ನಾವು ಒಂದು ಖಚಿತ ವಾದಂಥ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ದೇಶ ಮುಂದುವರಿಯುವುದಿಲ್ಲ; ಮತ್ತು ಬಡವರಿಗೆ ನಿಜವಾದ ಸಹಾಯ ಸಿಗುವುದಿಲ್ಲ; ಇದನ್ನೆಲ್ಲಾ ಮನ ವರಿಕೆ ಮಾಡಿಗೊಂಡು ಇಡೀ ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡುವುದರ ಮೂಲಕ ಎಲ್ಲ ಕೆಲಸಗಳನ್ನು ಅತಿವೇಗದಲ್ಲಿ ಮಾಡಬೇಕೆಂದು ಸರ್ಕಾರದವರು ಹೊರಟಿದ್ದಾರೆ. ಈ ಒಂದು ದಿಶೆಯಲ್ಲಿ ಕೇಂದ್ರಸರ್ಕಾರ ಮತ್ತು ಸಂಸ್ಥಾನ ಸರ್ಕಾರಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ, ಇಲ್ಲಿಯವರೆಗೆ ಏನೇನು ಸಾಧನೆ ಮಾಡಿವೆ ಎಂಬುದನ್ನು ನಾವು ಮನಸ್ಸಿನಲ್ಲಿಟ್ಟು ಕೊಂಡರೆ ಆಗ ನಮಗೆ ತಾನಾಗಿಯೇ ಉತ್ತರಸಿಗುತ್ತದೆ. What justification is there for us to love this s stem ? ಅನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇಪ್ಪತ್ತು ಅಂಶಗಳ ಬಗ್ಗೆ ಮಾತನಾಡಿದ್ದಾರೆ. ಈ ಹಿಂದಿನ ರಾಜ್ಯಪಾಲರು Chanpe for the better. You love that ideal — ಎಂದು ಹೇಳಿ ದರು. ಹೆರಿಗೆ ಸಮಯದಲ್ಲಿ ತಾಯಿಗೆ ಸಲ್ಪ ಕಷ್ಟವಾದರೂ ಸಹ ಒಳ್ಳೆಯ ವಂಶೋದ್ಧಾರಕನಾದ ಮಗ ಹುಟ್ಟಲಿ, ತಾಯಿ ಮತ್ತು ಮಗು ಆರೋಗ್ಯವಾಗಿದ್ದರೆ ಸಾಕು ಎಂದು ಎಲ್ಲರೂ ಹೇಳು ತಾರೆಯೇ ಹೊರತು, ಆ ಸಮಯದಲ್ಲಿ ಯಾರೂ ದುಃಖಪಡುವುದಿಲ್ಲ; ಅದೇ ರೀತಿ ಸರ್ಕಾರದವರು ಕೆಲವೊಂದು ಕಾರ್ಯಕ್ರಮಗಳನ್ನು ಕೈಕೊಂಡಾಗ ಅದರಿಂದ ಕೆಲವು ಜನರಿಗೆ ತೊಂದರೆಯಾಗ ಬಹುದು ; ಆದರೆ ಬಹಳಷ್ಟು ಜನರಿಗೆ ಅದರಿಂದ ಅನುಕೂಲವಾಗುತ್ತದೆ. ಆದರೆ ತೊಂದರೆಗೆ ಒಳ ಗಾಗುವ ಕೆಲವು ಜನರು ಆ ಕಾರ್ಯಕ್ರಮದ ಬಗ್ಗೆ ಗೊಣಗುತ್ತಾರೆ. ಇದು ಯಾವಾಗಲೂ ಇದ್ದದ್ದೇ; ಈಗ ಉದಾಹರಣೆಗೆ ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತಂದಿರುವು ದರಿಂದ ಸೀಲಿಂಗಿಗಿಂತ ಜಾಸ್ತಿ ಜಮೀನು ಇರುವವರು ಅದನ್ನು ಸರ್ಕಾರಕ್ಕೆ ಬಿಟ್ಟುಕೊಡಬೇಕಾ ಗುತ್ತದೆ. ಅಂತಹ ಸಮಯದಲ್ಲಿ ಅವರು ಗೊಣಗುತ್ತಾರೆ. ಆದರೆ ಆ ಜನರಬಗ್ಗೆ ಯಾರೂ

ಕಣ್ಣೀರು ಸುರಿಸಬೇಕಾದ ಅಗತ್ಯವಿಲ್ಲ; ಇದರಿಂದ ಬಡವರಿಗೆ ಅನುಕೂಲವಾಗುವುದರಿಂದ ಮತ್ತು ಆ ಬಡಜನರು ಸರ್ಕಾರವನ್ನೇ ನಂಬಿಕೊಂಡು ಬಂದಿರುವುದರಿಂದ, ಅವರಿಗೆ ಅನುಕೂಲ ಮಾಡಿಕೊಡಲು ಇಂತಹ ಕಾನೂನುಗಳನ್ನು ಅತಿ ಚಮತ್ಕಾರವಾಗಿ ಜಾರಿಗೆ ತರುವುದರ ಮೂಲಕ ಮುಂದೆ ಸಾಗುವುದು ಒಳ್ಳೆಯದು. ಮಗುವನ್ನು ಚಿಗುಟುವುದೂ ಅವರೇ, ತೊಟ್ಟಿಲನ್ನು ತೂಗುವುದೂ ಅವರೇ ಎಂಬತಕ್ಕಂಥ ಮನೋಧರ್ಮಕ್ಕೆ ಸರ್ಕಾರ ಈಡಾದರೂ ಸರಿಯೇ ಬಡವರ ಅನುಕೂಲಕ್ಕಾಗಿ ಇಂತಹ ಕಾನೂನುಗಳನ್ನು ಜಾರಿಗೆ ತರಲೇಬೇಕಾಗುತ್ತದೆ ನಾವು ಪ್ರಜಾಪ್ರಭುತ್ವದ ತತ್ವಗಳನ್ನು ಒಪ್ಪಿಕೊಂಡಿದ್ದೇವೆ. We are living in a democracy. ಆದಕಾರಣ ನಾವು ಕಾನೂನು ಜಾರಿಗೆ ಕೊಡುವಾಗ ಯಾರಮನಸ್ಸಿಗೂ ನೋವಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಹಾವು ಸಾಯಬಾರದು, ಕೋಲು ಮುರಿಯಬಾರದು ಎಂಬ ತತ್ವವನ್ನು ಅನುಸರಿಸಬೇಕಾಗುತ್ತದೆ. ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವ ಜವಾಬ್ದಾರಿ ಸರ್ಕಾರದ ಮೇಲಿದೆ. ಕ್ರಾಂತಿಕಾರಕವಾದಂಥ ಕಾನೂನನ್ನು ಜಾರಿಗೆ ತಂದಾಗ ಕೆಲವರಿಗೆ ಸಿಟ್ಟು ಬರುತ್ತದೆ. ಆದರೆ ರೂಲ್ ಆಫ್ ಲಾ ಏನಿದೆ ಅದಕ್ಕೆ ಎಲ್ಲರೂ ರೆಸ್ಪೆಕ್ಟ್ ಕೊಡಬೇಕಾಗುತ್ತದೆ. ಈಗ ನಾವು ಪೋಲೀಸ್ ಸ್ಟೇಷನ್‌ಗಳಿಗೆ ಹೋಗಿ ನೋಡಿದರೆ, ಅಲ್ಲಿ "We respect those who respect law" ಎಂದು ಬೋರ್ಡಿನ ಮೇಲೆ ಬರೆದಿರುತ್ತಾರೆ. ಈ ರೀತಿ ಅದನ್ನು ಬೋರ್ಡಿನ ಮೇಲೆ ಬರೆದರೇ ಸಾಲದು, ಅದನ್ನು ಅಲ್ಲಿರುವ ಅಧಿಕಾರಿ ಕೂಡ ಪಾಲಿಸಬೇಕು. In the eye of the law, treatment given to individuals should be the same either big or small. ಆಗ ನಾವು ಅದನ್ನು ರೂಲ್ ಆಫ್ ಲಾ ಎಂದು ಹೇಳುತ್ತೇವೆ. ಈಗ ನಮ್ಮ ದೇಶದಲ್ಲಿ ಒಂದು ಕಡೆ ಕೆಲವರ ಬಳಿಯೇ ವಿಫಲವಾದಂಥ ಐಶ್ವರ್ಯ ತುಂಬಿಕೊಂಡಿದೆ, ಮತ್ತೊಂದು ಕಡೆ ಬಡತನ ಎಂಬುದು ತಾಂಡವವಾಡುತ್ತಿದೆ; ಇವೆರಡನ್ನೂ ಸರ್ಕಾರದವರು ಸರಿದೂಗಿಸಬೇಕೆಂದು ಹೊರಟಾಗ ಇರತಕ್ಕಂಥವರು ಬಿಟ್ಟುಕೊಡಲು ಮನಸ್ಸು ಮಾಡುವುದಿಲ್ಲ; ಆಗ ಸರ್ಕಾರದವರು ಕಾನೂನು ಮೂಲಕ ಕ್ರಮ ಕೈಗೊಳ್ಳಬೇಕಾಗುತ್ತದೆ. ಒಬ್ಬರ ಹತ್ತಿರ ಮುಕ್ಕಾಲು ಎಕರೆ ಜಮೀನು ಇದ್ದು ಮತ್ತೊಬ್ಬರ ಹತ್ತಿರ 50 ಎಕರೆ ಜಮೀನು ಇದ್ದರೆ, ಒಬ್ಬರೇ 55 ಜನರ ಜಮೀನನ್ನು ಇಟ್ಟುಕೊಂಡಿದ್ದಾರೆಂದು ಅರ್ಥವಾಗುತ್ತದೆ. ಇಂತಹ ಸಮಯದಲ್ಲಿ ಹೆಚ್ಚಿಗೆ ಜಮೀನು ಇರುವವರು ಇಲ್ಲದವರಿಗೆ ಬಿಟ್ಟುಕೊಡಬೇಕಾಗುತ್ತದೆ. ಸರ್ಕಾರದವರು ಏನು ಸೀಲಿಂಗ್ ಲಿಮಿಟ್ ಇಟ್ಟಿದ್ದಾರೆ, ಅದಕ್ಕೂ ಎರಡು ಎಕರೆ ಕಡಿಮೆ ಜಮೀನು ಇಟ್ಟುಕೊಂಡು ಉಳಿದಿರುವುದನ್ನು ಬಿಟ್ಟುಕೊಡುತ್ತೇವೆಂದು ಎಲ್ಲರೂ ಹೇಳಬೇಕು. ಆಗ ಬಡವರು ಮುಂದೆ ಬರಲು ಅವಕಾಶವಾಗುತ್ತದೆ. ಅದೇ ರೀತಿ ಇರತಕ್ಕಂಥ ನೀರನ್ನು ಎಲ್ಲರಿಗೂ ಸಮನಾಗಿ ಹಂಚುವುದಕ್ಕೆ ಏರ್ಪಾಡು ಮಾಡಬೇಕಾಗುತ್ತದೆ. ಈ ಕೆಲಸವನ್ನು ಮಾಡದಿದ್ದರೆ ಜನರು ನಿಮ್ಮನ್ನು ಏತಕ್ಕಾಗಿ ಆರಿಸಿ ಕಳುಹಿಸಿದ್ದು ಎಂದು ನಮ್ಮನ್ನು ಕೇಳುತ್ತಾರೆ. ಆದಕಾರಣ ಕೆಲವರಿಗೆ ತೊಂದರೆಯಾದರೂ ಸಹ ಅನೇಕ ಜನರಿಗೆ ಅನುಕೂಲವಾಗುವಂತಹ ಕೆಲಸ ಮಾಡಬೇಕಾಗುತ್ತದೆ. ನಾವು ಒಳ್ಳೆಯ ಉದ್ದೇಶ ಇಟ್ಟುಕೊಂಡು ಕಾನೂನು ಮಾಡಿದರೂ ಸಹ ಅದನ್ನು ಜಾರಿಗೆ ಕೊಡುವಾಗ ಕೆಲವೊಂದು ಸಲ ಪೀಕಲಾಟಕ್ಕೆ ಬರುತ್ತದೆ. ಉದಾಹರಣೆಗೆ ಹೇಳುವುದಾದರೆ ಸರ್ಕಾರದವರು ಬಾವಿ ತೆಗೆಸಲು ಸಾಲ ಕೊಡುತ್ತಿದ್ದಾರೆ; ಈ ಮೊದಲು ಬಾವಿ ತೆಗೆಸುವವರಿಗೆಲ್ಲಾ ಸಾಲ ಕೊಡಲಾಗುತ್ತಿತ್ತು; ಆದರೆ ಕೆಲವರು ತೆಗೆಸಿದ ಬಾವಿಗಳಲ್ಲಿ ನೀರು ಬಾರದಿದ್ದಾಗ, ಅವರಿಗೆ ಸಾಲ ತೀರಿಸುವುದು ಕಷ್ಟವಾಯಿತು; ಆಗ ಸರ್ಕಾರದವರು ತಜ್ಞರ ಮೂಲಕ ಸರ್ವೆ ಮಾಡಿಸಿ ಯಾವ ಭಾಗದಲ್ಲಿ ಎಷ್ಟು ನೀರು ಸಿಗುತ್ತದೆ, ಎಷ್ಟು ಬಾವಿ ತೆಗೆಸಬಹುದು ಎಂಬುದನ್ನು ತಿಳಿದುಕೊಂಡು ಅದರ ಒಂದು ಆಧಾರದ ಮೇರೆ ಬಾವಿ ತೆಗೆಸಲು ಸಾಲ ಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು. ಇದೇ ದೃಷ್ಟಿಯಿಂದ ಯಾರಾದರು ಬಾವಿ ತೆಗೆಸಲು ಸಾಲಕ್ಕೆ ಅರ್ಜಿ ಹಾಕಿದರೆ ಟೆಕ್ನಿಕಲ್ ಒಪೀನಿಯನ್ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಇದರ ಒಂದು ಹಿನ್ನೆಲೆಯನ್ನು ಕೆಲವು ರೈತರು ತಿಳಿದುಕೊಳ್ಳದೆ ಟೆಕ್ನಿಕಲ್ ಒಪೀನಿಯನ್ ಏತಕ್ಕೆ ಪಡೆದುಕೊಳ್ಳಬೇಕೆಂದು ಕೇಳುತ್ತಾರೆ; ಹತ್ತಿರದಲ್ಲಿಯೇ ಬಾವಿ ತೆಗೆದರೆ ಹೆಚ್ಚು ನೀರು ಬರುವುದು ಕಷ್ಟ ಎಂದು ಸರ್ಕಾರದವರು ತಿಳಿದುಕೊಂಡು ಇಂತಹ ಕಾನೂನು ಮಾಡಿದ್ದಾರೆ. ಆದರೆ ಅದನ್ನು ಜಾರಿಗೆ ಕೊಡುವಾಗ ಪೀಕಲಾಟಕ್ಕೆ ಬರುತ್ತದೆ.

ಕಾನೂನು ಮಾಡುವಂತವರು ನಮ್ಮಂಥವರು, ನಿಮ್ಮಂಥವರು ಅದನ್ನು ಜಾರಿಗೆ ಕೊಡುವವರು ಅದನ್ನು ಸರಿಯಾದ ಕ್ರಮದಲ್ಲಿ ಬಡವ ಬಲ್ಲಿದನೆನ್ನದೆ ಯಾವ ದೃಷ್ಟಿಯಿಂದ ಕಾನೂನು

ಮಾಡಿದೆ ಅದರ ಉದ್ದಿಶ್ಯವೇನೆಂದು ಅರ್ಥಮಾಡಿಕೊಂಡು ಸರಿಯಾದ ಮಾರ್ಗದಲ್ಲಿ ಅದನ್ನು ಜಾರಿಗೆ ಕೊಡುವುದು ಮುಖ್ಯ. ಉದಾಹರಣೆಗೆ ತೆಗೆದುಕೊಂಡರೆ ಸ್ಕೂಲಿನಲ್ಲಿ ಓದುವ ಹುಡುಗರು ಮತ್ತು ಉಪಾಧ್ಯಾಯರು ಏನು ಇದ್ದಾರೆ. ಅವರವರ ಕರ್ತವ್ಯವನ್ನು ನಿರ್ವಹಣೆ ಮಾಡುವ ಸಮಯದಲ್ಲಿ ಹೇಳುವುದಾದರೆ ಉಪಾಧ್ಯಾಯರಿಗೆ ಸರ್ಕಾರದಿಂದ ಸಂಬಳ ಕೊಡುತ್ತಾರೆ. ಅವನ ಕರ್ತವ್ಯ ಮಕ್ಕಳನ್ನು ಓದಿಸುವ ಜವಾಬ್ದಾರಿ ಅವನ ಮೇಲೆ ಇರುತ್ತದೆ. ಆ ಜವಾಬ್ದಾರಿಯನ್ನು ಅರಿತುಕೊಳ್ಳದೆ ಮಕ್ಕಳು ಓದದೆ ಇದ್ದರೆ ನಾನು ಮಾಡುವುದು ಏನು ಎಂದರೆ ಅಷ್ಟಕ್ಕೆ ಅವನ ಜವಾಬ್ದಾರಿ ಮುಗಿಯುವುದಿಲ್ಲ. ಅವನಿಗೆ ಕೊಟ್ಟಂಥ ಸಂಬಳ ಸಾರ್ಥಕವಾಗುವುದಿಲ್ಲ. ಪರ್ಸಂಟೇಜ್ ನೋಡಿದರೆ ಬಹಳ ಕಡಿಮೆಯಾಗಿರುತ್ತೆ. ಅದರಲ್ಲಿ ಮಕ್ಕಳ ಜವಾಬ್ದಾರಿ ಎಷ್ಟು ಇರುತ್ತದೆ ಉಪಾಧ್ಯಾಯರ ಜವಾಬ್ದಾರಿ ಎಷ್ಟು ಇರುತ್ತದೆ ಎನ್ನುವುದನ್ನು ತಿಳಿದುಕೊಳ್ಳದೇ ಹೋದರೆ, ಅವನು ಹೇಳುವುದು ಮಕ್ಕಳು ಶಿಸ್ತು ಬಿಟ್ಟು ಹೋಗುತ್ತಿದ್ದಾರೆ ಎಂದು ನಾವು ಎಷ್ಟು ಶ್ರಮ ಪಟ್ಟರೂ ಕೂಡ ಪ್ರಯೋಜನವಾಗುವುದಿಲ್ಲವೆಂದು ಸಮಜಾಯಿಸಿ ಹೇಳಿದರೆ ನಾವು ಕೇಳತಕ್ಕಂಥವರು ಯೋಚನೆ ಮಾಡಬೇಕು. ಆ ಉಪಾಧ್ಯಾಯರು ಹೇಳುತ್ತಾರೆ ಕಾಗುಣಿತ ಬರದಂಥವರನ್ನು ಕೊಟ್ಟು ಅವರನ್ನು ಮುಂದೆ ತರಬೇಕೆಂದು ಶಿಫಾರಸು ಮಾಡಿ ನಮ್ಮ ವ್ಯವಹಾರದಲ್ಲಿ ಕೈಹಾಕಿದ್ದಾರೆ ಎಂದು ಹೇಳಿ ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಹೋದರೆ ಅವರು ಯಾವ ದೊಡ್ಡ ಆಫೀಸರ್ ಆಗಲಿ ಚಿಕ್ಕ ಆಫೀಸರ್ ಆಗಲಿ ಏನು ಪ್ರಯೋಜನವಿಲ್ಲ. ಈ ತತ್ವವನ್ನು ಜಾರಿಗೆ ತಂದರೆ ಅದರಲ್ಲಿ ಯಾರೇ ಆಗಲಿ ಅವರ ಕರ್ತವ್ಯವನ್ನು ನಿರ್ವಹಿಸಲೇಬೇಕು. ಯಾವುದೇ ಕಾರ್ಯ ಮಾಡಿದರೂ ಸರ್ವೋದ್ಧಾರವಾಗಿ ಮಾಡುವಂತ ಕರ್ತವ್ಯ ಅವನದು ಎಂದು ಬದಲಾವಣೆ ಮಾಡಬೇಕು. ಯಾರೇ ಆಫೀಸರ್ ಅವನ ಕರ್ತವ್ಯದಲ್ಲಿ ಸರಿಯಾಗಿ ನಡೆದುಕೊಂಡರೆ ಅವನು ಯಾರಿಗೂ ಹೆದರಬೇಕಾಗಿಲ್ಲ ಕಡೆಗೆ ದೇವರಿಗೂ ಹೆದರಬೇಕಾಗಿಲ್ಲ. ಒಂದು ಉದಾಹರಣೆಗೆ ಹೇಳುತ್ತಿದ್ದೇನೆ. ಕುಷ್ಠರೋಗ ಬರುತ್ತದೆ ಅದನ್ನು ವಾಸಿ ಮಾಡಬೇಕಾದರೆ ಅದಕ್ಕೆ ತಕ್ಕ ಚಿಕಿತ್ಸೆ ಮಾಡಬೇಕು. ಅದಕ್ಕೆ ಏನು ಚಿಕಿತ್ಸೆ ಮಾಡಬೇಕು ಅದನ್ನು ಮಾಡಲೇ ಬೇಕು. ಅದನ್ನು ಮಾಡದೇ ಯಾವುದೋ ರೀತಿ ಮಾಡಿ ಅದು ವಾಸಿಯಾಗಲಿಲ್ಲವೆಂದು ಹೇಳಿದರೆ ಅದು ಹೋಗುತ್ತದೆಯೇ ಅಥವಾ ಬರದೇ ಇರುತ್ತದೆಯೇ ? ಕುಷ್ಟರೋಗ ಬಂದೇ ಬರುತ್ತದೆ. ಯಾರಿಗೆ ದೇವರಲ್ಲಿ ಪರಿಪೂರ್ಣವಾದ ನಂಬಿಕೆ ಇದೆ ತನಗೆ ಮತ್ತು ತನ್ನ ಕರ್ತವ್ಯದಲ್ಲಿ ಸರಿಯಾಗಿ ನಡೆದುಕೊಂಡರೆ ಅವನು ಯಾರಿಗೂ ಹೆದರಬೇಕಾಗಿಲ್ಲ. ಇವತ್ತಿನ ದಿವಸ ಯಾರು ಆಳುತ್ತಿದ್ದಾರೆ ಮತ್ತು ಯಾರು ಆಳಿಸಿಕೊಳ್ಳುತ್ತಿದ್ದಾರೆ ಎಲ್ಲರೂ ಮನುಷ್ಯರೇ ಆದ್ದರಿಂದ ಅವರವರ ಕರ್ತವ್ಯ ನಿಷ್ಟೆಗೆ ಸರಿಯಾಗಿ ನಡೆದುಕೊಳ್ಳುವುದು ಮನುಷ್ಯತ್ವದ ಹೊಣೆ ಅಂಥ ವಾತಾವರಣವನ್ನು ಉಂಟುಮಾಡಬೇಕು. ಅದನ್ನು ಯಾವ ಮನುಷ್ಯನು ಅವನ ಅಂತರ್ಯವನ್ನು ಅರಿತು ಅವನ ಕರ್ತವ್ಯವನ್ನು ನಿರ್ವಹಿಸಿದರೆ ಆಗ ಅವನು ನಿಜವಾಗಿ ಮನುಷ್ಯನಾಗುತ್ತಾನೆ. ವಿದ್ಯಾಭ್ಯಾಸದಲ್ಲಿ ನಮ್ಮ ಸಮಾಜದ ಪದ್ಧತಿಯಲ್ಲಿ ಸಾಕಷ್ಟು ಪ್ರಯತ್ನ ಆಗಲಿಲ್ಲವೆಂದು ತಜ್ಞರು ಹೇಳುತ್ತಾರೆ. ಆದ್ದರಿಂದ ತಮ್ಮ ಕೈಲಾದಮಟ್ಟಿಗೂ ಶ್ರಮ ವಹಿಸಿ ಕೆಲಸ ಮಾಡಿದರೆ, ಅವರನ್ನು ದಕ್ಷರೆಂದು ಕರೆಯುತ್ತಾರೆ ಇದು ಲೇಟೆಸ್ಟ್ ಪಾಲಿಸಿ. ಕೊಟ್ಟಿದ್ದು ಮಾಡು. ಶಕ್ತಿ ಮೀರಿ ಮಾಡಿದರೆ, ಅವನ ಮನಸ್ಸಿಗೆ ಅವನು ಮಾಡುವ ಕರ್ತವ್ಯ ಸರಿ ಎನ್ನಿಸುವಷ್ಟು ಮಾಡಿದರೆ ಅವನು ದೇವರ ದೃಷ್ಟಿಯಲ್ಲಿಯೂ ದಕ್ಷನಾಗುತ್ತಾನೆ. ಇಲ್ಲದೇ ಕೇವಲ ಒಂದು ನೆಪಕೋಸ್ಕರ ಕೆಲಸ ಮಾಡುವವರು, ಹೀನ ಸಂಪ್ರದಾಯ ಮನೋವೃತ್ತಿಯನ್ನು ಹೊಂದಿರುವವರು ಯಾವತ್ತು ಅವರ ಜೀವನದಲ್ಲಿ ಏಳಿಗೆಯಾಗುವುದಕ್ಕೆ ಸಾಧ್ಯವಿಲ್ಲ ಉದಾಹರಣೆಗೆ ಹೇಳುವುದಾದರೆ ಒಂದು ಮಗುವು ಬಾವಿಗೆ ಬಿದ್ದದ್ದನ್ನು ನೋಡಿ ಕಿರುಚಿಕೊಂಡು ಬೇರೆಯವರು ಬಂದು ಆ ಮಗುವನ್ನು ಉಳಿಸುವುದಕ್ಕೆ ಅವಕಾಶಮಾಡಿಕೊಟ್ಟರೂ, ಅದೂ ಸಹ ಅವನ ಕರ್ತವ್ಯ ನಿರ್ವಹಣೆ ಮಾಡಿದಂತಾಗುತ್ತದೆ. ಅದೇ ಒಬ್ಬ ಮನುಷ್ಯ ಒಂದು ಮಗುವು ಬಾವಿಗೆ ಬಿದ್ದುವನ್ನು ನೋಡಿ ಅದನ್ನು ಉಳಿಸುವುದಕ್ಕೆ ಪ್ರಯತ್ನಪಡದೆ ಹೋಗಿ ಅಲ್ಲಿ ಯಾರಿಗೋ ಗೊತ್ತಾದ ಮೇಲೆ ಕೇಳಿದರೆ ನಾನು ಬರುವಾಗ ಮಗುವು ಬಾವಿಗೆ ಬೀಳುವುದರಲ್ಲಿತ್ತು, ಆದರೆ ಅದನ್ನು ನೋಡಿ ಯಾರಿಗಾದರೂ ಹೇಳಿದರೆ ಆ ಮಗುವನ್ನು ನೀನೇ ಬಾವಿಗೆ ತಳ್ಳಿದೆಯೆಂದು ನನ್ನಮೇಲೆ ಬರಬಹುದೆಂದು ಬಂದು ಬಿಟ್ಟೆ ಎಂದು ಹೇಳುವವನನ್ನು ಮನುಷ್ಯನೆಂದು ಕರೆಯುತ್ತೀರಾ ಹೇಳಿ ? ಇಂಥ ನೀಚವಾದ ಸಂಪ್ರದಾಯ ಬೆಳೆಸಿಕೊಂಡರೆ ಇದಕ್ಕೆ ಏನು ಹೇಳಬೇಕು ? ಇಂಥ ಪ್ರಜೆಗಳಿಂದ ನಮ್ಮ ದೇಶಕ್ಕೆ ಎಷ್ಟು ಒಳ್ಳೆಯದನ್ನು ನಿರೀಕ್ಷೆ ಮಾಡಬಹುದು. ನಮಗೆ ಒಳ್ಳೆಯ ಸರ್ಕಾರ ಬೇಕು ಎಂದು ಹೇಳುತ್ತೇನೆ.

ಇಂಥ ಪ್ರಜೆಗಳಿಂದ ಸರ್ಕಾರ ನಿರ್ಮಾಣವಾದರೆ ಒಳ್ಳೆಯ ಸರ್ಕಾರ ಹೇಗೆ ಬರಲಿಕ್ಕೆ ಸಾಧ್ಯ ಎಂದು ಕೇಳುತ್ತೇನೆ. ಅದಕ್ಕೋಸ್ಕರವಾಗಿ ನಮ್ಮ ಹಿಂದಿನ ರಾಜ್ಯಪಾಲರು ಹೇಳಿದ್ದಾರೆ ಚೇಂಜ್ ಫಾರ್ ದಿ ಬೆಟರ್ ಎಂದು. ಇದು ನಮ್ಮ ಎಲ್ಲರ ಜವಾಬ್ದಾರಿ ಇದೆ. ಯಾವ ಪಾರ್ಟಿಯ ಪಾಲಿಸಿಯೇ ಇರಲಿ ಅದು ಬೇರೆ ವಿಷಯ ನಾನು ಮೂರು ಅರ್ಲ 18 ಎಂದು ಹೇಳಿದರೆ ಅದೇ ಅಪೋಸಿಷನ್ ಸದಸ್ಯರು 3-6-20 ಎಂದು ಹೇಳುವುದಕ್ಕೆ ಬರುವುದಿಲ್ಲ. ಒಳ್ಳೆಯದನ್ನು ಒಳ್ಳೆಯದು ಎಂದು ಹೇಳುವುದು ಎಲ್ಲರ ಕರ್ತವ್ಯ. ಆ ಮನೋಭಾವ ನಮ್ಮೆಲ್ಲರಲ್ಲಿಯೂ ಬೆಳೆಯಬೇಕು ಎಂದು ಹೇಳುತ್ತೇನೆ. ಯಾವುದೇ ಒಂದು ಕುಟುಂಬಕ್ಕೆ ನ್ಯಾಯವಾದ ಬೇಡಿಕೆ ಇರುತ್ತದೆ ಅದನ್ನು ಕಾನೂನು ಕೊಡಲೇ ಬೇಕು. ಈಗ ಉದಾಹರಣೆಗೆ ತೆಗೆದುಕೊಂಡರೆ ಸೈಟ್ ಇಲ್ಲದವರಿಗೆ ಸೈಟ್ ಕೊಟ್ಟರೆ ಆ ಸೈಟಿನಲ್ಲಿ ಮನೆ ಕಟ್ಟಿಕೊಳ್ಳುವ ಚೈತನ್ಯವಿದ್ದರೆ ಸರಿ ಇಲ್ಲವಾದರೆ ಅವನು ಮನೆ ಕಟ್ಟಿಕೊಳ್ಳಲಿಕ್ಕೆ ಮನಸ್ಸು ಬೇಕು. ಈಗ ಏನು ಫಾರ್ಮುಲ ಮಾಡಿಕೊಂಡು ಸೈಟ್ ಟು ದಿ ಸೈಟ್ ಲೆಸ್ ಎಂದು ಹೇಳಿದರೆ ಆ ಸೈಟುಕೊಟ್ಟಿರುವ ಕಡೆ ಎಷ್ಟು ಮನೆಗಳು ನಿರ್ಮಾಣವಾಗಿವೆ ಎಂಬುದನ್ನು ನೋಡಬೇಕು. ಯಾವುದು ಸರಿ ಅದನ್ನು ತಪ್ಪು ಎಂದು ಹೇಳುವುದಕ್ಕೆ ಬರುವುದಿಲ್ಲ. ಸರಿ ಇರುವುದನ್ನು ತಪ್ಪು ಎಂದು ಹೇಳುವುದು ತಪ್ಪು. ಈ ದುರಾದೃಷ್ಟ ಯಾರಿಗೋಸ್ಕರ ಬಂತು. ಒಂದು ಕುದುರೆಗೆ ನಾಲ್ಕು ಕಾಲುಗಳು ಇವೆಯೆಂದರೆ ಇಲ್ಲ ಮೂರು ಕಾಲು ಮಾತ್ರ ಇದೆಯೆಂದು ಹೇಳಿದರೆ ಹೇಗೆ? ಯಾರು ಕಪ್ಪು ಹಣ ಇಟ್ಟಿದ್ದರೋ ಯಾರು ಬಡವರನ್ನು ಶೋಷಣೆ ಮಾಡುತ್ತಿದ್ದರೋ ಅವರನ್ನು ಬಲಿಹಾಕ ಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಜೆ. ಪಿ. ಯವರು ಕಪ್ಪು ಹಣ ಇಟ್ಟುಕೊಂಡಿರುವವರನ್ನು ಬಿಟ್ಟು ಬಿಡಿ ಎಂದು ಹೇಳಿದ್ದಾರೆ? ಜೆ. ಪಿ. ಯವರು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾದದ್ದನ್ನು ಹೇಳಿದ್ದಾರೆ? ಏತಕ್ಕೆ ಬಂತು ತುರ್ತುಪರಿಸ್ಥಿತಿ?

ಶ್ರೀ ಕೆ. ಪ್ರಭಾಕರ್.—ಒಟ್ಟಿನಲ್ಲಿ ಹೇಳುವುದಾದರೆ ಜನರಲ್ಲಿ ಇರುವ ಮನೋಧರ್ಮ ಬದಲಾಗಬೇಕು. ಒಂದು ಕಡೆಯಲ್ಲಿ ಒಬ್ಬರು ಛತ್ರಿ ಹಿಡಿದುಕೊಂಡು ಮೂರು ಜನರು ನೆನೆಯದೆ ಅದರ ಪಕ್ಕದಲ್ಲಿ ಕೊಡೆಯಿಲ್ಲದೆ 6 ಜನರು ನೆನೆಯುತ್ತಿದ್ದರೆ ಅದನ್ನು ನೋಡಿಕೊಂಡು ಇರುವುದನ್ನು ನೋಡಿದರೆ ನಮ್ಮ ಮನಸ್ಸು ನೋಯುತ್ತದೆ. ಇನ್ನು ಪೋಲೀಸ್ ಠಾಣೆಗಳಿಗೆ ಹೋದರೆ ಅಲ್ಲಿ ಒಂದು ಬೋರ್ಡನ್ನು ಹಾಕಿಕೊಂಡಿರುತ್ತಾರೆ ಯಾರು ಕಾನೂನನ್ನು ಗೌರವಿಸುತ್ತಾರೆ ಅವರನ್ನು ನಾವು ಗೌರವಿಸುತ್ತೇವೆ ಎಂದು ಆ ಫಲಕದಲ್ಲಿ ಇರುತ್ತದೆ? ಅದರೆ ಅದು ಎಷ್ಟರಮಟ್ಟಿಗೆ ಕಾರ್ಯಾಚರಣೆಯಲ್ಲಿ ಪಾಲಿಸುತ್ತಿದ್ದಾರೆನ್ನುವುದು ಮುಖ್ಯ. ಫಲಕವನ್ನು ಮಾತ್ರ ಹಾಕಿಕೊಂಡರೆ ಸಾಲದು. ಸಾಮಾನ್ಯಜನರಿಗೆ ನ್ಯಾಯದೊರಕುವುದು ಕಷ್ಟ. ಇದನ್ನು ಮಾತ್ರ ನಾನು ತೀಕ್ಷ್ಣವಾಗಿ ಹೇಳುತ್ತೇನೆ. ಇದನ್ನು ಹೋಂಮಿನಿಸ್ಟರು ಕೇಳಿದರೆ ಒಳ್ಳೆಯದು. ಈ ತುರ್ತುಪರಿಸ್ಥಿತಿಯ ನೆಪದಲ್ಲಿ ಸರ್ಕಾರ ಇವೆಲ್ಲವನ್ನು ಸರಿಪಡಿಸಬೇಕು. ಯಾವ ಸಮಾಜಘಾತುಕ ಶಕ್ತಿಗಳಿವೆ ಅವನ್ನು ಮೊದಲು ಮಟ್ಟಹಾಕಬೇಕು. ಅವರು 7 ಅಡಿಯೇ ಇರಲಿ ಮುಖದ ತುಂಬ ಮೀಸೆ ಇರಲಿ ಅಥವಾ ವಜ್ರದ ಅಂಗಿ ಹಾಗಿರಲಿ ಅವರು ತಪ್ಪು ಮಾಡಿದ ಕೂಡಲೇ ಅವರಿಗೆ ಸರಿಯಾದ ಶಿಕ್ಷೆಯನ್ನು ವಿಧಿಸಲೇ ಬೇಕು. ಇದರ ಬಗ್ಗೆ ಸರ್ಕಾರ ಏನು ಮಾಡುವುದಿಲ್ಲ ಎಂದು ಹೇಳುವಂತೆ ಆಗಬಾರದು.

MR DEPUTY SPEAKER; The hon. member may continue his speech tomorrow.

Now the House stands adjourned to meet again tomorrow at 1 00 p.m.

The House adjourned at Six of the Clock to meet again at one of the Clock on Friday, the 6th February 1976